ಜಾಜ್ವಲ್ಯೇತೇ ವಿಷ್ಣುವಾಯೂ ಸ್ಮ ದೇವೌ ವೇದವ್ಯಾಸಾನಂದತೀರ್ಥಾಭಿಧಾನೌ

# ಶ್ರೀವ್ಯಾಸ ಮಧ್ವ

(ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಮಾಸಪತ್ರಿಕೆ)
ಪಾಜಕ, ೮೯/೨೪, ೩ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ,
ಬೆಂಗಳೂರು-೧೯. ದೂರವಾಣಿ : (080) 26602802; 26611011

ಸಂಪಾದಕರು : ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ

ಸಂಪುಟ -೨ ಸಂಚಿಕೆ –೧೧ ವಿರೋಧಿ (ಪುಷ್ಯ-ಮಾಘ) ಜನವರಿ ೨೦೧೦

## ಶ್ರೀವ್ಯಾಸಸೂಕ್ತಿ

**ವಿಪ್ರಾ ಮಂತ್ರವಿದೋ ಯುಕ್ತಾಸ್ತೈರ್ಯಾಃ ಪ್ರೋಕ್ತಾಸ್ತಥಾಽಽಶಿಷಃ ।**
**ತಾ ನಿಷ್ಫಲಾ ಭವಿಷ್ಯಂತಿ ನ ಕದಾಚಿದಪಿ ಸ್ಫುಟಮ್ ॥**

– ಶ್ರೀಮದ್ಭಾಗವತ (೧೦/೧/೧೬)

ಮಂತ್ರ ಬಲ್ಲ, ಯೋಗಿಗಳಾದ ವಿಪ್ರರ ಆಶೀರ್ವಚನಗಳು ಎಂದಿಗೂ ವ್ಯರ್ಥವಾಗಲಾರವು ಎಂಬುದು ನಿಶ್ಚಿತ.

## ಶ್ರೀಮಧ್ವಸೂಕ್ತಿ

**ಅಸಂಶಯಃ ಸಂಶಯಚ್ಛಿದ್ಗುರುರುಕ್ತೋ ಮನೀಷಿಭಿಃ ।**
**ಅನ್ಯೇಽಪಿ ಸ್ವಾತ್ಮನೋ ಮುಖ್ಯಾಃ ಕ್ರಮಾದ್ಗುರವ ಈರಿತಾಃ**

– ಮಹಾಭಾರತತಾತ್ಪರ್ಯನಿರ್ಣಯ (೧/೧೨೦)

ಸಂಶಯರಹಿತನಾದವನು, ಇತರರ ಸಂಶಯಗಳನ್ನು ಪರಿಹರಿಸುವವನು ಗುರು ಎಂಬುದಾಗಿ ಜ್ಞಾನಿಗಳು ಹೇಳುವರು; ಅದರಂತೆ ತನಗಿಂತ ಮಿಗಿಲಾದವರೆಲ್ಲ ಕ್ರಮವಾಗಿ ಗುರುಗಳು ಎನ್ನಿಸುವರು.

# ವಿಷಯಾನುಕ್ರಮಣಿಕೆ


| | | |
|---|---|---|
| ೧. | ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ | ೧ |
| ೨. | ಹರಿದಾಸರ ಸೂಕ್ತಿರತ್ನಗಳು | ೩ |
| ೩. | ಗಾಯತ್ರೀಭಾಷ್ಯರೂಪಃ ಅಸೌ-೧೧ : ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು | ೪ |
| ೪. | ಶ್ರೀಕೃಷ್ಣನಾಮಾರ್ಥಚಂದ್ರಿಕಾ-೧೦ : ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು | ೬ |
| ೫. | ಆನಂದತೀರ್ಥರು : ಶ್ರೀಶ್ರೀವಿಶ್ವಪ್ರಸನ್ನತೀರ್ಥಶ್ರೀಪಾದರು | ೧೧ |
| ೬. | ಸಂಪಾದಕೀಯ – ಅರ್ಥ ಕಳೆದುಕೊಳ್ಳುತ್ತಿರುವ ವಾಕ್ಯಾರ್ಥಗೋಷ್ಠಿಗಳು | ೧೨ |
| ೭. | ಲೋಕನ್ಯಾಸಾನುಸಂಧಾನ : ಶ್ರೀ ಸಗ್ರಿ ರಾಘವೇಂದ್ರ ಉಪಾಧ್ಯಾಯ | ೧೪ |
| ೮. | ಶ್ರೀವಿಜಯದಾಸರ ಸುಳಾದಿಯಲ್ಲಿ ವಿರಾಡ್ರೂಪವರ್ಣನೆ : – ಡಾ ‖ ವ್ಯಾಸನಕೆರೆ ಪ್ರಭಂಜನಾಚಾರ್ಯ | ೧೭ |
| ೯. | ಮಧ್ವಸಿದ್ಧಾಂತದ ಹಿರಿಮೆಗರಿಮೆಗಳು : – ಡಾ ‖ ವ್ಯಾಸನಕೆರೆ ಪ್ರಭಂಜನಾಚಾರ್ಯ | ೧೯ |
| ೧೦. | ನವಪ್ರಕಾಶಿತ ಮಾಧ್ವಗ್ರಂಥಗಳು | ೪೧ |
| ೧೧. | ಮಾಸದ ವಿಶೇಷಗಳು | ೪೩ |


*****

## ಚಂದಾ ವಿವರ

ಆಜೀವಚಂದಾ : ರೂ ೫೦೦೦
ಪಂಚವಾರ್ಷಿಕ ಚಂದಾ : ರೂ ೫೦೦; ಬಿಡಿ ಪ್ರತಿ : ರೂ ೧೦

ವಿ.ಸೂ.:–

೧) ರೂ.೧೫,೦೦೦ಗಳನ್ನು ನೀಡಿ ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯ-ನಿರ್ಣಯ, ಹರಿಕಥಾಮೃತಸಾರ, ಸುಮಧ್ವವಿಜಯ, ಸಂಗ್ರಹರಾಮಾಯಣ ಮೊದಲಾದ ಪ್ರಕಾಶನದ ಎಲ್ಲಾ ಉಪಲಬ್ಧಗ್ರಂಥಗಳೂ ಉಚಿತ.

೨) ಅದರೊಂದಿಗೆ ೫ ವರ್ಷಗಳ ಕಾಲ ಶ್ರೀವ್ಯಾಸಮಧ್ವಮಾಸಪತ್ರಿಕೆಯನ್ನೂ ಸಹ ಉಚಿತವಾಗಿ ನೀಡಲಾಗುವುದು.

# ಹರಿದಾಸರ ಸೂಕ್ತಿರತ್ನಗಳು

(ದಾಸಸಾಹಿತ್ಯ - ವ್ಯಾಸಸಾಹಿತ್ಯದ ಕನ್ನಡ ಆವಿಷ್ಕರಣ. ಕನ್ನಡಕ್ಕೆ ವ್ಯಾಸಪೀಠದ ಭಾಗ್ಯವನ್ನು ನೀಡಿದ ಹಿರಿಮೆ ಹರಿದಾಸಸಾಹಿತ್ಯದ್ದು. ಅದರಿಂದ ಆಯ್ದ ಸೂಕ್ತಿರತ್ನಗಳನ್ನು ಪ್ರತಿತಿಂಗಳೂ ಈ ಅಂಕಣದಲ್ಲಿ ಕ್ರಮವಾಗಿ ನೀಡಲಾಗುವುದು.)

## ಶ್ರೀವ್ಯಾಸರಾಜರ ಸೂಕ್ತಿರತ್ನಗಳು

ರಾಗ : ಸಾವೇರಿ ತಾಳ: ಆದಿ

ಹರಿದಾಸರ ಸಂಗಕೆ ಸರಿಯುಂಟೆ ॥ ಪ ॥
ಗುರುಕರುಣಕೆ ಇನ್ನು ಪಡಿಯುಂಟೆ ದೇವ ॥ ಅ ॥

ದಾವಾನಲವ ದಾಟಿಸಿ ಕಾಡಾನೆಯ
ದೇವಗಂಗೆಗೆ ತಂದು ಹೊಗಿಸಿದಂತೆ।
ಆವರಿಸಿರುವ ಷಡ್ವರ್ಗ ತಪ್ಪಿಸಿ ಎನ್ನ
ಶ್ರೀವರನ ಕರುಣಾಮೃತದಿಂದ ತೋಯಿಸುವ ॥೧॥

ಕಂದಿ ಬೇಸಗೆಯಲ್ಲಿ ನೊಂದ ಚಕೋರವ
ಇಂದುಬಿಂಬದ ಮುಂದೆ ನಿಲಿಸಿದಂತೆ।
ಬಂಧಹಂಮಮತೆಯ ನಂದಿಸಿ ಎನ್ನ ಗೋ-
ವಿಂದನ ಚರಣಸನ್ನಿಧಿಗೆ ಸೇರಿಸುವ ॥೨॥

ಕುರುಡಗೆ ದಿವ್ಯ ಅಂಜನ ಹಚ್ಚಿ ಕಣ್ಣಿತ್ತು
ತೆರ ತೆರದಲಿ ಉಂಬ ನಿಧಿಯನಿತ್ತಂತೆ।
ಪರಮ ಮೂರ್ಖನಾದ ಎನಗೆ ಜ್ಞಾನವನಿತ್ತು
ನರಹರಿಯ ಸನ್ನಿಧಿಯಲಿರುವ ದಾರಿಯ ತೋರೊ ॥೩।

ಬಲೆಯ ಹಾರಿದ ಎಳೆ ಹುಲ್ಲೆಯ ಮರಿಗಳಿಗೆ
ನಲವಿಂದಲಿ ತಾಯ ತೋರಿಸಿದಂತೆ।
ಬಲು ಇಂದ್ರಿಯಗಳೆಂಬ ಸೆರೆಯ ಬಿಡಿಸಿ
ನಳಿನನಾಭನ ಸನ್ನಿಧಿಯ ತೋರಿಸುವ ॥೪॥

ಎಡೆಯಿಲ್ಲದೆ ಹೆದ್ದೊರೆಯಲಿ ಪೋಪನ
ಪಿಡಿದೆತ್ತಿ ತಡಿಗೆ ಸೇರಿಸಿದಂತೆ।
ಕಡೆಗೆಟ್ಟು ಭವಾಬ್ಧಿಯ ನಡುವೆ ಸಿಲುಕಿದೆನ್ನ
ತಡೆಯದೆ ಕೃಷ್ಣನಂಘ್ರಿಯ ಸೇರಿಸುವ ॥೫॥

*****



# ಗಾಯತ್ರೀಭಾಷ್ಯರೂಪಃ ಅಸೌ - ೧೧

(ಅನುಗ್ರಹಲೇಖನ)

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು
ಪಲಿಮಾರು ಮಠ, ಉಡುಪಿ.

**ತತೋ ನಿವೃತ್ತಾ ಹ್ಯಬುಧಾಃ ಸ್ತ್ರಿಯಃ ಅರ್ಭಕಾಃ**

ದೇವರಿಗೆ-ದೇವತೆಗಳಿಗೆ ಕೊಟ್ಟರೆ ಅದನ್ನು ತಾವು ಇಟ್ಟುಕೊಳ್ಳುವುದಿಲ್ಲ. ಅದಕ್ಕೆ ಇನ್ನಷ್ಟು ಸೇರಿಸಿಕೊಡುವವರು ಅವರು. ಸಾಧ್ಯವಾದರೆ ತುಂಬಿಸುವವರು ಅವರು. ಪರೀಕ್ಷಿತ್ ರಾಜರು ತನ್ನ ಮಸ್ತಕವನ್ನು ನೀಡಿದರೆ ಶುಕಾಚಾರ್ಯರು ಅದನ್ನು ತುಂಬಿಸುತ್ತಾರೆ. ಪಾತ್ರೆಯಲ್ಲೇ ತೂತಿದ್ದರೆ ಅದಕ್ಕೆ ಪರಿಹಾರ ಕಷ್ಟ. ಪಾತ್ರೆಗೆ ಬಾಯಿ ಇಲ್ಲವಾದರೆ ತುಂಬಿಸುವುದಾದರೂ ಹೇಗೆ. ಅದಕ್ಕೆಂದೇ ಶುಕರು ಬಂದರೆ ಸಂತಸಪಟ್ಟು ಸ್ವಾಗತಿಸಿದವರುಂಟು. ತನ್ನಲ್ಲಿದ್ದದನ್ನು ಹಂಚಿಕೊಂಡವರುಂಟು. ಅವರಿಂದ ಅನುಗ್ರಹ ಪಡೆದವರುಂಟು. ಅದಕ್ಕಿಂತಲೂ ಸೋಜಿಗವೆಂದರೆ ಅವರಿಗೆ ಏನೂ ಕೊಡದೆ ಅವರಿಂದ ಏನನ್ನೂ ಪಡೆಯದೇ ವಾಪಸ್ಸು ಹೊದ್ರಲ್ಲ ಎನ್ನುವುದು. ಶುಕರ ಬಗ್ಗೆ ಏನೇನೂ ಅರಿಯದ ಅಜ್ಞಾನಿಗಳು ಅವರು. ಪರದ ಅರಿವಿಲ್ಲದವರು. ಇಹವೇ ಸರ್ವಸ್ವ ಎನ್ನುವ ಭ್ರಮೆಯಲ್ಲಿಯೇ ಮುಳುಗಿದವರು ಅವರು. ಶುಕರು ಜ್ಞಾನಪೀಠವನ್ನು ಅಲಂಕರಿಸಿದರೆ ಮರುಕ್ಷಣದಲ್ಲಿ ಅಲ್ಲಿಂದ ಕಾಲ್ಕಿತ್ತ ಮಂದಿ ಇವರು. ಮುಂದಿನ ಗೊತ್ತು ಗುರಿಯ ಅರಿವಿರದ ಪಾಮರರು ಇವರು.

**ಸ್ತ್ರಿಯಃ**

ಹೆಣ್ಮಕ್ಕಳು ಅಷ್ಟೇ. ಓದು-ಬರಹ ಬರದವರು. ಅರಿವಿನ ಹಾದಿಯಿಂದ ದೂರ ಸರಿದವರು. ಇವರೂ ಶುಕರ ಅರಿವಿನ ಹರವನ್ನು ಅರಿಯದವರು. ಹಾಗಾಗಿ ಮುಗ್ಧೆಯರೂ ಮರಳಿದರು.

**ಅರ್ಭಕಾಃ**

ಬಾಲಕರ ಪಾಡೇನು? ಇನ್ನೂ ಮಕ್ಕಳಾಟಿಕೆಯ ವಯಸ್ಸು. ಪತ್ಯೇತರ ಚಟುವಟಿಕೆಗಾಗಿ ಚಡಪಡಿಸಿವವರು ಇವರು. ಪಾಠಕ್ಕಿಂತ ಆಟ-ಪಾಠ-ಓಟಗಳ ಜಂಜಾಟದಲ್ಲಿಯೇ ಸಿಲುಕಿದವರು. ಶುಕರು ಏರಿದ ಎತ್ತರಕ್ಕೆ ಏರಲಾರದವರು ಇವರು. ಹಾಗಾಗಿ ಶುಕರ ಹಾದಿಯಲ್ಲೇ ಸುಳಿಯದ ವರ್ಗ ಇದು. ಈ ಬಾಲಸಂಘವೂ ಶುಕರ ಜ್ಞಾನಸತ್ರದಲ್ಲಿ ಪಾಲುಗೊಳ್ಳದು. ಮಕ್ಕಳೂ ಚೆಲ್ಲಾಪಿಲ್ಲಿಯಾದರು.

''ಹೆಣ್ಮಕ್ಕಳೆಲ್ಲಾ ಅನರ್ಹರೆ?''

ಹೆಣ್ಮಕ್ಕಳನ್ನು ಅಬುಧರೆಂದು ಮೂದಲಿಸುವುದು ಯಾವ ನ್ಯಾಯ? ಶುಕರು ವ್ಯಾಸಪೀಠವೇರಿದಾಗ ಹೆಂಗಳೆಯರು ಹಿಂದೆ ಸರಿದರೆಂದರೆ ಒಪ್ಪುವ ಮಾತೇ? ಹೆಣ್ಮಕ್ಕಳು ಜ್ಞಾನಶೂನ್ಯರೇ? ಅವರಿಗೆ ಜ್ಞಾನದಲ್ಲಿ ಅವಕಾಶವೇ ಇಲ್ಲವೇ? ''ತಂತ್ರಜ್ಞಾನೇ ಅಧಿಕಾರಿತಾ'' ಎಂಬ ವ್ಯಾಸವಾಣಿಯನ್ನು ಉದಾಹರಿಸಿದ ಶ್ರೀಮದಾಚಾರ್ಯರಿಗೆ ಇದೆಷ್ಟು ಸಮ್ಮತವಾದೀತು? ಪರೀಕ್ಷಿತರಂತಹವರಿಗೆ ನೇರ ಹೇಳಿದಾಗ ಪರೋಕ್ಷವಾಗಿ ಹೆಣ್ಮಕ್ಕಳೂ ಆಲಿಸಬಹುದು ತಾನೇ? ಭಾಗವತ ಪ್ರಾರಂಭವಾದರೆ ಹೆಣ್ಮಕ್ಕಳನ್ನು ಓಡಿಸಬೇಕೆಂದು ಅರ್ಥವೇ?

ಶ್ರೀಮಧ್ವಾಚಾರ್ಯರು ನೀಡಿದ ಚಿಂತನೆ ಅಪೂರ್ವ. ಅದಕ್ಕೆ ಇವರು ಜಗದ್ಗುರುಗಳು ''ಸ್ತ್ರೀ-ನಾರೀ-ವನಿತಾ'' ಈ ಎಲ್ಲಾ ಶಬ್ದಗಳಿಗೆ ಶಾಸ್ತ್ರೀಯ ಭಾಷೆಯಲ್ಲಿ ಹೆಣ್ಣು ಎಂಬ ಅರ್ಥಕ್ಕಿಂತ ಬೇರೆಯೇ ಅರ್ಥವಿದೆ. ''ವನಿತಾ'' ಮುಂತಾದ ಶಬ್ದಗಳಿಗೆ ಭಗವಂತನ ಬಗ್ಗೆ ಬರುವ ''ವಿಪರೀತಮತಿ'' ಎಂದು ಅರ್ಥವಂತೆ. ''ಕೇಶವೇ ತ್ವನ್ಯಥಾ ಬುದ್ಧಿಃ ಸೈವ ವನಿತಾ ಮತಾ'' ಬ್ರಹ್ಮ-ರುದ್ರಾದಿಗಳಿಗೆ ನಿಯಾಮಕವಾದ ಶ್ರೀಹರಿಯೇ ಕೇಶವ. ಇಂತಹ ಸರ್ವೋತ್ತಮನಾದ ಕೇಶವನನ್ನು ತಪ್ಪಾಗಿ ತಿಳಿಯುವುದೇ ''ಸ್ತ್ರೀ''ಶಬ್ದದ ರಹಸ್ಯ ಅರ್ಥ. 'ಅಬುಧ' ಎಂದರೆ 'ಬುಧ ಅಲ್ಲ' ಎಂದಿಷ್ಟೇ ಅರ್ಥವಲ್ಲ; ''ಅಸುರ'' ಎಂಬಂತೆ ಬುಧ ವಿರೋಧಿ. ಸರಿಯಾದ ಜ್ಞಾನಕ್ಕೆ ವಿರೋಧಿ ಎಂದೇ ಅರ್ಥ. ಮಹಾಜ್ಞಾನದ ಮೇರು ಶ್ರೀಶುಕರು ಬಂದರೆ, ತತ್ವಜ್ಞಾನವೇ ಮೂರ್ತಿಮತ್ತಾಗಿ ಬಂದಂತೆ. ಸರಿಯಾದ ತಿಳುವಳಿಕೆ ಬಂದರೆ ವಿಪರೀತಜ್ಞಾನ ಇದ್ದೀತೇ? ವಿಪರೀತಜ್ಞಾನವೆಂಬ ''ಸ್ತ್ರೀಯರು'' ಜ್ಞಾನದ ಶುಕರನ್ನು ನೋಡಿದಾಗ ಬೆನ್ನ ತಿರುಗಿಸಿ ಕಾಲ್ಕಿತ್ತರು ಅನ್ನುವುದು ಅತ್ಯಂತ ಸಮಂಜಸ ತಾನೇ?

''ಅರ್ಭಕ'' ಅಂದರೂ ಮಕ್ಕಳೆಂದರ್ಥವಲ್ಲ. ತತ್ವಜ್ಞಾನದ ಅರ್ಹತೆಯಿಲ್ಲದ ಅಯೋಗ್ಯರೆಂದರ್ಥ. ಅದಕ್ಕೆಂದೇ ಅನಧಿಕಾರಿಗಳೂ ಹೌದು. ಅದಕ್ಕೆ ಶುಕರ ಭಾಗವತದ ಜ್ಞಾನಕ್ಕೆ ಮುಖ ತಿರುಗಿಸಿ ಬೆನ್ನು ಹಾಕಿ ಹೋದವರು. ಇದು ಸಹಜವೇ. ಅಯೋಗ್ಯರಿಗೆ ಅರಗದ, ರುಚಿಸದ, ಅಪೂರ್ವ ಅಮೃತದ್ರವದ ಶ್ರೀಭಾಗವತವು ಅಯೋಗ್ಯರಿಗೆ ರುಚಿಸೀತೇ?

ಇದೂ ಗಾಯತ್ರಿಯ ಭಾಷ್ಯ - ಓಂಕಾರದ ಅರ್ಥ. ಓಂಕಾರದ ಮೂಲ ''ಅವ'' ಎಂಬ ಕ್ರಿಯಾಪದ. ವಿಪರೀತಜ್ಞಾನದಿಂದ-ಅಯೋಗ್ಯರಿಂದ ಶ್ರೀಶುಕರಲ್ಲಿ ನಿಂತು ರಕ್ಷಣೆ ಮಾಡಿದವನಾದುದರಿಂದಲೇ ಭಗವಂತ ''ಓಂ'' ''ಅವತಿ'' ರಕ್ಷತಿ ಇತಿ ಓಂ

* * * * *



# ಶ್ರೀಕೃಷ್ಣನಾಮಾರ್ಥಚಂದ್ರಿಕಾ - ೧೦

(ಅನುಗ್ರಹಲೇಖನ)

**ಪರಮಪೂಜ್ಯ ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು**
**ಭಂಡಾರಕೆರೆ ಮಠ**

ಅಥವಾ ಶ್ರೀಃ ಕೃಷ್ಣಾಯಾಂ (ಪೃಥಿವ್ಯಾಂ) ಯೇನ ಸಃ ಶ್ರೀಕೃಷ್ಣಃ ಇತಿ ವಿಗ್ರಹಮನುಸೃತ್ಯ ಶ್ರೀಕೃಷ್ಣಶಬ್ದಾರ್ಥಃ ವ್ಯಾಖ್ಯಾತುಂ ಶಕ್ಯತೇ ।

ಅತ್ರ ಶ್ರೀಶಬ್ದೇನ ಲೋಕತ್ರಯಶೋಭಾತಿಶಾಯಿಶೋಭಾವಿಶೇಷಃ ಕಥ್ಯತೇ । ಸ ಚ ಕೃಷ್ಣಾಯಾಂ ಯೇನ ಸಂಪಾದಿತಃ ಸ ಚ ದೇವಕೀಸೂನುಃ ಶ್ರೀಕೃಷ್ಣಶಬ್ದಿತಃ।

ಭಗವಾನ್ ದೇವಕೀನಂದನಃ ಪದ್ಮಧ್ವಜವಜ್ರಾಂಕುಶರೂಪಶುಭಚಿಹ್ನವಿರಾಜಿತ-ಸ್ವಚರಣಕಮಲಸ್ಪರ್ಶೇನ ''ಕೃಷ್ಣಾ''ಶಬ್ದಿತಾಂ ಪೃಥಿವೀಂ ಶುಭಚಿಹ್ನಸಮಲಂಕೃತಾಂಗೀಂ ವಿಧಾಯ, ತಾಂ ಸ್ವರ್ಗಾದಿಲೋಕತ್ರಯಶೋಭಾತಿಶಾಯಿಶೋಭಾವಿಶೇಷಂ ನೀತವಾನ್ । ತಥಾ ಚೋಕ್ತಂ ಭಾಗವತೇ ಪ್ರಥಮಸ್ಕಂಧೇ ಸ್ವಯಂ ಧರಣಿದೇವ್ಯಾ -

**ತಸ್ಯಾಹಮಬ್ಜಕುಲಿಶಾಂಕುಶಕೇತುಕೇತೈಃ**
**ಶ್ರೀಮತ್ಪದೈರ್ಭಗವತಃ ಸಮಲಂಕೃತಾಂಗೀ ।**
**ತ್ರೀನತ್ಯರೋಚಮುಪಲಬ್ಧತಪೋವಿಭೂತಿಃ**
**ಲೋಕಾನ್ ಸ ಮಾಂ ವ್ಯಸೃಜದುಸ್ಮಯತೀಂ ತದಂತೇ ॥** ಇತಿ ।

ಪ್ರಥಿವ್ಯಾಃ ಸ್ವಭಾವತಃ ಕೃಷ್ಣವರ್ಣತ್ವಾತ್ ಕೃಷ್ಣಾ ಇತಿ ವ್ಯಪದೇಶಃ । ತಥಾ ಚೋಕ್ತಂ ಬ್ರಹ್ಮಸೂತ್ರಭಾಷ್ಯಸ್ಥವ್ಯೋಮಸಂಹಿತಾಯಾಮ್ -

**ರಕ್ತೋಽಗ್ನಿರುದಕಂ ಶುಕ್ಲಂ ಕೃಷ್ಣೈವ ಪೃಥಿವೀ ಸ್ವತಃ ।**

- ಇತಿ ಕಾರ್ಷ್ಣ್ಯಪ್ರಚುರಾ ಚ ಪೃಥಿವೀ ಇತಿ ಚಾಚಾರ್ಯಾಃ ।

ಅಥವಾ ಶ್ರೀಃ ಕೃಷ್ಣಾಯಾಂ ಯೇನ ಸಃ ಶ್ರೀಕೃಷ್ಣಃ ಎಂಬುದಾಗಿ ವಿಗ್ರಹವನ್ನು ಸ್ವೀಕರಿಸಿ ಶ್ರೀಕೃಷ್ಣನಾಮಾರ್ಥವನ್ನು ವ್ಯಾಖ್ಯಾನಿಸಬಹುದು.

ಇಲ್ಲಿ 'ಶ್ರೀ'ಶಬ್ದದಿಂದ ಮೂರು ಲೋಕಗಳ ಶೋಭೆಯನ್ನು ಮೀರಿಸುವ ಶೋಭಾವಿಶೇಷವನ್ನು ಸ್ವೀಕರಿಸಬೇಕು. ಅದು ''ಕೃಷ್ಣೆ'' ಎಂದು ಕರೆಯಲ್ಪಡುವ ಭೂಮಿಯಲ್ಲಿ ಭಗವಾನ್ ದೇವಕೀಪುತ್ರನ ಅನುಗ್ರಹದಿಂದ ಉಂಟಾಯಿತು. ಆದುದರಿಂದ ಆತನಿಗೆ ಶ್ರೀಕೃಷ್ಣ ಎಂಬ ನಾಮವು ಅನ್ವರ್ಥವಾಗಿದೆ.

ಆತನು ಪದ್ಮ-ಧ್ವಜ-ವಜ್ರ-ಅಂಕುಶರೂಪ ಶುಭಚಿಹ್ನೆಗಳಿಂದ ಶೋಭಿಸುವ ತನ್ನ ಪಾದಪದ್ಮದ ಸ್ಪರ್ಶಮಾತ್ರದಿಂದ ಶುಭಪಾದಚಿಹ್ನೆಗಳಿಂದ ಅಲಂಕೃತಗೊಳಿಸಿ ಲೋಕತ್ರಯದ ಶೋಭೆಯನ್ನು ಮೀರಿಸುವ ಶೋಭಾವಿಶೇಷವನ್ನು ''ಕೃಷ್ಣೆ'' ಎಂದು ಕರೆಯಲ್ಪಡುವ ಭೂದೇವಿಯಲ್ಲಿ ಉಂಟುಮಾಡಿದನು. ಭಾಗವತದ ಪ್ರಥಮಸ್ಕಂಧದಲ್ಲಿ ಸ್ವಯಂ ಧರಣೀದೇವಿಯ ಮಾತೇ ಈ ವಿಷಯವನ್ನೂ ಸ್ಪಷ್ಟಪಡಿಸುತ್ತದೆ.

ಭಗವಾನ್ ದೇವಕೀಪುತ್ರನ ಪದ್ಮ-ಅಂಕುಶ-ಧ್ವಜ-ವಜ್ರಚಿಹ್ನೆಗಳಿಂದ ಶೋಭಿಸುವ ಚರಣಸ್ಪರ್ಶಮಾತ್ರದಿಂದ ಶುಭಚಿಹ್ನೆಗಳಿಂದ ಅಲಂಕೃತ ಅಂಗವುಳ್ಳ ತಾನು (ಭೂದೇವಿ) ತಪೋವೈಭವದ ಫಲವಾಗಿ ಮೂರುಲೋಕಗಳನ್ನೂ ಶೋಭಾವಿಶೇಷದಿಂದ ಮೀರಿಸಿ-ದೆನು. ಜನರ ತಪೋಬಲವು ಕ್ಷಯವನ್ನು ಹೊಂದಿದಾಗ ಭಗವಾನ್ ದೇವಕೀನಂದನನು ತನ್ನನ್ನೂ(ಭೂಮಿಯನ್ನೂ) ಕೂಡಾ ಪರಿತ್ಯಾಗ ಮಾಡಿದನು. ಆದುದರಿಂದ ತಾನು ಈವಾಗ ಶೋಭಾವಿಶೇಷವನ್ನು ಕಳೆದುಕೊಂಡು ದುಃಖಿತಳಾಗಿದ್ದೇನೆಂದು ಉದ್ಗರಿಸಿದ್ದಾಳೆ.

ಭೂಮಿಗೆ ಸ್ವಾಭಾವಿಕವಾದ ಕಪ್ಪು ಬಣ್ಣವಿರುವುದರಿಂದ ''ಕೃಷ್ಣಾ'' ಎಂಬ ನಾಮವು ಅನ್ವರ್ಥವಾಗಿದೆ. ಬ್ರಹ್ಮಸೂತ್ರಭಾಷ್ಯದಲ್ಲಿ ಉದಾಹರಿಸಿದ ''ಕೃಷ್ಣೈವ ಪೃಥಿವೀ ಸ್ವತಃ'' ಎಂಬ ವ್ಯೋಮಸಂಹಿತಾವಚನದಿಂದ ಸ್ವಾಭಾವಿಕ ಕಪ್ಪುಬಣ್ಣದ ಪೃಥಿವಿಗೆ ಕೃಷ್ಣೆ ಎಂಬ ನಾಮವು ಅನ್ವರ್ಥವೆಂದು ಹೇಳಬಹುದು.

*****

ಅಥವಾ ''ಶ್ರೀಃ ಕೃಷ್ಣಾಯಾಂ ಯೇನ ಸಃ ಶ್ರೀಕೃಷ್ಣಃ'' ಇತಿ ವಿಗ್ರಹಾನುಸಾರೇಣ ಶ್ರೀಕೃಷ್ಣಶಬ್ದಾರ್ಥಃ ವ್ಯಾಖ್ಯಾತವ್ಯಃ। ಅತ್ರ ಕೃಷ್ಣಶಬ್ದೇನ ತಾಮಸಕಲಿಯುಗಂ ಉಚ್ಯತೇ। ತಥಾ ಚಾಭಿಧಾನಮ್ - **'ವ್ಯಾಸಾರ್ಜುನಾಗ್ನಿಹರಿಕೋಕಿಲಕಾಕ-ಶೂದ್ರತಾಮಿಸ್ರಪಕ್ಷಕಲಿನೀಲಗುಣೇಷು ಕೃಷ್ಣಃ'** ಇತಿ ಭಾಸ್ಕರಃ ॥

ಕೃಷ್ಣಶಬ್ದಿತೇ ತಸ್ಮಿನ್ ತಾಮಸಯುಗೇಽಪಿ ಷಟ್‌ತ್ರಿಂಶಾಬ್ದಂ ಭಗವಾನ್ ವಾಸುದೇವಃ ಶ್ರೀಶಬ್ದಿತಕೃತಯುಗಗುಣಸಂಪದಂ, ಕೃತಾಧಿಕಪುಣ್ಯಸಂಪದಂ ಚ ಪಾಪಾಲ್ಪತ್ವವಿಶೇಷ-ಸಂಪದಂ ಚ ಸಂಪಾದಿತವಾನ್। ತಥಾ ಚೋಕ್ತಂ ಮಹಾಭಾರತತಾತ್ಪರ್ಯನಿರ್ಣಯೇ-

**ಸಮಾರಬ್ಧಂ ಕಲಿಯುಗಂ ಯದಾ ದುರ್ಯೋಧನೋಽಪತತ್ ।**
**ಷಟ್‌ತ್ರಿಂಶಾಬ್ದಂ ಪುನಃ ಕೃಷ್ಣಃ ಕೃತಮೇವಾನ್ವವರ್ತಯತ್ ॥**
**ಕೃತಾದಪಿ ವಿಶೇಷೋಽಯಂ ಯತ್ಪುಣ್ಯಸ್ಯಾಧಿಕಂ ಫಲಮ್ ।**
**ಅಲ್ಪಮೇವ ಚ ಪಾಪಸ್ಯ ಕಾಲಾತ್ ಕೃಷ್ಣಾಜ್ಞಯಾ ತಥಾ ॥** ಇತಿ ।



ಏವಂ ಚ ಶ್ರೀಃ = ಕೃತಯುಗಗುಣಸಂಪತ್, ಕೃತಾಧಿಕಪುಣ್ಯಸಂಪತ್, ಪಾಪಾಲ್ಪತ್ವರೂಪವಿಶೇಷಸಂಪತ್ ಚ, ಕೃಷ್ಣೇ = ತಾಮಸೇ ಕಲಿಯುಗೇ, ಯೇನ = ವಾಸುದೇವೇನ ಸಂಪಾದಿತಾಃ ಸಃ ''ಶ್ರೀಕೃಷ್ಣ'' ಇತಿ ಸಾಧೂಕ್ತಮ್ ॥

ಅಥವಾ ''ಶ್ರೀಃ ಕೃಷ್ಣೇ ಯೇನ ಸಃ ಶ್ರೀಕೃಷ್ಣಃ'' ಎಂಬುದಾಗಿ ವಿಗ್ರಹವನ್ನು ಅನುಸರಿಸಿ ಶ್ರೀಕೃಷ್ಣ ಶಬ್ದಾರ್ಥವನ್ನು ವ್ಯಾಖ್ಯಾನಿಸಬೇಕು.

ಇಲ್ಲಿ ಕೃಷ್ಣ ಶಬ್ದದಿಂದ ತಾಮಸವಾದ ಕಲಿಯುಗವು ಪ್ರತಿಪಾದಿತವಾಗಿದೆ.

**'ವ್ಯಾಸಾರ್ಜುನಾಗ್ನಿಹರಿಕೋಕಿಲಕಾಕಶೂದ್ರತಾಮಿಸ್ರಪಕ್ಷಕಲಿನೀಲಗುಣೇಷು ಕೃಷ್ಣಃ'** ಎಂಬ ಭಾಸ್ಕರನ ಶಬ್ದಕೋಶದಿಂದ ಈ ಅರ್ಥವು ಕೃಷ್ಣಶಬ್ದಕ್ಕೆ ಸಾಬೀತಾಗಿದೆ.

ಕೃಷ್ಣಶಬ್ದದಿಂದ ವಾಚ್ಯವಾದ ತಾಮಸಯುಗದಲ್ಲಿಯೂ ಭಗವಾನ್ ವಾಸುದೇವನು, ದುರ್ಯೋಧನನ ಪತನವಾದ ಬಳಿಕ (ಕಲಿಯುಗದ ಪ್ರಾರಂಭಕಾಲದಲ್ಲಿ ) ೩೬ ವರ್ಷಗಳ ಕಾಲ 'ಶ್ರೀ' ಅರ್ಥಾತ್ ಕೃತಯುಗದ ಗುಣವೈಭವವನ್ನು, ಕೃತಯುಗಕ್ಕಿಂತಲೂ ಮಿಗಿಲಾದ ಪುಣ್ಯವಿಶೇಷಸಂಪತ್ತನ್ನು ಹಾಗೂ ಪಾಪಅಲ್ಪತ್ವರೂಪವಿಶೇಷಸಂಪತ್ತನ್ನು (ದುಷ್ಕರ್ಮಗಳಿಗೆ ಬೇರೆ ಯುಗಗಳಿಗಿಂತ ಅಲ್ಪವೇ ಪಾಪದ ಪ್ರಾಪ್ತಿರೂಪವಿಶೇಷವನ್ನು) ಉಂಟುಮಾಡಿದನು. ಈ ವಿಷಯವನ್ನು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ -

**ಸಮಾರಬ್ಧಂ ಕಲಿಯುಗಂ ಯದಾ ದುರ್ಯೋಧನೋಽಪತತ್ ।**
**ಷಟ್‌ತ್ರಿಂಶಾಬ್ದಂ ಪುನಃ ಕೃಷ್ಣಃ ಕೃತಮೇವಾನ್ವವರ್ತಯತ್ ॥**
**ಕೃತಾದಪಿ ವಿಶೇಷೋಽಯಂ ಯತ್ಪುಣ್ಯಸ್ಯಾಧಿಕಂ ಫಲಮ್ ।**
**ಅಲ್ಪಮೇವ ಚ ಪಾಪಸ್ಯ ಕಾಲಾತ್ ಕೃಷ್ಣಾಜ್ಞಯಾ ತಥಾ ॥** ಇತಿ ।

ಒಟ್ಟಿನಲ್ಲಿ ಶಬ್ದಕೋಶದ ಆಧಾರ ಹಾಗೂ ಪ್ರಮಾಣದ ಆಧಾರದಲ್ಲಿ 'ಶ್ರೀಃ ಕೃಷ್ಣೇ ಯೇನ ಸಃ ಶ್ರೀಕೃಷ್ಣಃ' ಎಂಬ ವಿಗ್ರಹವನ್ನು ಅನುಸರಿಸಿ ವ್ಯಾಖ್ಯಾನಿಸಿದ ''ಕಲಿಯುಗದಲ್ಲಿ ಕೃತಯುಗದ ಗುಣಸಂಪತ್ತನ್ನು, ಪುಣ್ಯವಿಶೇಷಸಂಪತ್ತನ್ನು ಹಾಗೂ ಪಾಪಾಲ್ಪತೆರೂಪ-ವಿಶೇಷವನ್ನುಂಟು ಮಾಡಿದವನು'' ಎಂಬರ್ಥವು ಸಮಂಜಸವೇ ಆಗಿದೆ ಎನ್ನಬಹುದು.

*****

ಇದಲ್ಲದೆ ಶ್ರೀಕೃಷ್ಣ ಶಬ್ದಕ್ಕೆ ಹಿಂದೆ ಹೇಳಿದ ಕೋಶ ಹಾಗೂ ವಿಗ್ರಹವನ್ನು ಅನುಸರಿಸಿ ಭಾಗವತವಚನದ ಆಧಾರದಲ್ಲಿ ಇನ್ನೊಂದರ್ಥವನ್ನೂ ಹೇಳಬಹುದು :

**ಕಲೇರ್ದೋಷನಿಧೇಃ ರಾಜನ್ನಸ್ತಿ ಹ್ಯೇಕೋ ಮಹಾನ್ಗುಣಃ ।**
**ಕೀರ್ತನಾದೇವ ಕೃಷ್ಣಸ್ಯ ಮುಕ್ತಸಂಗಃ ಪರಂ ವ್ರಜೇತ್ ॥**

ಎಂಬ ಶುಕರ ವಚನದಿಂದ ಶ್ರೀಕೃಷ್ಣನು, ತಾಮಸಯುಗವಾದುದರಿಂದ ''ಕೃಷ್ಣ'' ಎಂದು ಕರೆಯಿಸಿಕೊಳ್ಳುವ ದೋಷನಿಧಿಯಾದ ಕಲಿಯುಗದಲ್ಲಿ ತನ್ನ ಭಕ್ತಿಯ ನಾಮಕೀರ್ತನಮಾತ್ರದಿಂದ ಮುಕ್ತಿಯನ್ನು ಸುಲಭವಾಗಿ ಪಡೆಯುವ ಸುವರ್ಣಾವಕಾಶ ರೂಪಮಹಾಗುಣಸಂಪತ್ತನ್ನು ಇಟ್ಟಿದ್ದಾನೆ ಎಂದು ಸಿದ್ಧವಾಗಿದೆ.

ಆದುದರಿಂದ, ಶ್ರೀಃ = ನಾಮಕೀರ್ತನಮಾತ್ರೇಣ ಮುಕ್ತಿಸೌಲಭ್ಯರೂಪ-ಮಹಾಗುಣಸಂಪತ್, ಕೃಷ್ಣೇ = ದೋಷನಿಧಿಕಲಿಯುಗೇ, ಯೇನ = ವಾಸುದೇವೇನ, ಸಂಪಾದಿತಾ ಸಃ ಶ್ರೀಕೃಷ್ಣಃ ಎಂಬ ವಿಗ್ರಹವನ್ನು ಅನುಸರಿಸಿ ಹೇಳಿದ ಪ್ರಮಾಣಾಧಾರಿತವಾದ ಅರ್ಥವು ಸಮಂಜಸವೆನಿಸಿದೆ.

ಅಥವಾ ಪೂರ್ವೋಕ್ತಭಾಸ್ಕರಕೋಶಮಾಶ್ರಿತ್ಯ ಕೃಷ್ಣಶಬ್ದಸ್ಯ ಅರ್ಜುನಾರ್ಥಕತ್ವಂ ಸ್ವೀಕರ್ತವ್ಯಮ್ ।

ಏವಂ ಚ, ಶ್ರೀಃ = ವಿಜಯಾದಿಗುಣಸಂಪತ್, ಕೃಷ್ಣೇ = ಅರ್ಜುನೇ, ಯೇನ = ವಾಸುದೇವೇನ, ಸಂಪಾದಿತಾ ಸಃ ದೇವಕೀನಂದನಃ ಶ್ರೀಕೃಷ್ಣ ಇತಿ ವ್ಯಾಖ್ಯಾತವ್ಯಮ್ । ಅರ್ಜುನೇನ ವಿಜಯಾದಿಗುಣಸಂಪತ್ ಭಗವತಃ ಶ್ರೀಕೃಷ್ಣಸ್ಯ ಅನುಗ್ರಹೇಣ ಸಂಪಾದಿತಾ। ತಥಾ ಚೋಕ್ತಂ ತಾತ್ಪರ್ಯನಿರ್ಣಯೇ -

ಮದ್ವಶಾ ಏವ ಸರ್ವೇಽಪಿ ತ್ವಂ ಚಾನ್ಯೇಽಪಿ ಧನಂಜಯ ।
ಮತ್ಪ್ರಸಾದಾದ್ಬಲಂ ಚೈವ ವಿಜಯಶ್ಚಾಖಿಲಾ ಗುಣಾಃ ।
ತಸ್ಮಾನ್ನ ವಿಸ್ಮಯಃ ಕಾರ್ಯೋ ನ ದರ್ಪಶ್ಚ ತ್ವಯಾಽನಘ ॥ ಇತಿ ।

ಇದಂ ಕೃಷ್ಣವಚನಂ ಅರ್ಜುನಂ ಪ್ರತಿ। ಪ್ರಥಮೇ ಭಾಗವತೇ ಚ ಆರ್ಜುನವಚನಮ್-

ಯತ್ಸಂಶ್ರಯಾದ್ದ್ರುಪದಗೇಹ ಉಪಾಗತಾನಾಂ
ರಾಜ್ಞಾಂ ಸ್ವಯಂವರಮುಖೇ ಸ್ಮರದುರ್ಮದಾನಾಮ್ ।
ತೇಜೋ ಹೃತಂ ಖಲು ಮಯಾ ವಿಹತಶ್ಚ ಮತ್ಸ್ಯಃ
ಸಜ್ಜೀಕೃತೇನ ಧನುಷಾಽಧಿಗತಾ ಚ ಕೃಷ್ಣಾ ॥

ಯತ್ಸನ್ನಿಧಾವಹಮು ಖಾಂಡವಮಗ್ನಯೇಽದಾಂ
ಇಂದ್ರಂ ಚ ಸಾಮರಗಣಂ ತರಸಾ ವಿಜಿತ್ಯ ।
ಲಬ್ಧಾ ಸಭಾ ಮಯಕೃತಾಽದ್ಭುತಶಿಲ್ಪಮಾಯಾ
ದಿಗ್ಭ್ಯೋಽಹರನ್ ನೃಪತಯೋ ಬಲಿಮಧ್ವರೇ ತೇ ॥ ಇತಿ ।

ಏವಂಚ ಶ್ರೀಃ ವಿಜಯಕೀರ್ತ್ಯಾದಿಗುಣಸಂಪತ್ ಕೃಷ್ಣೇ = ಧನುರ್ವಿದ್ಯಾ-ಶಿಕ್ಷಾಪ್ರಕರ್ಷೇಣ ಕೃಷ್ಣಶಬ್ದಿತೇ ಅರ್ಜುನೇ, ಯೇನ = ವಾಸುದೇವೇನ, ಸಂಪಾದಿತಾ ಸ ಚ ದೇವಕೀಪುತ್ರಃ ಶ್ರೀಕೃಷ್ಣ ಇತಿ ಸಾಧೂಕ್ತಮ್ ।



ಅಥವಾ ಹಿಂದೆ ಹೇಳಿದ ಭಾಸ್ಕರಕೋಶವನ್ನು ಆಶ್ರಯಿಸಿ ಕೃಷ್ಣಶಬ್ದಕ್ಕೆ ಅರ್ಜುನ ಎಂಬರ್ಥವನ್ನು ಸ್ವೀಕರಿಸಬೇಕು. ಹಾಗೆ ಸ್ವೀಕರಿಸಿದರೆ ಶ್ರೀಃ = ವಿಜಯಾದಿಗುಣಸಂಪತ್, ಕೃಷ್ಣೇ = ಧನುರ್ವಿದ್ಯಾಶಿಕ್ಷಾಪ್ರಕರ್ಷನಿಮಿತ್ತಕೃಷ್ಣನೆಂದು ಕೀರ್ತಿತನಾದ ಅರ್ಜುನನಲ್ಲಿ, ಯೇನ = ವಾಸುದೇವನಿಂದ ಉಂಟಾಯಿತೋ, ಸ ಚ ಶ್ರೀಕೃಷ್ಣಃ ಆತನು ''ಶ್ರೀಕೃಷ್ಣ''ನೆಂದು ಸಾರ್ಥಕವಾಗಿ ಕೀರ್ತಿತನಾಗಿದ್ದಾನೆ ಎಂದು ಶ್ರೀಕೃಷ್ಣ ಶಬ್ದಾರ್ಥವನ್ನು ವ್ಯಾಖ್ಯಾನಿಸಬಹುದು.

ಅರ್ಜುನನು ವಿಜಯಾದಿ ಗುಣಸಂಪತ್ತನ್ನು (ಶ್ರೀ) ಕೃಷ್ಣನ ಅನುಗ್ರಹದಿಂದಲೇ ಪಡೆದನೆಂದು ಹಿಂದೆ ಉಲ್ಲೇಖಿಸಿದ ಮಹಾಭಾರತತಾತ್ಪರ್ಯನಿರ್ಣಯವಚನ ಹಾಗೂ ಪ್ರಥಮಸ್ಕಂಧದಲ್ಲಿರುವ ಸ್ವಯಂ ಅರ್ಜುನನ ವಚನಗಳಿಂದ ಸಿದ್ಧವಾಗಿದೆ.

*****


**ಶ್ರೀ ವಿಜಯದಾಸರು ಮತ್ತು ಅವರ ಕೃತಿಗಳು**

**ಪುಸ್ತಕ ಬಿಡುಗಡೆ**

**ಭಂಡಾರಕೇರಿ ಮಠಾಧೀಶರಾದ**

**ಪರಮಪೂಜ್ಯ ಶ್ರೀವಿದ್ಯೇಶತೀರ್ಥಶ್ರೀಪಾದಂಗಳವರಿಂದ**

**ಲೇಖಕರು : ಡಾ। ವ್ಯಾಸನಕೆರೆ ಪ್ರಭಂಜನಾಚಾರ್ಯ**

**ದಿನಾಂಕ : ೨೭.೦೧.೧೦, ಸಮಯ : ಸಂಜೆ ೬.೩೦ಕ್ಕೆ**

**ಸ್ಥಳ : ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು**


ಒಂದು ಚಕ್ರಾಂಕಿತವಿರುವ ಸ್ಥಳದ ಸುತ್ತಲಿನ ಮೂರು ಯೋಜನ ಪ್ರದೇಶವು ವೈಷ್ಣವಕ್ಷೇತ್ರವೆನ್ನಿಸುತ್ತದೆ ಎಂದು ಕೃಷ್ಣಾಮೃತಮಹಾರ್ಣವದಲ್ಲಿ ಶ್ರೀಮದಾಚಾರ್ಯರು ಉಲ್ಲೇಖಿಸಿರುವ ಪುರಾಣವಾಕ್ಯದಿಂದ ತಿಳಿದು-ಬರುತ್ತದೆ. ದ್ವಾರಕಾಕ್ಷೇತ್ರವು ಅಸಂಖ್ಯಚಕ್ರಾಂಕಿತಗಳ ಉಗಮಸ್ಥಾನ; ಚಕ್ರತೀರ್ಥದ ನೆಲೆ; ಎಂದರೆ ಅದು ಎಂತಹ ಅದ್ವಿತೀಯವಾದ ಅಪೂರ್ವ ವೈಷ್ಣವಕ್ಷೇತ್ರ ಎಂದು ಸ್ಫುಟಪಡುವುದಲ್ಲವೇ!

# ಆನಂದತೀರ್ಥರು

(ಅನುಗ್ರಹಲೇಖನ)

ಪರಮಪೂಜ್ಯ ಶ್ರೀಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು
ಕಿರಿಯಪಟ್ಟ, ಪೇಜಾವರ ಅಧೋಕ್ಷಜ ಮಠ.

ಶ್ರೀಮದಾನಂದತೀರ್ಥರು ಅಂದರೆ ಶ್ರೀಮನ್ಮಧ್ವಾಚಾರ್ಯರು. ಅಷ್ಟೇ ಹೇಳಿದರೆ ಅವರ ಇನ್ನೊಂದು ನಾಮವನ್ನು ಹೇಳಿದಂತಾಯಿತಲ್ಲದೆ ಅದರರ್ಥವನ್ನು ಹೇಳಿದಂತಾಗಿಲ್ಲ. ತೀರ್ಥ ಎಂದರೆ ಶಾಸ್ತ್ರ. ಹಾಗಾಗಿ ಆನಂದತೀರ್ಥ ಎಂದರೆ ಸರ್ವೋತ್ತಮ ಆನಂದ. ಸ್ವರೂಪಾನಂದ. ಅದನ್ನು ಪಡೆಯಲು ಅನುಕೂಲವಾದ ಶಾಸ್ತ್ರವನ್ನು ನಿರ್ಮಾಣ ಮಾಡಿ ನಮಗೆ ನೀಡಿದುದರಿಂದ ಅವರು ಅರ್ಥಪೂರ್ಣವಾಗಿ ಆನಂದತೀರ್ಥರು (**ಆನಂದಸಂದಾಯಿಸುಶಾಸ್ತ್ರಕೃತ್ ಸ ಯತ್**).

ಸ್ವರೂಪಾನಂದಸುಖದ ಆವಿರ್ಭಾವ ಆಕಸ್ಮಾತ್ ಆಗಿ ತನಗೆ ತಾನೇ ನಡೆಯೋದಿಲ್ಲ. ಬಲಾತ್ಕಾರವಾಗಿ ನಮ್ಮಿಷ್ಟದಂತೆ ಅದನ್ನು ಪಡೆಯೋಣ ಎಂದುಕೊಂಡರೆ ಅದೂ ಫಲಕಾರಿಯಾಗದು. ಕೇವಲ ಭಗವತ್ಪ್ರಸಾದವೊಂದೇ ಪರಮಸುಖದ ಆವಿರ್ಭಾವಕ್ಕೆ ಸಾಧನ. ಆತನ ಗುಣೋತ್ಕರ್ಷಜ್ಞಾನವೊಂದೇ ಪರಮಪ್ರಸಾದಕ್ಕೆ ಸಾಧನ (**ನ ತಾದೃಶೀ ಪ್ರೀತಿರೀಶ್ಯಸ್ಯ ವಿಷ್ಣೋರ್ಗುಣೋತ್ಕರ್ಷಜ್ಞಾತರಿ ಯಾದೃಶೀ ಸ್ಯಾತ್**).

ಸಕಲಸಚ್ಛಾಸ್ತ್ರಗಳೂ ಮಹಾವಿಷ್ಣುವಿನ ಸರ್ವೋತ್ಕರ್ಷವನ್ನು ಸಜ್ಜನರಿಗೆ ಮನವರಿಕೆ ಮಾಡಿಕೊಡಲೆಂದೇ ಹೊರಟಿದ್ದಾವೆ. ಸಕಲಸಚ್ಛಾಸ್ತ್ರಗಳಿಗೂ ಅಲ್ಲೇ ತಾತ್ಪರ್ಯ. (**ಸರ್ವೋತ್ಕರ್ಷೇ ದೇವದೇವಸ್ಯ ವಿಷ್ಣೋರ್ಮಹಾತಾತ್ಪರ್ಯಮ್**) ಎಂಬ ವಿಚಾರವನ್ನು ಆಧಾರಪುರಸ್ಸರವಾಗಿ ಪ್ರತಿಪಾದನೆ ಮಾಡಿಕೊಟ್ಟು ಸಚ್ಚೇತನರ ಸ್ವರೂಪಾನಂದದ ಆವಿರ್ಭಾವಕ್ಕೆ ದಾರಿಮಾಡಿಕೊಟ್ಟ ಶಾಸ್ತ್ರ ಶ್ರೀಮದಾಚಾರ್ಯಪ್ರಣೀತ ಸರ್ವಮೂಲ ಗ್ರಂಥಗಳು. ಅದಕ್ಕೆಂದೇ ಆಚಾರ್ಯರು ಆನಂದತೀರ್ಥರು.

* * * * *

ಶ್ರೀವ್ಯಾಸಮಧ್ವ ಮಾಸಪತ್ರಿಕೆಗೆ ಪೋಷಕರಾಗಿ
ಸಹಕರಿಸಿರುವ ಮಹನೀಯರು:

**ಶ್ರೀ ಸಿ.ಎಸ್. ಗುರುರಾಜ್**, ಬೆಂಗಳೂರು



## ಸಂಪಾದಕೀಯ –

## ಅರ್ಥ ಕಳೆದುಕೊಳ್ಳುತ್ತಿರುವ ವಾಕ್ಯಾರ್ಥಗೋಷ್ಠಿಗಳು

ಯಾವುದೇ ಸಿದ್ಧಾಂತದ ಕೂಲಂಕಷವಿಮರ್ಶೆಗೆ, ಸಾರಾಸಾರವಿವೇಚನೆಗೆ ವಿಹಿತವಾದ ವಿಶಿಷ್ಟ ಮಾಧ್ಯಮ 'ಕಥಾ'. ಮುಖ್ಯವಾಗಿ ಇದರ ಅರ್ಥ ಶಾಸ್ತ್ರಾರ್ಥಚರ್ಚೆ. ಇಂತಹ ಚರ್ಚೆ ಗುರುಶಿಷ್ಯರ ನಡುವೆ, ವಿದ್ವಾಂಸರ ನಡುವೆ ನಡೆದಾಗ ತತ್ತ್ವಗಳ ವಿಶ್ಲೇಷಣೆ ವಿಶೇಷವಾಗಿ ನಡೆಯಲು ಸಾಧ್ಯ. ಈ ಬಗ್ಗೆ ಶ್ರೀ ಮದಾಚಾರ್ಯರ ಕಥಾಲಕ್ಷಣದಲ್ಲಿ ವಿವರಗಳು ಬಂದಿವೆ.

ಇಂತಹ ಚರ್ಚೆ ಗುರುಶಿಷ್ಯರ ಮಧ್ಯೆ ನಡೆದು ತತ್ತ್ವನಿರ್ಣಯಕ್ಕೆ ಕಾರಣವಾದಾಗ 'ವಾದ' ಎನಿಸುತ್ತದೆ. ಖ್ಯಾತಿ, ಜಯ ಮೊದಲಾದ ಕಾರಣಗಳಿಗೋಸ್ಕರ ಇಬ್ಬರು ವಿದ್ವಾಂಸರ ಮಧ್ಯೆ ನಡೆದಾಗ 'ಜಲ್ಪ' ಎನ್ನಿಸಿದರೆ, ಯೋಗ್ಯ ಹಾಗೂ ಅಯೋಗ್ಯರ ನಡುವೆ ನಡೆದಾಗ 'ವಿತಂಡ' ಎನಿಸುವುದು. ವಾದಕಥೆಯಲ್ಲಿ ತತ್ತ್ವನಿರ್ಣಯ ಪ್ರಧಾನವೆನಿಸಿದರೆ, ಜಲ್ಪ, ವಿತಂಡಗಳಲ್ಲಿ ಜಯಾಪಜಯಗಳು ಮುಖ್ಯವೆನಿಸುತ್ತವೆ. ಶ್ರೀಮಧ್ವ-ತ್ರಿವಿಕ್ರಮರ ಮಧ್ಯೆ ನಡೆದ ಚರ್ಚೆ ಲೋಕೋತ್ತರ '**ವಾದಕಥೆ**'ಯೆನ್ನಿಸಿ ತ್ರಿವಿಕ್ರಮರಿಗೆ ಮಧ್ವರ ಶಿಷ್ಯರಾಗುವ ಭಾಗ್ಯ ಲಭಿಸಿತು. ಶ್ರೀಅಕ್ಷೋಭ್ಯ-ವಿದ್ಯಾರಣ್ಯರ ಮಧ್ಯೆ ನಡೆದ ಚರ್ಚೆ ಶ್ರೀಅಕ್ಷೋಭ್ಯತೀರ್ಥರ ವಿಜಯದಲ್ಲಿ ಪರ್ಯಾವಸಾನವಾಗಿ ಅದು ಮಧ್ವಸಿದ್ಧಾಂತದ ವಿಜಯಪತಾಕೆ ಎನಿಸಿದ್ದು ಇತಿಹಾಸ. ಶ್ರೀಮದಾಚಾರ್ಯರ ಕಾಲದಿಂದ ಇಂದಿನವರೆಗೂ ಕಾಲಕಾಲಕ್ಕೆ ಇಂತಹ ವಾದವಿವಾದಗಳು ನಡೆದು ಮಧ್ವಸಿದ್ಧಾಂತದ ಹಿರಿಮೆ ಪುನಃಪುನ ಸ್ಥಾಪಿತವಾಗುತ್ತಲೇ ಬಂದಿದೆ. ಶ್ರೀಜಯತೀರ್ಥರು, ಶ್ರೀವ್ಯಾಸರಾಜರು, ಶ್ರೀವಾದಿರಾಜರು ಮೊದಲಾದ ಮಹಾವಿಭೂತಿಗಳು ಜಗತ್ತು ಕಂಡ ಅನುಪಮ ವಾದಕೋವಿದರು. ಇತ್ತೀಚಿನ ದಿನಗಳಲ್ಲಿ ಶ್ರೀಸತ್ಯಧ್ಯಾನತೀರ್ಥರ ಕಾಲದಲ್ಲಿ ನಡೆದ ಇಂತಹ ವಾಕ್ಯಾರ್ಥಗೋಷ್ಠಿಗಳು ಸುಪ್ರಸಿದ್ಧ.

ಜಲ್ಪ, ವಿತಂಡಗಳು ಅರ್ಥವತ್ತಾಗಲು ರಾಜಮಹಾರಾಜರ ಉಪಸ್ಥಿತಿ, ನಿಯಂತ್ರಣ, ಸಮಯಬಂಧ ಮೊದಲಾದವುಗಳು ಅನಿವಾರ್ಯ. ಆದರೆ ಇಂದಿನ ದಿನಗಳಲ್ಲಿ ರಾಜಕೀಯ ವ್ಯವಸ್ಥೆ ಬುಡಮೇಲಾಗಿದ್ದು ಹೆಚ್ಚಾಗಿ ನಾಸ್ತಿಕವರ್ಗದ ಕೈಯಲ್ಲಿ ಆಡಳಿತಸೂತ್ರ ಉಳಿದುಕೊಂಡಿರುವುದು ಸರ್ವವೇದ್ಯ. ಅದರಿಂದಾಗಿ ಇಂದಿನ ದಿನಗಳಲ್ಲಿ ಸಮಯಬಂಧ ಮೊದಲಾದವುಗಳಿಗೆ ಅವಕಾಶವಿರದ ವಾಕ್ಯಾರ್ಥಗೋಷ್ಠಿಗಳು ನಿಯಂತ್ರಣ ತಪ್ಪಿ ಅರ್ಥ ಕಳೆದುಕೊಳ್ಳುತ್ತಿರುವುದು ಸಹಜ.

ಈ ಕಾರಣದಿಂದಾಗಿ ಜನ ತಿಳಿದಿರುವಂತೆ ಇತ್ತೀಚಿನ ಅನೇಕ ದಶಕಗಳಲ್ಲಿ, ಇನ್ನೂ ಸಂಗ್ರಹವಾಗಿ ಹೇಳುವುದಾದರೆ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಅನಂತರದ ಕಾಲದಲ್ಲಿ, ನಡೆಯುತ್ತಿರುವ ವಾಕ್ಯಾರ್ಥಗೋಷ್ಠಿಗಳು ಕೇವಲ ಔಪಚಾರಿಕವೆನ್ನಿಸಿದೆ. ನಾನು ಕಂಡುಕೇಳಿದ

ಯಾವುದೇ ಗೋಷ್ಠಿಯಲ್ಲೂ ತತ್ತ್ವನಿರ್ಣಯವಾಗಲೀ, ಜಯಾಪಜಯಗಳ ನಿಶ್ಚಯವಾಗಲೀ ಹೆಚ್ಚಾಗಿ ಕಂಡುಬಂದಿಲ್ಲ. ಮೇಲೆ ಹೇಳಿದ ಕಾರಣದಿಂದಾಗಿ ಅದು ಕಂಡುಬರುವ ಸಾಧ್ಯತೆಯೂ ಇಲ್ಲ.

ಇದರಿಂದಾಗಿ ಹೆಚ್ಚಿನ ಸಂದರ್ಭಗಳಲ್ಲಿ ಭೋಜನ ಅಥವಾ ಅನಂತರ ಯಾವುದೋ ಒಂದು ಕಾರ್ಯಕ್ರಮದವರೆಗೆ ಮಾತ್ರ ವಾಕ್ಯಾರ್ಥಗೋಷ್ಠಿಗಳು ನಡೆದು ಗೊಂದಲದಲ್ಲಿ ಪರ್ಯವಸಾನವಾಗುವುದು ತೀರ ಸಾಮಾನ್ಯ. ಮೈಕ್ ಸಿಕ್ಕುವವರೆಗೆ, ಎತ್ತರದ ದನಿಯಲ್ಲಿ ಮಾತನಾಡುವವರಿಗೆ ಮಾತ್ರವೇ ಅವಕಾಶ ಲಭಿಸಿ ಇತರರು ವಿಷಯ ತಿಳಿದಿದ್ದರೂ ಅವಕಾಶ ವಂಚಿತರಾಗುವುದು ಅಪರೂಪವೇನಲ್ಲ. ಅಗತ್ಯವಾದ ಪೂರ್ವತಯಾರಿಯಾಗಲೀ, ಖಚಿತ ನಿರ್ಣಯವನ್ನು ಹೊಂದುವ ತವಕವಾಗಲೀ, ತಾತ್ತ್ವಿಕಬದ್ಧತೆಯಾಗಲೀ ಹೆಚ್ಚಿನ ಸಂದರ್ಭಗಳಲ್ಲಿ ವ್ಯವಸ್ಥಾಪಕರಲ್ಲಿಯೇ ಕಾಣೆಯಾಗಿರುವುದು ಇಂತಹ ಗೋಷ್ಠಿಗಳ ಮತ್ತೊಂದು ವಿಪರ್ಯಾಸ. ಅಸಂಗತಿಯೇ ಪ್ರಧಾನವಾಗಿ ವಿಜೃಂಭಿಸುವ ಇಂತಹ ಗೋಷ್ಠಿಗಳು ಶ್ರೋತೃಗಳಿಗೆ ವೃಥಾ ಕಾಲಹರಣವೆನ್ನಿಸಿದರೂ ಅಚ್ಚರಿಯೇನಲ್ಲ.

ಹೆಚ್ಚಾಗಿ ಇವುಗಳು ನಡೆಯುವುದು ಮಾಧ್ವವೇದಿಕೆಗಳಲ್ಲಿ ಎಂಬುದು ಮತ್ತೊಂದು ಗಮನಾರ್ಹ ಸಂಗತಿ. ತಾವು ಆತಿಥೇಯರು ಮೊದಲಾದ ಕಾರಣಗಳಿಂದಾಗಿ ಸಮರ್ಥರಾದ ವಿದ್ವಾಂಸರು ಸಹ ಇಂತಹ ಗೋಷ್ಠಿಗಳಲ್ಲಿ ಅನಗತ್ಯವಾಗಿ ಮೃದುಧೋರಣೆಯಿಂದ ವರ್ತಿಸುವುದುಂಟು. ಇದರ ಪರಿಣಾಮವಾಗಿ ಎಷ್ಟೋ ಸಂದರ್ಭಗಳಲ್ಲಿ ಮಾಧ್ವರ ಪಕ್ಷವೇ ದುರ್ಬಲ ಎಂಬ ಭ್ರಮೆ ಶ್ರೋತೃಗಳಿಗೆ ಉಂಟಾಗಿರುವುದೂ ಉಂಟು. ಸಭೆಯಲ್ಲಿ ನಿರ್ಣಯಕ್ಕೆ ಬರಲಾಗದ ಇಂತಹ ಸಂದರ್ಭಗಳಲ್ಲಿ ಶ್ರೋತೃಗಳದ್ದೇ ನಿರ್ಣಯವಾಗುವುದು ಅಸಹಜವೇನಲ್ಲ. ತಮ್ಮದೇ ಗೆಲವು ಎಂದು ಪರಕೀಯರು ಘೋಷಿಸಿಕೊಳ್ಳುವುದು ಸಹ ಕಂಡಿದೆ. ಫಲಿತಾಂಶ ಕಾಣದ ಪಂದ್ಯವನ್ನು ಜನ ಎಂತು ವೀಕ್ಷಿಸಿಯಾರು? ಅದು ನೀರಸವಾಗದೆ ವಿಧಿಯಿಲ್ಲ. ಅದರಂತೆಯೇ ಇಂದಿನ ವಾದಗೋಷ್ಠಿಗಳು ಸಹ ಎನ್ನಬಹುದು.

ಕೆಲವೊಮ್ಮೆ ಇಂತಹ ಸಭೆಗಳಲ್ಲಿ ಶ್ರೋತೃಗಳ ಸಂಖ್ಯೆ ನಾಲ್ಕಾರರ ಮಟ್ಟಿಗೆ ಸೀಮಿತವಾದರೆ ಕೆಲವೊಮ್ಮೆ ಹಲವು ನೂರುಗಳವರೆಗೂ ಇರುವುದುಂಟು. ಭಾಷೆ, ಭಾವ ಎರಡೂ ತಿಳಿಯದ ಶ್ರೋತೃವರ್ಗ ಗೊಂದಲಕ್ಕೆ ಬಿದ್ದಲ್ಲಿ ಆಶ್ಚರ್ಯಪಡುವಂಥದೇನೂ ಇರುವುದಿಲ್ಲ. ಅಮೂಲ್ಯವಾದ ಸಮಯದ ಅಪವ್ಯಯದೊಂದಿಗೆ ಅಪಾರವಾದ ಸಾರ್ವಜನಿಕ ಹಣವೂ ಸಹ ಇದಕ್ಕಾಗಿ ವ್ಯಯವಾಗುವುದು ನಲಿವಿನ ಸಂಗತಿಯೇನೂ ಅಲ್ಲ. ಇದರ ಬದಲು ಸಾಕಷ್ಟು ಅಭ್ಯಾಸ, ಸಿದ್ಧತೆ, ವ್ಯವಸ್ಥಿತ ಮಂಡನೆಗೆ ಅವಕಾಶವಿರುವ ಆಧುನಿಕ ಪರಿಕಲ್ಪನೆಯ ವಿಚಾರ ಸಂಕಿರಣಗಳು, ತಾತ್ತ್ವಿಕ ಸಂವಾದಗಳು, ಸ್ವಕೀಯ ವಿದ್ವಾಂಸರಷ್ಟೇ ಪಾಲ್ಗೊಳ್ಳುವ ವಾಕ್ಯಾರ್ಥಗೋಷ್ಠಿಗಳು ಇಂದು ಹೆಚ್ಚು ಪ್ರಸ್ತುತ ಎನ್ನಬಹುದು.





# ಲೋಕನ್ಯಾಸಾನುಸಂಧಾನ

– ಶ್ರೀ ಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

ಗಾಯತ್ರಿಜಪವನ್ನು ಶಾಸ್ತ್ರೀಯವಾಗಿ ನಡೆಸುವವರಲ್ಲೂ ಕೆಲವು ಸಾಧಕರು ಗಾಯತ್ರೀ-ಜಪದ ಪೂರ್ವಸಿದ್ಧತೆಯ ರೂಪದಲ್ಲಿ ಅನುಷ್ಠಾನ ಮಾಡಬೇಕಾದ ಅಂಗಗಳಲ್ಲಿ ಅಳವಡಿಸಿಕೊಳ್ಳದಿರುವ ಅಂಗ ಲೋಕನ್ಯಾಸ. ಇದಕ್ಕೆ ಕಾರಣ ಪ್ರಾಣಾಯಾಮದಲ್ಲಿ ಹೇಗೋ ಹಾಗೆ ಲೋಕನ್ಯಾಸದಲ್ಲೂ ಏಳು ವ್ಯಾಹೃತಿಗಳ ಪಠನೆ ಸಮಾನವಾಗಿರುವುದು. ಅರ್ಥಾತ್ ಪ್ರಾಣಾಯಾಮದಲ್ಲಿ ಸಪ್ತವ್ಯಾಹೃತಿಗಳನ್ನು ಹೇಳಿದ್ದರಿಂದಲೇ ಲೋಕನ್ಯಾಸ-ವನ್ನೂ ಪೂರೈಸಿದಂತಾಯಿತೆಂಬ ತಪ್ಪುಕಲ್ಪನೆ. ಇನ್ನು ಕೆಲವರು ಲೋಕನ್ಯಾಸದಿಂದಲೇ ಪ್ರಾಣಾಯಾಮ ಗತಾರ್ಥ ಎಂದು ಭಾವಿಸುವವರೂ ಇದ್ದಾರೆ.

ಆದರೆ ಪ್ರಾಣಾಯಾಮದ ಬಳಿಕ ಲೋಕನ್ಯಾಸವನ್ನು ಪ್ರತ್ಯೇಕವಾಗಿ ಆಚರಿಸಬೇಕು. ಭೂಃ, ಭುವಃ, ಸ್ವಃ, ಮಹಃ, ಜನಃ, ತಪಃ, ಸತ್ಯಂ - ಎಂಬ ಏಳು ವ್ಯಾಹೃತಿಗಳನ್ನು ಲೋಕನ್ಯಾಸದಲ್ಲಿ ಹೇಗೋ ಹಾಗೆ ಪ್ರಾಣಾಯಾಮದಲ್ಲೂ ಪಠಿಸಲಾಗುವುದಾದರೂ ಆ ಏಳು ವ್ಯಾಹೃತಿಗಳಿಂದ ಪ್ರತಿಪಾದ್ಯಗಳಾದ ಮೇಲಿನ ಏಳು ಲೋಕಗಳಲ್ಲಿರುವ ಏಳು ಭಗವದ್ರೂಪಗಳನ್ನು ನಮ್ಮ ಪಿಂಡಾಂಡದ ಪಾದ ಮುಂತಾದ ಅಂಗಗಳಲ್ಲಿ ಚಿಂತಿಸಿ ಆಯಾ ಅಂಗಗಳನ್ನು ಆಯಾ ಭಗವದ್ರೂಪಕ್ಕೆ ಅರ್ಪಿಸುವ ಪ್ರಕ್ರಿಯೆ ಲೋಕನ್ಯಾಸದಲ್ಲಿ ವಿಶಿಷ್ಟವಾಗಿ ಕಾಣಿಸುವುದು. ನಮ್ಮ ಪಿಂಡಾಂಡ ಮಿನಿ ಬ್ರಹ್ಮಾಂಡವೇ ಆಗಿದ್ದು ಸಮಗ್ರ ಬ್ರಹ್ಮಾಂಡದ ಲೋಕಗಳಲ್ಲಿ ವ್ಯಾಪಿಸಿರುವ ಭಗವದ್ರೂಪಗಳಿಗೆ ಅರ್ಪಿಸುವುದರಿಂದ ನಮ್ಮ ಪಿಂಡಾಂಡಕ್ಕೆ ಸಮಗ್ರ ಬ್ರಹ್ಮಾಂಡದ ಕಳೆ ಸಿದ್ಧಿಸುವುದು. ಇದರಿಂದಾಗಿ ಮುಂದೆ ನಡೆಸಲಾಗುವ ಗಾಯತ್ರೀಜಪ ಸಮಗ್ರ ಬ್ರಹ್ಮಾಂಡದಲ್ಲಿ ವ್ಯಾಪಿಸಿರುವ ಎಲ್ಲ ಭಗವದ್ರೂಪಗಳ ಗುಣಾನುಸಂಧಾನಕ್ಕೆ ಸಂಬಂಧಿಸಿದಂತಾಗುವುದು. ಅಲ್ಲದೆ, ಸಂಕಲ್ಪದಲ್ಲಿ ಹೇಗೆ ಸಮಗ್ರಕಾಲದ, ದೇಶದ ಸಂಬಂಧವನ್ನು ಉಲ್ಲೇಖಿಸುವ ಮೂಲಕ ಸಂಧ್ಯಾವಂದನೆ, ಪೂಜೆ ಮುಂತಾದ ಚಟುವಟಿಕೆ ಸಮಗ್ರ ದೇಶ ಕಾಲಗಳಲ್ಲಿ ನಡೆಯುತ್ತಿರುವ ಅನಂತಾನಂತ ಚಟುವಟಿಕೆಗಳಿಗೆ ಪೂರಕವಾಗಿ ನಡೆಸಲಾಗುತ್ತಿದೆ ಎಂಬ ಅನುಸಂಧಾನವನ್ನು ಹೇಗೆ ತಂದುಕೊಳ್ಳಲಾಗುವುದೋ ಹಾಗೆಯೇ ಸಮಗ್ರ ಬ್ರಹ್ಮಾಂಡದಲ್ಲಿ ಘಟಕವಾಗಿರುವ ಈ ಪಿಂಡಾಂಡ ಆ ಬ್ರಹ್ಮಾಂಡದ ಎದುರು ಅತ್ಯಂತ ಚಿಕ್ಕದಾದರೂ ಅಂತಹ ಬ್ರಹ್ಮಾಂಡಕ್ಕೆ ಅಧಿಪತಿಯಾದ ಜಗದೊಡೆಯನ ನಿಯಂತ್ರಣಕ್ಕೆ

ಒಳಪಟ್ಟೇ ಗಾಯತ್ರೀಜಪವನ್ನು ನಡೆಸುತ್ತಿರುವುದು - ಎಂದು ಬ್ರಹ್ಮಾಂಡದೊಡೆಯನ ನಿಯಂತ್ರಣರೂಪವಾದ ಗಾಢನಂಟಿನ ಅನುಸಂಧಾನವನ್ನು ಲೋಕನ್ಯಾಸ ಉಂಟುಮಾಡಬಲ್ಲದು. ಹಾಗೆಯೇ ತನ್ನ ಪಾದಾದಿ ಅಂಗಗಳಿಂದ ಭೂರ್ಲೋಕಾದಿಗಳಿಗೆ ಜನಕವೂ, ಆಶ್ರಯವೂ ಆಗಿರುವ ಭಗವಂತನ ವಿರಾಡ್ರೂಪದ ಪ್ರತಿಬಿಂಬದಂತೆ ಈ ಶರೀರವಿದ್ದು ಅಂತಹ ಭಗವಂತನಿಗೂ ನಮಗೂ ಇರುವ ಬಿಂಬಪ್ರತಿಬಿಂಬಭಾವ-ರೂಪವಾದ ನಂಟಿನ ಪ್ರಜ್ಞೆಗೆ ಉದ್ಬೋಧಕವೂ ಆಗಬಲ್ಲದು.

ಬೃಹದ್ಯೋಗಿ ಯಾಜ್ಞವಲ್ಕ್ಯಸ್ಮೃತಿ ಭಗವಂತನ ವಿರಾಡ್ರೂಪದ ಯಾವ ಯಾವ ಅಂಗದಲ್ಲಿ ಯಾವ ಯಾವ ಲೋಕ ಆಶ್ರಿತವಾಗಿದೆ ಎಂದು ತಿಳಿಸುವ ಮೂಲಕ ಅದಕ್ಕನುಗುಣವಾಗಿ ನಾವು ನಮ್ಮ ಯಾವ ಯಾವ ಅಂಗದಲ್ಲಿ ಯಾವ ಯಾವ ಲೋಕದ ನ್ಯಾಸ ನಡೆಸಬೇಕೆಂದು ಹೀಗೆ ತಿಳಿಸಿದೆ.

**ಭೂರ್ಲೋಕಂ ಪಾದಯೋರ್ಮಧ್ಯೇ ಭುವರ್ಲೋಕಂ ತು ಜಾನುನೋಃ ।**
**ಸ್ವರ್ಲೋಕಂ ಕಟಿದೇಶೇ ಚ ನಾಭಿದೇಶೇ ಮಹಸ್ತಥಾ ।**
**ಜನಲೋಕಂ ಕಂಠದೇಶೇ ಮುಖಬಿಂಬೇ ತಪಸ್ತಥಾ ।**
**ಭ್ರುವೋರ್ಲಲಾಟಸಂಧೌ ತು ಸತ್ಯಲೋಕಂ ಪ್ರತಿಷ್ಠಿತಮ್॥''** – 'ಸ್ಮೃತಿಚಂದ್ರಿಕಾ'

ಉಳಿದೆಲ್ಲ ಅಂಗಗಳನ್ನು ಯಾಜ್ಞವಲ್ಕ್ಯಸ್ಮೃತಿಯಲ್ಲಿ ಹೇಳಿದಂತೆಯೇ ತಿಳಿಸಿದ್ದರೂ ಸತ್ಯಲೋಕವನ್ನು ನೆತ್ತಿಯಲ್ಲಿ ನ್ಯಾಸ ಮಾಡಬೇಕೆಂದೂ, 'ವ್ಯಾಹತೀರ್ನ್ಯಸ್ಯೇತ್' - ಭೂಃ ಮೊದಲಾದ ವಾಹೃತಿಗಳಿಂದ ಆಯಾ ಲೋಕನಿಯಾಮಕ ಭಗವದ್ರೂಪಗಳಿಗೆ ನ್ಯಾಸವನ್ನು ಅರ್ಥಾತ್ ಅರ್ಪಣೆಯನ್ನು ನಡೆಸಬೇಕೆಂದು ತಿಳಿಸಿದೆ -

**ಪಾದಯೋರ್ಜಂಘಯೋರ್ಜಾನ್ವೋಸ್ತಥೈವ ಜಠರೇಽಪಿ ಚ ।**
**ಕಂಠೇ ಮುಖೇ ತಥಾ ಮೂರ್ಧ್ನಿ ಕ್ರಮೇಣ ವ್ಯಾಹೃತೀರ್ನ್ಯಸೇತ್ ॥**

'ಓಂ ಭೂಃ' - ಎಂದು ಪಾದಗಳ ಮಧ್ಯದಲ್ಲಿ ಸ್ಪರ್ಶಿಸಿ ಗುಣಪೂರ್ಣನಾಗಿದ್ದು 'ಭೂಃ' - ಎನಿಸುವ ಭಗವಂತ ಭೂಲೋಕಕ್ಕೂ, ಅದರ ಕೆಳಗಿನ ಅತಲಾದಿ ಏಳು ಲೋಕಗಳಿಗೂ ಆಧಾರನಾಗಿದ್ದು, ಅಂತಹ ಭಗವಂತನ ರೂಪ ನನ್ನ ಪಾದಗಳ ಮಧ್ಯದಲ್ಲಿ ಸನ್ನಿಹಿತವಾಗಿದೆ. ಆ ರೂಪಕ್ಕೆ ನನ್ನ ಪಾದಗಳು ಅರ್ಪಿತವಾಗಿವೆ - ಎಂಬ ಅನುಸಂಧಾನ ತಾಳಬೇಕು. 'ಭೂಃ' ಇತ್ಯಾದಿಗಳು ಆಯಾ ಲೋಕನಾಯಕನಾದ ಭಗವಂತನ ರೂಪಗಳ ಹೆಸರುಗಳು ಹೊರತು ಬರೇ ಲೋಕಗಳ ಹೆಸರುಗಳಲ್ಲ ಎಂದು ಸೂಚಿಸುವುದಕ್ಕಾಗಿ ಆಯಾ ವ್ಯಾಹೃತಿಗಳನ್ನು ಓಂಕಾರಪೂರ್ವಕವಾಗಿ ಪಠಿಸಬೇಕು. ಆಯಾ ಲೋಕದಲ್ಲಿ ಪ್ರವೇಶಿಸಿರುವವನು ('ಅವತಿ ತತ್ತಲ್ಲೋಕಾನ್ ಪ್ರವಿಶತೀತಿ ಓಮ್') ಎಂಬ ಅರ್ಥವನ್ನು ಆ ಓಂಕಾರದಿಂದ ಹೊರಡಿಸಬಹುದಾಗಿದೆ.



ಹೀಗೆಯೇ 'ಓಂ ಭುವಃ' - ಎಂದು ಮೊಣಕಾಲನ್ನು ಸ್ಪರ್ಶಿಸಿ, 'ಓಂ ಸ್ವಃ'- ಎಂದು ಮೊಣಕಾಲು ತೊಡೆಗಳ ಸಂಧಿಯನ್ನು ಸ್ಪರ್ಶಿಸಿ, 'ಓಂ ಮಹಃ' - ಎಂದು ಸೊಂಟವನ್ನು ಸ್ಪರ್ಶಿಸಿ, 'ಓಂ ಜನಃ' - ಎಂದು ಕಂಠವನ್ನು ಸ್ಪರ್ಶಿಸಿ, 'ಓಂ ತಪಃ' - ಎಂದು ಮುಖವನ್ನು ಸ್ಪರ್ಶಿಸಿ, 'ಓಂ ಸತ್ಯಂ' - ಎಂದು ನೆತ್ತಿಯನ್ನು ಸ್ಪರ್ಶಿಸಿ - ಆಯಾ ಅಂಗಗಳಲ್ಲಿ ಆಯಾ ಲೋಕದ ಅಧಿಪತಿಯಾದ ಭಗವದ್ರೂಪವನ್ನು ಚಿಂತಿಸಿ, ಅದಕ್ಕೆ ಆಯಾ ಅಂಗವನ್ನು ಸಮರ್ಪಿಸಬೇಕು. ವ್ಯಾಹೃತಿಗಳ ಮೊದಲು ಪಠಿಸುವ ಓಂಕಾರದಿಂದ ಆಯಾ ಭಗವದ್ರೂಪ ಆಯಾ ಲೋಕವನ್ನು ಪ್ರವೇಶಿಸಿದೆ ಎಂದೂ, ಅಂತೆಯೇ ನಮ್ಮ ಅಂಗಗಳನ್ನೂ ಪ್ರವೇಶಿಸಿದೆ ಎಂದೂ ಅನುಸಂಧಾನ ನಡೆಸಬೇಕು.

ವ್ಯಾಹೃತಿಯ ಬಳಿಕ 'ನಮಃ' ಎಂಬ ಶಬ್ದವನ್ನು ಪಠಿಸದಿದ್ದರೂ ಅದರ ಮಾನಸಿಕ ಅಧ್ಯಾಹಾರವನ್ನು ನಡೆಸಿ, ಆ ಶಬ್ದದ ಮೂಲಕ ಆಯಾ ಅಂಗವನ್ನು ಆಯಾ ಭಗವದ್ರೂಪಕ್ಕೆ ಅರ್ಪಿಸಬೇಕು. ಪ್ರಾಣಾಯಾಮದಲ್ಲಿ ವ್ಯಾಹೃತಿಗಳ ಪಠನದ ಬಳಿಕ ಗಾಯತ್ರಿಯನ್ನೂ, ಗಾಯತ್ರೀ ಶಿರಸ್ಸನ್ನೂ ಪಠಿಸುವುದಿದೆ. ಆದರೆ ಲೋಕನ್ಯಾಸದಲ್ಲಿ ಅವುಗಳ ಪಠನೆ ಇಲ್ಲ.

ಹೀಗೆ ಅನುಸಂಧಾನಪೂರ್ವಕವಾಗಿ ನಡೆಸಲಾಗುವ ಲೋಕನ್ಯಾಸದಿಂದಾಗಿ ಬ್ರಹ್ಮಾಂಡದ ಯಾವುದೋ ಮೂಲೆಯಲ್ಲಿ ಬಿದ್ದಿರುವ ಈ ಪಿಂಡಾಂಡಕ್ಕೆ ಸಮಗ್ರ ಬ್ರಹ್ಮಾಂಡದ ಮೆರುಗು ಸಿದ್ಧಿಸಿದಂತಾಗುವುದೆಂದರೆ ಲೋಕನ್ಯಾಸವನ್ನು ಯಾವ ವಿವೇಕಿಯಾದ ಸಾಧಕ ಅಳವಡಿಸಿಕೊಳ್ಳದಿದ್ದಾನು?

* * * * *

## ಅಂತರ್ಜಾಲದ ಮೂಲಕ ನೇರವಾಗಿ ಭಾಗವತದ ಪಾಠ

ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯರು ಕಳೆದ ಒಂದು ವರ್ಷದಿಂದ ಪ್ರತಿನಿತ್ಯ ಬೆಳಿಗ್ಗೆ ೮.೦೦ ರಿಂದ ೯.೩೦ರವರೆಗೆ ಶ್ರೀಮದ್ಭಾಗವತದ ಪಾಠವನ್ನು 'ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ'ದ ಸಭಾಂಗಣದಲ್ಲಿ ನಡೆಸಿಕೊಡುತ್ತಿರುವರು. ಪರಮಪೂಜ್ಯ ಶ್ರೀಪಲಿಮಾರು ಮಠಾಧೀಶರಾದ ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದರ ಅನುಗ್ರಹದಿಂದ ಜಿಜ್ಞಾಸುಗಳ ಅನುಕೂಲಕ್ಕಾಗಿ ಈಗ ಅಂತರ್ಜಾಲದ ಮೂಲಕ ಪಾಠವನ್ನು ನೇರಪ್ರಸಾರ ಮಾಡುವ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಆಸಕ್ತರು ಇದರ ಪ್ರಯೋಜನವನ್ನು ಪಡೆದುಕೊಳ್ಳಬಹುದು.

ಅಂತರ್ಜಾಲದ ವಿಳಾಸ: www.livepravachana.com
ಸಮಯ: ಬೆಳಿಗ್ಗೆ ೮.೦೦ ರಿಂದ ೯.೩೦ ಘಂಟೆವರೆಗೆ

# ಶ್ರೀವಿಜಯದಾಸರ ಸುಳಾದಿಯಲ್ಲಿ ವಿರಾಡ್ರೂಪವರ್ಣನೆ

– ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ

ಶ್ರೀಮದ್ಭಾಗವತದ ದ್ವಿತೀಯಸ್ಕಂಧದಲ್ಲಿ ಬಂದಿರುವ ವಿರಾಡ್ರೂಪವರ್ಣನ ಅಂತ್ಯಕಾಲದ ಚಿಂತನೆಗೆ ಕಡ್ಡಾಯವಾಗಿ ವಿಹಿತವಾದ ಅಪೂರ್ವಭಾಗ. ಇದನ್ನು ಶ್ರೀವಾದಿರಾಜಸ್ವಾಮಿಗಳು ಕನ್ನಡ ಪದ್ಯರೂಪದಲ್ಲಿ ಸಮಗ್ರವಾಗಿ ನೀಡಿರುವರು. (ನೋಡಿ: 'ಹರಿಭಜನಕಲ್ಪದ್ರುಮ', ಪು. ೨೬೫). ಪ್ರಸ್ತುತ ಶ್ರೀವಿಜಯದಾಸರ ಸುಳಾದಿಯೊಂದರಲ್ಲಿ ಇದರ ವಿಸ್ತೃತನಿರೂಪಣೆ ಬಂದಿದ್ದು, ಅದನ್ನು ಇಲ್ಲಿ ಕೊಡಲಾಗಿದೆ :

ಧ್ರುವತಾಳ

ವಿರಾಟ ಮೂರ್ತಿ ಧ್ಯಾನ ಮಾಡು ಇದೆ ಸ್ಥೂಲ
ತೋರಾಟವಲ್ಲ ಕಾಣೊ ಕೇವಲ ಯೋಗ
ಮಾರಾಟ ಮಿಗಿಲಾದ ವಿಷಯಕ್ಕೆ ಶಿಲ್ಕಿ ಮಹ
ಘೋರಾಟದಲ್ಲಿ ಬಿದ್ದು ಹಗಲಿರಳು
ಆರಾಟದೊಳು ಹೊರಳಿ ಬಳಲಿದರಾಗೆಯಿದು
ಹೇರಾಟದಂತೆ ಕಾಣೊ ಇಹದ ಸೌಖ್ಯ
ನೂರಾಟಾ ಕತ್ತೆ ಕೂಡ ಓಡಾಡಿದರೆ ಮೂರ್ಖ
ಪೋರಾಟವೆನ್ನರೆ ನೋಡಿದವರು
ಮಾರಾಟ ನಿಲ್ಲಿಸೆಂದು ಹರಿಯ ಸ್ತುತಿಸಿ ನುತಿಸಿ
ಧೀರಾಟವನ್ನೆ ಬಯಸು ಮರಳೆ ಮರಳೆ
ಸ್ವಾರಾಟಗಾದರು ಹರಿ ಭಕುತಿರಹಿತ ಕರ್ಮ
ತೀರಾಟವಾಗದು ಲಿಂಗದೆಡಿಗೆ
ಹಾರಾಟದಿಂದಲಿ ದುಃಖನಾಶನ ಕಾಣೊ
ಜೋರಾಟ ಬಿಡು ಬಿಡು ನಾನೆಂಬೊದು
ಬೀರಾಟ ಸಿದ್ಧವೆನ್ನು ಜ್ಞಾನಿ ನಿರ್ಭಯನೆಂದು
ಭೀರಾಟ ಭೂಮಿಯೊಳಗೆ ಪಾಡುತಲಿ
ಕೋರಾಟ ಮುಕ್ತರೊಡನೆ ವಿಲಿಂಗನಾಗಿ ಯಿದೆ
ಸಾರಾಟ ಸಂತತ ಸುಜನಾ ಮೆಚ್ಚು
ಭೂರಾಟ ಮೊದಲಾದ ವೈಭವ ಪ್ರಾಪ್ತಿಯಿಂದ
ಆರಾಟದೊಳು ಮುಳುಗಿ ತೇಲಬೇಕು
ದೂರಾಟ ವಿಚಾರಿಸು ಅನಂತ ಕಾಲಕ್ಕೆ ಬ-
ಹೀರಾಟ ವೆಗ್ಗಳಿಸೆ ಬಲು ಜನ್ಮವು
ಆರಾಟ ಬಲ್ಲವರೆಂಬಿಯಾ ಮುನ್ನಿನ ಪಿರಿಯರು
ಸ್ತ್ರೀರಾಟ ಉದಾಸಿಸಿ ಗತಿಯೈದಿದರು
ವೀರಾಟ ಗಮನ ನಮ್ಮ ವಿಜಯವಿಟ್ಠಲರೇಯ
ನೀರಾಟ ಆಡಿದ ಸತಿಯರಿಗೆ ಮುಕುತಿಯಿತ್ತ || ೧ ||

ಮಟ್ಟತಾಳ

ಶ್ರೀಕಾಂತನ ರೂಪ ಪಾತಾಳ ಸತ್ಯ-
ಲೋಕವಿಡಿದುವುಂಟು ಒಂದೊಂದು ಅವಯವದಿ
ಲೋಕೇಶನೊಳಗೆ ಚತುರ್ದಶ ಭುವನಗಳು
ನಾಕ ಜನರು ಮಿಕ್ಕ ಜೀವರು ತುಂಬಿಹ್ಯರು
ಏಕೈಕ ಧ್ಯಾನ ಮಾಡು ಮುಖ್ಯವಾಗಿ
ಲೋಕಂಗಳು ಅಲ್ಲಿ ಇದ್ದ ವ್ಯಾಪಾರಂಗಳು
ವಾಕು ಗಾತುರ ಮನಸು ಪೂರ್ವಕದಿಂದ ವಿ-
ವೇಕ ಭಕುತಿಯಲ್ಲಿ ಭವದೂರನಾಗಿ
ಏಕಾಂತದಿ ಕುಳಿತು ಹರಿಪಾದಾ ನೆರೆನಂಬಿ
ವಾಕು ಸಾರಥಿ ನಮ್ಮ ವಿಜಯವಿಟ್ಠಲರೇಯ
ಶೋಕ ಪೋಗಾಡುವನು ಈ ಪರಿ ಧ್ಯಾನಿಸಲು || ೨ ||

ರೂಪಕತಾಳ

ಪಾತಾಳೋತ್ಪಾದಕ ತದಾಶ್ರಯ ತದ್ಭಿನ್ನ
ನೀತಿಯಿಂದಲಿ ತಿಳಿ ಪಾದ ಮೂಲವೆನ್ನು
ಖ್ಯಾತಿಯಾದ ವಾಸುಕಿ ಶಂಖ ಕಾಳಿಕೆ ಪ್ರಬಲ
ಶ್ವೇತ ಧೃತರಾಷ್ಟ್ರ ಮಹಶಂಖ ಧನಂಜಯ
ಧಾತ ಶಂಖ ಚೂಡ ಮಿಗಿಲಾದ ಸರ್ಪಗಳು
ಜಾತಿ ಸಮೇತದಲಿ ತುಂಬಿಕೊಂಡಿಪ್ಪರು
ಭೂತಿಗಳಿಂದೊಪ್ಪುತಲಿ ಮಹ ಮಣಿ ವಜ್ರ
ಭಾತಿಯ ತೋರುತ್ತ ಬಲುಕೋಪವುಳ್ಳವರಾಗೆ
ಜ್ಯೋತಿರ್ಮಯ ಕಾಯ ವಿಜಯವಿಟ್ಠಲರೇಯ
ಪಾತಾಳ ಲೋಕ ಧರಿಸಿಹ್ಯನು ಧ್ಯಾನ ಮಾಡಿ || ೩ ||

(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು)

# ಮಧ್ವಸಿದ್ಧಾಂತದ ಹಿರಿಮೆಗರಿಮೆಗಳು

## (೨೪.೦೧.೧೦ - ಶ್ರೀಮಧ್ವನವಮೀನಿಮಿತ್ತ ವಿಶೇಷಲೇಖನ)

– ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ

ಶ್ರೀಮಧ್ವಾಚಾರ್ಯರು (ಕ್ರಿ.ಶ. ೧೨೦೦-೧೨೮೦) ವಿಶ್ವ ಕಂಡ ಅದ್ಭುತದಾರ್ಶನಿಕರು. ವೇದಾಂತದರ್ಶನದ ಆಚಾರ್ಯತ್ರಯರಲ್ಲಿ ಕಾಲಕ್ರಮದಲ್ಲಿ ಕೊನೆಯವರು. ಕನ್ನಡನಾಡಿನ ಹೆಮ್ಮೆಯ ಸುಪುತ್ರ. ಶ್ರೀಪೂರ್ಣಪ್ರಜ್ಞ ಅವರ ಸನ್ನ್ಯಾಸನಾಮ. ಆನಂದತೀರ್ಥ ಅವರ ಪೀಠನಾಮ. ಅವರ ಜೀವನ ಅದ್ಭುತಗಳ ಸರಮಾಲೆ. ಅವತಾರದಿಂದ ನಿರ್ಗಮನದವರೆಗಿನ ಅವರ ಪ್ರತಿಯೊಂದು ಸಾಧನೆಯಲ್ಲೂ ಅವರದ್ದೇ ಆದ ಛಾಪು ಒಡಮೂಡಿದೆ. ಆಸೇತುಹಿಮಾಚಲಪರ್ಯಂತ ಸಂಚರಿಸಿದ ಕೀರ್ತಿ ಅವರದು. ಮಹಾಭಾರತ ಉಲ್ಲೇಖಿಸಿರುವ ಉತ್ತರಬದರಿಯನ್ನು ಸಹ ಸಂದರ್ಶಿಸಿದ ಏಕಮಾತ್ರ ಆಚಾರ್ಯರು ಎಂಬುದು ಅವರ ಮತ್ತೊಂದು ಹಿರಿಮೆ. ಸಕಲಶಾಸ್ತ್ರಗಳ ತಲಸ್ಪರ್ಶಿಪಾಂಡಿತ್ಯದೊಂದಿಗೆ ಸಕಲಕಲಾವಿದ್ಯೆಗಳಲ್ಲೂ ಪೂರ್ಣಪರಿಜ್ಞಾನ ಹೊಂದಿದ್ದ ಅಪೂರ್ವವ್ಯಕ್ತಿತ್ವ ಅವರದು. ಉಡುಪಿಗೆ ಶ್ರೀಕೃಷ್ಣ ಆಗಮಿಸಿ, ಅದು ವಿಶ್ವಭೂಪಟದ ಪುಣ್ಯಕ್ಷೇತ್ರ ಎನ್ನಿಸಿದ್ದು ಇವರಿಂದಲೇ. ಸಾಮುದ್ರಿಕಶಾಸ್ತ್ರ ಸಾರುವ ಸಕಲಲಕ್ಷಣಗಳನ್ನೂ ಹೊಂದಿದ್ದ ದಿವ್ಯಾಕೃತಿ ಅವರದು. ಅವರು ಸಾಹಸದಲ್ಲಿ ಹನುಮಂತನಾದರೆ, ಬಲದಲ್ಲಿ ಭೀಮನೇ ಆಗಿದ್ದವರು.

ಅವರ ಆಕೃತಿಯಂತೆ ಅವರ ಕೃತಿಗಳೂ ಪೂರ್ಣತೆಯ ಸಂಕೇತ. ಗಾತ್ರದಲ್ಲಿ ವಾಮನ, ಅರ್ಥದಲ್ಲಿ ತ್ರಿವಿಕ್ರಮ ಎಂಬುದು ಅವುಗಳ ವೈಶಿಷ್ಟ್ಯ. ವೇದೋಪನಿಷತ್ತುಗಳ ಭಾಷ್ಯಗಳಿಂದ ಸ್ತೋತ್ರಸಾಹಿತ್ಯದ ವರೆಗೆ ಅವರ ಕೃತಿಗಳ ವ್ಯಾಪ್ತಿ ಹಬ್ಬಿದೆ. ಋಗ್ವೇದಕ್ಕೆ ಭಾಷ್ಯ ಬರೆದ ಏಕಮಾತ್ರ ಮತಾಚಾರ್ಯರು ಅವರು. ಮಹಾಭಾರತ ರಾಮಾಯಣಗಳ ಸಾರಸಂಗ್ರಹವನ್ನು ನಿರ್ಣಯಸಮೇತ ಒದಗಿಸಿರುವವರು ಅವರೊಬ್ಬರೇ. ಭಾಗವತತಾತ್ಪರ್ಯನಿರ್ಣಯದ ಮೂಲಕ ಸಮಗ್ರ ಪುರಾಣಪ್ರಪಂಚವನ್ನು ಅನಾವರಣಗೊಳಿಸಿದ ಶ್ರೇಯಸ್ಸು ಅವರದು. ವೇದ, ಇತಿಹಾಸ ಹಾಗೂ ಪುರಾಣಗಳಿಗೆಲ್ಲ ಆಧ್ಯಾತ್ಮಿಕ ಒಳನೋಟವನ್ನು ನೀಡಿದ್ದು ಅವರ ಸಾಧನೆ. ಅವರ ಸರ್ವಮೂಲಗ್ರಂಥಗಳು ಸಾರಸ್ವತಪ್ರಪಂಚದ ಅಚ್ಚರಿ.

ಯಜ್ಞಯಾಗಗಳಲ್ಲಿ ಪಶುಬಲಿಯನ್ನು ನಿಷೇಧಿಸಿ, ಪಿಷ್ಟಪಶುಬಲಿಯನ್ನು ಸಮರ್ಥಿಸಿದವರು ಅವರೇ. ವರ್ಣಾಶ್ರಮಗಳನ್ನು ಹುಟ್ಟಿಗಷ್ಟೇ ಸೀಮಿತಗೊಳಿಸದೆ, ಗುಣಧರ್ಮಗಳ ನೆಲೆಯಲ್ಲಿಯೂ ಅರ್ಥೈಸಿದ್ದು ಅವರ ಕೊಡುಗೆ. ಜ್ಞಾನಬಲದೊಂದಿಗೆ ಬಾಹುಬಲದ ಸಾಕಾರಮೂರ್ತಿ ಆಗಿದ್ದವರು ಅವರು. ಅವರ ದೈಹಿಕಶಕ್ತಿಗೆ ನಿದರ್ಶನವಾಗಿ ಅವರು ಒಂದೇ ಕೈಯಲ್ಲಿ ಭದ್ರಾನದಿಯಲ್ಲಿರಿಸಿರುವ ೫೫ ಟನ್ನುಗಳ ಭಾರೀಶಿಲೆಯನ್ನು ಇಂದೂ ಕಾಣಬಹುದು.



ಆಚಾರ್ಯ ಶ್ರೀಮಧ್ವರದು ದ್ವೈತದರ್ಶನ, ತತ್ತ್ವವಾದ, ವೈಷ್ಣವಸಿದ್ಧಾಂತ. ಬ್ರಹ್ಮಸೂತ್ರಗಳ ಇಪ್ಪತ್ತೆರಡನೆಯ ಭಾಷ್ಯ. ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವಮೀಮಾಂಸಾ ಹಾಗೂ ಉತ್ತರಮೀಮಾಂಸಾ ಎಂಬ ಷಡ್ದರ್ಶನಗಳಲ್ಲಿ ಕೊನೆಯದಾದ ಉತ್ತರಮೀಮಾಂಸಾ ದರ್ಶನಕ್ಕೆ ಸೇರಿದುದು. ಅದ್ವೈತ, ವಿಶಿಷ್ಟಾದ್ವೈತದರ್ಶನ ಹಾಗೂ ದ್ವೈತದರ್ಶನಗಳಲ್ಲಿ ಕಾಲಕ್ರಮದಲ್ಲಿ ದ್ವೈತದರ್ಶನ ಕೊನೆಯದು.

ತತ್ತ್ವಜ್ಞಾನ ಸಾಧನೆಗೆ ಎಷ್ಟು ಮುಖ್ಯವೋ, ಅದರ ಪರಿಜ್ಞಾನ ಅಷ್ಟೇ ಗಹನ. ಜ್ಞಾನವಿಲ್ಲದೆ ಮೋಕ್ಷವಿಲ್ಲ; ಮಿಥ್ಯಾಜ್ಞಾನದಿಂದಂತೂ ಮೋಕ್ಷದ ಬದಲು ಅನರ್ಥವೇ. ಈ ಹಿನ್ನೆಲೆಯಲ್ಲಿ ಪೂರ್ಣಪ್ರಜ್ಞದರ್ಶನದ ಉಗಮ ಅಪೂರ್ವವಾದುದು. ವೇದೋಪನಿಷತ್ತುಗಳ ಆಂತರ್ಯವನ್ನು ಬಾದರಾಯಣರ ಬ್ರಹ್ಮಸೂತ್ರ ಪ್ರಕಟಿಸಿತ್ತು. ಆದರೆ ಅದರ ಮೇಲೆ ಆ ವೇಳೆಗೆ ಬಂದಿದ್ದ ಇಪ್ಪತ್ತೊಂದು ಭಾಷ್ಯಗಳಲ್ಲಿ ಒಮ್ಮತವಿಲ್ಲದೆ, ಆ ಸೂತ್ರಗಳ ಅರ್ಥವೂ ಜಟಿಲವಾಗಿತ್ತು. ಅದರೊಂದಿಗೆ ಇತಿಹಾಸಪುರಾಣಗಳ ಬೆಳಕಿನಲ್ಲಿ ವೇದೋಪನಿಷತ್ತುಗಳ ಭಾವವನ್ನು ವಿಶ್ಲೇಷಿಸುವ ಮಹತ್ತ್ವಪೂರ್ಣಕಾರ್ಯ ನಡೆಯಬೇಕಿತ್ತು. ಅದಕ್ಕಾಗಿ ಮಹಾಭಾರತ, ರಾಮಾಯಣಗಳ, ಭಾಗವತಾದಿಪುರಾಣಗಳ ಅರ್ಥನಿರ್ಣಯವೂ ಆಗಬೇಕಿತ್ತು. ಅದರೊಂದಿಗೆ ವೇದಾಂತದರ್ಶನಕ್ಕೆ ಸ್ಫುಟವಾದ ಪ್ರಮಾಣಪ್ರಕ್ರಿಯೆಯನ್ನು ರೂಪಿಸಬೇಕಿತ್ತು. ಅದ್ವೈತದರ್ಶನವು ಭಾಟ್ಟಮೀಮಾಂಸಕರ ಪ್ರಮಾಣಪ್ರಕ್ರಿಯೆಯನ್ನೂ, ವಿಶಿಷ್ಟಾದ್ವೈತದರ್ಶನವು ಪ್ರಾಭಾಕರಮೀಮಾಂಸಕರ ಪ್ರಮಾಣಪ್ರಕ್ರಿಯೆಯನ್ನೂ ಆಧರಿಸಿ, ತಮ್ಮ ವಿಚಾರಗಳನ್ನು ಮಂಡಿಸಿದ್ದವು. ವೇದಾಂತದರ್ಶನಕ್ಕೆ ತನ್ನದೇ ಪ್ರಮಾಣಪ್ರಕ್ರಿಯೆ ಬೆಳಕಿಗೆ ಬರದೆ ಅದರ ತತ್ತ್ವಗಳು ಸ್ಫುಟವಾಗುವುದು ಅಶಕ್ಯವಾಗಿತ್ತು. ಇವೆಲ್ಲಕ್ಕಿಂತ ಮಿಗಿಲಾಗಿ ವೇದವ್ಯಾಸರ ಉಪದೇಶದ ಹಿನ್ನೆಲೆಯಲ್ಲಿ ವೇದಾದಿಸಮಸ್ತಶಾಸ್ತ್ರಪ್ರಪಂಚವನ್ನು ವಿಶ್ಲೇಷಿಸುವ ಮಹತ್ತರಕಾರ್ಯ ನಡೆಯಬೇಕಿತ್ತು. ಇಂತಹ ಅನೇಕ ತಾತ್ತ್ವಿಕ ಮಹತ್ಸಾಧನೆಗಾಗಿ ರೂಪುಗೊಂಡಿದ್ದು ಆಚಾರ್ಯ ಶ್ರೀಮಧ್ವರ ದ್ವೈತದರ್ಶನ.

ಅಂತಹ ದರ್ಶನವನ್ನು ನೀಡಲು ಯಾವ ರೀತಿಯ ಪೂರ್ವರಂಗವೂ ಸಿದ್ಧವಾಗಿರಲಿಲ್ಲ. ಶಂಕರಾಚಾರ್ಯರ ಅದ್ವೈತದರ್ಶನಕ್ಕೆ ಗೌಡಪಾದರು ಮೊದಲಾದವರ ಕಾರಿಕೆ ಮೊದಲಾದ ಕೃತಿಗಳಿದ್ದವು. ರಾಮಾನುಜಾಚಾರ್ಯರ ವಿಶಿಷ್ಟಾದ್ವೈತಕ್ಕೆ ನಾಥಮುನಿ, ಯಾಮುನಾಚಾರ್ಯರಂತಹವರ ವಿಚಾರ ಆಸರೆಯಾಗಿತ್ತು. ಮಧ್ವಾಚಾರ್ಯರಿಗೆ ಇಂತಹ ಯಾವ ಪೂರ್ವಾಚಾರ್ಯರ ಕಾರ್ಯವೂ ಒದಗುವಂತಿರಲಿಲ್ಲ. ಅವರಿಗೆ ಪಾಠ ಹೇಳಿದ ಹಾಗೂ ಸನ್ನ್ಯಾಸದೀಕ್ಷೆ ನೀಡಿದ ಗುರುಗಳೂ ತತ್ತ್ವಜಿಜ್ಞಾಸೆಯಲ್ಲಿ ಗೊಂದಲಕ್ಕೊಳಗಾಗಿದ್ದವರೇ. ಎಂದರೆ ನೇರವಾಗಿ ವೇದೋಪನಿಷತ್ತುಗಳ, ವೇದವ್ಯಾಸರ ಕೃತಿಗಳನ್ನು ಆಧರಿಸಿಯೇ ಅವರು ಸಿದ್ಧಾಂತವನ್ನು ರೂಪಿಸಬೇಕಿತ್ತು. ಅದನ್ನು ಯಶಸ್ವಿಯಾಗಿ ಪೂರೈಸಿ, ಜಗತ್ತಿನ ಚಿಂತನಪ್ರಣಾಲಿಗೆ ದ್ವೈತದರ್ಶನದಂತಹ ಅನುಪಮದರ್ಶನವನ್ನು ನೀಡಿದ್ದು ಅವರ ಸಾಧನೆ.

ಅದರಂತೆ ಅವರು ಬ್ರಹ್ಮತರ್ಕದ ಆಧಾರದಿಂದ ಪ್ರಮಾಣಮೀಮಾಂಸೆಯನ್ನು ಒದಗಿಸಿದರು. ಪ್ರಸ್ಥಾನತ್ರಯಗಳಿಗೆ ಭಾಷ್ಯ ರಚಿಸಿದರು. ಋಗ್ಭಾಷ್ಯದಿಂದ ವೇದದ ಆಂತರ್ಯವನ್ನು ಪ್ರಕಟಿಸಿದರು. ತಂತ್ರಸಾರದಂತಹ ಕೃತಿಗಳಿಂದ ಪರಿಶುದ್ಧ ಆಚಾರ, ವಿಚಾರಗಳನ್ನು ಆವಿಷ್ಕರಿಸಿದರು. ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಭಾಗವತ-ತಾತ್ಪರ್ಯನಿರ್ಣಯಗಳ ಮೂಲಕ ಇತಿಹಾಸಪುರಾಣಗಳ ಭಾವವನ್ನು ಅನಾವರಣಗೊಳಿಸಿ-ದರು. ವೇದೋಪನಿಷತ್ತುಗಳು, ವೇದಾಂಗಗಳು, ಇತಿಹಾಸಪುರಾಣಗಳು ಹಾಗೂ ಬ್ರಹ್ಮಸಾಕ್ಷಾತ್ಕಾರ ಪಡೆದ ಋಷಿಮುನಿಗಳ ವಾಣಿಗಳ ಉಪದೇಶದಲ್ಲಿ ಏಕತೆಯನ್ನು ಸರಿದರು. ಪ್ರಪ್ರಥಮ ಬಾರಿಗೆ ಸಕಲಶಾಸ್ತ್ರಗಳ ಸಮಗ್ರದರ್ಶನವನ್ನು ಸಮಷ್ಟಿಯಾಗಿ ನೀಡಿ, ಅಧ್ಯಾತ್ಮದ ವಿರಾಡ್ರೂಪವನ್ನು ತೋರಿದರು.

ಆಸೇತುಹಿಮಾಚಲಪರ್ಯಂತ ಸಂಚರಿಸಿ, ವಿದ್ವಾಂಸರನ್ನು ಹೊಸಚಿಂತನೆಗೆ ಅಣಿಗೊಳಿಸಿ-ದರು. ಬ್ರಹ್ಮನ ನಿರ್ಗುಣತ್ವ, ನಿರಾಕಾರತ್ವದಂತಹ ವೇದಾಂತದ ಅತ್ಯಂತ ಮೂಲಭೂತ ಸಮಸ್ಯೆಗಳನ್ನು ಅಪೂರ್ವರೀತಿಯಲ್ಲಿ ಪರಿಹರಿಸಿದರು. ಒಟ್ಟಾಗಿ ದರ್ಶನಪ್ರಪಂಚದ ಚಿಂತನಸರಣಿಗೆ ಹೊಸ ಆಯಾಮವನ್ನು ನೀಡಿದರು. ಜಿಜ್ಞಾಸುಜನತೆ ಭಗವಂತನ ಕಡೆಗೆ ಮುಖ ಮಾಡುವಂತಾಯಿತು. ಅವರು ನೀಡಿದ ಭಕ್ತಿಸಿದ್ಧಾಂತ ಸಾಧಕರ ಜೀವನಕ್ಕೆ ಅಮೃತಸೇಚನವಾಯಿತು. ದಿನನಿತ್ಯದ ಜೀವನದಲ್ಲಿ ಅಧ್ಯಾತ್ಮ ಹಾಸುಹೊಕ್ಕಾಗಿ ಇಹಪರಗಳ ಧರ್ಮಸೇತು ನಿರ್ಮಾಣವಾಯಿತು. ಶ್ರೀಜಯತೀರ್ಥರು, ಶ್ರೀವ್ಯಾಸತೀರ್ಥರು ಮೊದಲಾದ ವಿದ್ವನ್ಮಣಿಗಳು ಮಧ್ವದರ್ಶನದ ಆಳವಿಸ್ತಾರಗಳನ್ನು ತಮ್ಮ ಕೃತಿರತ್ನಗಳಿಂದ ಪ್ರಕಾಶಪಡಿಸಿದರು. ದ್ವೈತದರ್ಶನದ ಹಿರಿಮೆ ಗರಿಮೆಗಳಿಗೆ ಪವಾಡ ಪ್ರಪಂಚದ ಅಚ್ಚರಿಯೆನಿಸಿರುವ ಉಡುಪಿಯ ಶ್ರೀವಾದಿರಾಜಸ್ವಾಮಿಗಳು, ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿಗಳು ಜ್ವಲಂತ ನಿದರ್ಶನ. ಅವರು ತಮ್ಮ ಸಿದ್ಧಿಯ ಸರ್ವಸ್ವವೂ ಶ್ರೀಮಧ್ವದರ್ಶನದ ಕೊಡುಗೆಯೆಂದು ಸಾರಿರುವರು.

ಜನತೆಗೆ ಅದ್ವೈತದರ್ಶನದಷ್ಟು ವ್ಯಾಪಕವಾಗಿ ದ್ವೈತದರ್ಶನದ ಪರಿಚಯವಿಲ್ಲದಿರುವುದು ದೊಡ್ಡ ಅಚ್ಚರಿ. ಪ್ರಸಿದ್ಧ ದಾರ್ಶನಿಕರಾದ ಡಾ॥ ಎಸ್.ಎನ್.ದಾಸಗುಪ್ತ ಅವರ ಮಾತು ಇಲ್ಲಿ ಗಮನಾರ್ಹ :

"Of the controversy between the monists of the Sankara school and the dualists of the Madhva school, most people are ignorant of the Madhva side of the case, though there are many who may be familiar with the monistic point of view. It is hoped that the treatment of the philosophy of Madhva and his followers undertaken in the present volume



will give new light to students of Indian thought and will present many new aspects of dialectical logic hitherto undiscovered in Indian or European thought."

-(Preface, Vol. 4, "A History of Indian Phylosophy")

ಶ್ರೀಜಯತೀರ್ಥ, ಶ್ರೀವ್ಯಾಸತೀರ್ಥರು ಪ್ರಚುರಪಡಿಸಿದ ಮಧ್ವದರ್ಶನದ ವಾದಸರಣಿ ಭಾರತೀಯ ತತ್ತ್ವಪ್ರಣಾಲಿಯಲ್ಲೇ ಅತ್ಯುನ್ನತ ಎಂದು ಅವರು ಕೊಂಡಾಡಿರುವರು :

In my opinion, Jayatirtha and Vyasatirtha present the highest dialectical skill in Indian thought. ...... The logical skill and depth of acute dialectical thinking shown by Vyasa-tirtha stands almost unrivalled in the whole field of Indian thought.

-(Preface to the 4th Volume of his celebrated work "A History of Indian Phylosophy)

### ತರ್ಕವು ಸ್ವತಂತ್ರಪ್ರಮಾಣವಲ್ಲ

ನ್ಯಾಯವೈಶೇಷಿಕರು ಪ್ರತ್ಯಕ್ಷ ಆಗಮಗಳನ್ನು ಒಪ್ಪಿದರೂ, ಅನುಮಾನ(ತರ್ಕ, ಯುಕ್ತಿ)ಕ್ಕೆ ಪ್ರಾಧಾನ್ಯವನ್ನು ನೀಡಿದರು. ಕೆಲವರು ಇದಕ್ಕೆ ವಿರುದ್ಧವಾಗಿ ಯುಕ್ತಿಯ ಪ್ರಾಮಾಣ್ಯವನ್ನೇ ಅಲ್ಲಗಳೆದರು.

ಆದರೆ ಯುಕ್ತಿಯು ಪ್ರಮಾಣವೆಂಬುದು ನಿಶ್ಚಿತ. ಅದಿಲ್ಲವಾದಲ್ಲಿ ಮನುಷ್ಯನ ಬುದ್ಧಿಶಕ್ತಿಗೆ ಕೆಲಸವೇ ಇರದು. ನಿತ್ಯಜೀವನದಿಂದ ಹಿಡಿದು ಅಲೌಕಿಕಸಾಧನೆಯವರೆಗೂ ಇದರ ಪಾತ್ರ ಅನಿವಾರ್ಯ. ಆದರೆ ಅದು ಎಂದಿಗೂ ಸ್ವತಂತ್ರಪ್ರಮಾಣವೆನ್ನಿಸದು. ಐಂದ್ರಿಯಕವಿಷಯಗಳ ಬಗ್ಗೆ ಪ್ರತ್ಯಕ್ಷವನ್ನೂ, ಅತೀಂದ್ರಿಯವಿಷಯಗಳ ಬಗ್ಗೆ ಆಗಮವನ್ನೂ ಆಧರಿಸದೆ ಅದಕ್ಕೆ ವಿಧಿಯಿಲ್ಲ. ಎಂದರೆ ಅದು ಎಂದಿಗೂ ಅದರ ಹೆಸರೇ ಹೇಳುವಂತೆ 'ಅನು'ಮಾನ; ಇತರ ಪ್ರಮಾಣಗಳನ್ನು ಅವಲಂಬಿಸಿದ ಸಾಪೇಕ್ಷಪ್ರಮಾಣ. ಕೇವಲ ಯುಕ್ತಿಯಿಂದ ವಾದಿಸಿದಲ್ಲಿ ಕುಂಬಳಕಾಯಿ ಬಿಡುವ ಬಳ್ಳಿ ಮಾವಿನಹಣ್ಣು ಬಿಡುವ ವೃಕ್ಷಕ್ಕಿಂತ ಬಹು ದೊಡ್ಡ ವೃಕ್ಷವಾಗಬೇಕಾದೀತು! ಎತ್ತು ಮೊದಲಾದ ಪ್ರಾಣಿಗಳಂತೆ ಮನುಷ್ಯನೂ ಪ್ರಾಣಿಯಾಗಿರು-ವುದರಿಂದ, ಅವನಿಗೂ ಅವುಗಳಿಗಿರುವಂತೆ ಕೋಡುಗಳಿರಬೇಕಾದೀತು! ಆದ್ದರಿಂದ ಯುಕ್ತಿಯನ್ನು ಪ್ರತ್ಯಕ್ಷ, ಆಗಮಗಳನ್ನು ಅವಲಂಬಿಸಿದ ಒಂದು ಉಗಿಬಂಡಿಯಂತೆ. ಅದರಲ್ಲಿ ಒಂದು ಹಳಿ ಇಲ್ಲವಾದರೂ, ಅದರ ಪ್ರಯಾಣ ಅಪಾಯಕರ ಎಂದು ಸಾಧಿಸಿದ್ದು ಮಧ್ವದರ್ಶನದ ಹಿರಿಮೆ. 'ಅನುಮಾನತೀರ್ಥ' ಎಂಬ ಅವರ ವಿಶಿಷ್ಟಪ್ರಶಸ್ತಿ ಅವರ ಸಾಧನೆಗೆ ಸಂದ ಗೌರವ.

ವೇದಗಳಂತೆ ವೇದಾಂಗಗಳು, ಭಾಗವತಾದಿ ಪುರಾಣಗಳು, ಮನುಸ್ಮೃತಿ ಮೊದಲಾದ ಸ್ಮೃತಿಗಳು ಶಾಸ್ತ್ರವೇ ಆಗಿದೆ. ವೇದಗಳೊಂದಿಗೆ ಮಹಾಭಾರತ, ರಾಮಾಯಣ ಮತ್ತು ಪಂಚರಾತ್ರಗಳೆಂಬ ಇತಿಹಾಸಗಳು ಸಹ ಮುಖ್ಯ ಶಾಸ್ತ್ರವೇ ಆಗಿವೆ. ಅವುಗಳಲ್ಲಿ ಎಂದೂ ಅರ್ಥಭೇದವಿಲ್ಲವೆಂದು ತಿಳಿಸಿ, ಅವುಗಳ ಸಮಷ್ಟಿದರ್ಶನದಲ್ಲಿ ಏಕತೆಯನ್ನು ಪ್ರತಿಪಾದಿಸಿದ್ದು ಮಧ್ವದರ್ಶನ. ಅದಕ್ಕೆಂದೇ ಇದು ವೇದೇತಿಹಾಸಗಳ ಸಮಗ್ರದರ್ಶನ:

**ಅರ್ಥೋಽಯಮೇವ ನಿಖಿಲೈರಪಿ ವೇದವಾಕ್ಯೈ**
**ರಾಮಾಯಣೈಃ ಸಹಿತಭಾರತಪಂಚರಾತ್ರೈಃ ।**
**ಅನ್ಯೈಶ್ಚ ಶಾಸ್ತ್ರವಚನೈಃ ಸಹತತ್ತ್ವಸೂತ್ರೈ-**
**ರ್ನಿರ್ಣೀಯತೇ ಸಹೃದಯಂ ಹರಿಣಾ ಸದೈವ ॥**

- (ಮಹಾಭಾರತತಾತ್ಪರ್ಯನಿರ್ಣಯ)

ಮಹಾಭಾರತಾದಿಗಳೆಲ್ಲ ಕೇವಲ ಇತಿಹಾಸವಾಗಿರದೆ ಮೂಲತಃ ಅಧ್ಯಾತ್ಮಶಾಸ್ತ್ರವಾಗಿವೆ. ವೇದಾದಿ ಸಕಲಶಾಸ್ತ್ರಗಳ ಸಾರವಾಗಿ ಮಹಾಭಾರತ ಅವಕ್ಕಿಂತ ಮಿಗಿಲಾದರೆ, ಭಗವದ್ಗೀತೆ ವಿಷ್ಣುಸಹಸ್ರನಾಮಗಳು ಅದರ ಸಾರವಾಗಿವೆ; ವೇದಗಳಿಗೆಲ್ಲ ಅತಿಕಡಿಮೆ ಎಂದರೆ ಮೂರರ್ಥ; ಮಹಾಭಾರತಕ್ಕೆ ಹತ್ತು ಅರ್ಥಗಳು, ವಿಷ್ಣುಸಹಸ್ರನಾಮಗಳಿಗೆ ನೂರು ಅರ್ಥಗಳು ಮೊದಲಾದ ಅಪೂರ್ವ ವಿಷಯಗಳನ್ನು ಸೋದಾಹರಣವಾಗಿ ತಿಳಿಸಿದವರು ಆಚಾರ್ಯ ಶ್ರೀಮಧ್ವರು. ಮಹಾಭಾರತದ ಹಿರಿಮೆಯನ್ನೂ, ಅದರ ಸಾರವನ್ನೂ, ಆಧ್ಯಾತ್ಮಿಕಮಹತ್ತ್ವವನ್ನೂ ಜಟಿಲಪ್ರಸಂಗಗಳಿಗೆಲ್ಲ ನಿರ್ಣಯವನ್ನೂ ಒದಗಿಸಿದ ಅವರ ಮಹಾಭಾರತತಾತ್ಪರ್ಯನಿರ್ಣಯವು ಮಹಾಭಾರತದ ನಂತರ ಬಂದ ಏಕಮಾತ್ರ ಗ್ರಂಥ. ಈ ದೃಷ್ಟಿಯಲ್ಲಿ ಅವರು 'ಅಭಿನವವೇದವ್ಯಾಸರು'.

**'ತ್ರಯೋಽರ್ಥಾಃ ಸರ್ವವೇದೇಷು ದಶಾರ್ಥಾಃ ಸರ್ವಭಾರತೇ ।**
**ವಿಷ್ಣೋಃ ಸಹಸ್ರನಾಮಾಪಿ ನಿರಂತರಶತಾರ್ಥಕಮ್' ॥**

## ಪರಮಾತ್ಮ ವಾದ

ಚಾರ್ವಾಕನು ದೇಹದಿಂದ ಬೇರೆಯಾದ ಆತ್ಮನನ್ನು ಒಪ್ಪಲಿಲ್ಲ; ಬೌದ್ಧರು ನೈರಾತ್ಮ್ಯ-ವಾದಿಗಳು; ಜೈನರು ಮತ್ತು ಸಾಂಖ್ಯರು ಜೀವಾತ್ಮನನ್ನು ಒಪ್ಪಿದರೂ ಪರಮಾತ್ಮನನ್ನು ಒಪ್ಪಲಿಲ್ಲ; ನ್ಯಾಯವೈಶೇಷಿಕರು ಪರಮಾತ್ಮನನ್ನು ಒಪ್ಪಿದರೂ ಅವನಿಗೆ ಪಾರಮ್ಯ ಒಪ್ಪಲಿಲ್ಲ; ಪೂರ್ವಮೀಮಾಂಸಕರು ಈಶ್ವರನನ್ನೇ ಒಪ್ಪದ ನಿರೀಶ್ವರವಾದಿಗಳು. ಅದ್ವೈತಿಗಳು ಆತ್ಮ ಒಂದೇ ತತ್ತ್ವ ಎಂದರು; ವಿಶಿಷ್ಟಾದ್ವೈತಿಗಳು ಪರಮಾತ್ಮನನ್ನು ಒಪ್ಪಿದರೂ ಅವನಿಗೆ ಉಪಾದಾನಕಾರಣತ್ವವನ್ನು ಸಹ ಒಪ್ಪಿದರು. ಆದರೆ ಪರಮಾತ್ಮನನ್ನು ಇತರ ಎಲ್ಲ ಚೇತನರಿಗಿಂತ ಭಿನ್ನ; ಅಚೇತನಗಳಿಗಿಂತಲೂ ಭಿನ್ನ. ಅವನು ಇತರ ಎಲ್ಲ ಆತ್ಮಗಳಿಗಿಂತ ಮಿಗಿಲಾದವನು. ಸರ್ವರಿಗೂ ಒಡೆಯನಾದವನು. ಅದಕ್ಕೆಂದೇ ಅವನು ಪರಮಾತ್ಮ ಎಂದು ಒಪ್ಪಿದ್ದು ಶ್ರೀಮಧ್ವರ ದ್ವೈತದರ್ಶನ.



## ಸ್ವತಂತ್ರ-ಅಸ್ವತಂತ್ರ

ಸ್ವತಂತ್ರ ಮತ್ತು ಅಸ್ವತಂತ್ರ ಎಂಬುದಾಗಿ ತತ್ತ್ವವಿಭಾಗ ಮಧ್ವದರ್ಶನದ ವೈಶಿಷ್ಟ್ಯ. ಸ್ವತಂತ್ರ ಎಂದರೆ ತನ್ನ ಇರುವಿಕೆ, ತಿಳುವಳಿಕೆ ಹಾಗೂ ಚಟುವಟಿಕೆಗಳಲ್ಲಿ ಇತರ ಯಾರನ್ನೂ ಅವಲಂಬಿಸದ ತತ್ತ್ವ; ಇತರರನ್ನು ಅವಲಂಬಿಸಿದ್ದು ಅಸ್ವತಂತ್ರ ತತ್ತ್ವ. ಭಗವಂತನೊಬ್ಬನೇ ಸ್ವತಂತ್ರ. ಉಳಿದೆಲ್ಲ ಜಗತ್ತು ಅಸ್ವತಂತ್ರ. ಭಗವಂತನ ಇರುವಿಕೆಗೆ ಬೇರಾರೂ ಬೇಕಿಲ್ಲ; ಆದರೆ ಇತರರ ಇರುವಿಕೆ ಮೊದಲಾದ ಎಲ್ಲಕ್ಕೂ ಭಗವಂತನ ಆಸರೆ ಅನಿವಾರ್ಯ. ಸರ್ವರ ಅನುಭವವಿರುವುದೂ ಅಂತೆಯೇ. ಎಲ್ಲವನ್ನೂ ತಿಳಿದ, ಏನನ್ನೂ ಮಾಡುವ, ಹೇಗೂ ಇರುವ ಸಾಮರ್ಥ್ಯ ಯಾರಿಗೂ ಇಲ್ಲ ಎಂಬುದು ಸರ್ವಾನುಭವವೇದ್ಯ. ಭಗವಂತ ಮಾತ್ರ ಇದಕ್ಕೆ ಅಪವಾದ.

## ಜೀವ, ಜಡ, ಈಶ್ವರ

ಕೆಲವು ದಾರ್ಶನಿಕರು ಜಡದ ಅಸ್ತಿತ್ವವನ್ನು ಒಪ್ಪದೆ, ಚೇತನವನ್ನು ಮಾತ್ರ ಒಪ್ಪಿದ ಚೈತನ್ಯವಾದಿಗಳು(Idealists); ಜಡಗಳೆಲ್ಲ ಇವರ ದೃಷ್ಟಿಯಲ್ಲಿ ಚೇತನದ ವಿಕಾರ ಮಾತ್ರ. ಮತ್ತೆ ಕೆಲವರು ಜಡವನ್ನು ಮಾತ್ರ ಒಪ್ಪಿ ಚೇತನವನ್ನು ಒಪ್ಪದ ಜಡವಾದಿಗಳು (Materialists). ಇವರ ದೃಷ್ಟಿಯಲ್ಲಿ ಚೇತನವೆಲ್ಲ ಜಡದ ವಿಕಾರ. ಕೆಲವರು ಜಡ, ಚೇತನ, ಯಾವುದನ್ನೂ ಒಪ್ಪದ ಶೂನ್ಯವಾದಿಗಳು(Nihilists); ಕೆಲವರು ಚೇತನ, ಜಡ ಎರಡನ್ನೂ ಒಪ್ಪಿದರೂ, ದೇವರನ್ನು ಒಪ್ಪದ ನಾಸ್ತಿಕರು. ಮಧ್ವದರ್ಶನ ಜೀವ, ಜಡ ಮತ್ತು ಈಶ್ವರ ಎಂಬ ಮೂರು ತತ್ತ್ವಗಳನ್ನೂ ಒಪ್ಪಿದ ದರ್ಶನ. ಜಡವೆಂದೂ ಚೇತನವಾಗದು. ಹಾಗೆ ಚೇತನವೆಂದೂ ಜಡವೂ ಆಗದು. ಜಡವು ಜಡವೇ; ಚೇತನವು ಚೇತನವೇ; ಅಂತೆಯೇ ಈಶ್ವರನು ಈಶ್ವರನೇ.

ಭಗವಂತ ಸರ್ವಜ್ಞ, ಸರ್ವಶಕ್ತ ಹಾಗೂ ಸರ್ವವ್ಯಾಪ್ತ; ಜೀವ ಅಲ್ಪಜ್ಞ, ಅಲ್ಪಶಕ್ತ ಹಾಗೂ ಅಣು; ಜಡ ಜ್ಞಾನರಹಿತ. ಜೀವಜಡಗಳೆಲ್ಲ ಭಗವಂತನ ಅಧೀನ.

ಜೀವರ ಸಂಖ್ಯೆ ಅನಂತ; ಜಡದ ವ್ಯಾಪ್ತಿ ಅಪರಿಮಿತ; ಈಶ್ವರ ಮಾತ್ರ ಒಬ್ಬನೇ. ಜೀವರು ಪರಸ್ಪರ ಭಿನ್ನ; ಜಡಗಳೂ ಅಂತೆಯೇ. ಈಶ್ವರನು ಸಕಲ ಜೀವಜಡಗಳಿಂದಲೂ ಭಿನ್ನ. ಇದೇ ಮಧ್ವದರ್ಶನದ ಪಂಚಭೇದತತ್ತ್ವ. ನಿತ್ಯಜೀವನದಲ್ಲಿ ನಾವೆಲ್ಲ ಕಾಣುವ ತತ್ತ್ವವೂ ಇದೇ. ಇದರಂತೆ ಯಾವ ಇಬ್ಬರೂ ಒಂದೇ ತೆರನಾಗಿಲ್ಲ. ಯಾವ ಎರಡು ವಸ್ತುಗಳೂ ಒಂದೇ ತೆರನಾಗಿಲ್ಲ. (**'ಭಿನ್ನಾಶ್ಚ ಭಿನ್ನಧರ್ಮಾಶ್ಚ ಪದಾರ್ಥಾ ನಿಖಿಲಾ ಅಪಿ'**) ಒಂದೇ ರೀತಿಯ ವಸ್ತುಗಳೂ ಪೂರ್ಣ ಒಂದೇ ಆಗಿಲ್ಲ. ನಮ್ಮ ನಿತ್ಯವ್ಯವಹಾರ ನಡೆದಿರುವುದೂ ಈ ತತ್ತ್ವವನ್ನು ಆಧರಿಸಿಯೇ ಎಂಬುದು ಈ ದರ್ಶನದ ಪ್ರಾಯೋಗಿಕಮಹತ್ತ್ವಕ್ಕೆ ನಿದರ್ಶನ.

ಅನೇಕರು ಈ ಭೇದಪರಿಕಲ್ಪನೆಯನ್ನು ರಾಜನೀತಿಯ ಭೇದತಂತ್ರಕ್ಕೂ, ಪಂಚತಂತ್ರದ (ಮಿತ್ರ)ಭೇದಕ್ಕೂ ಅನ್ವಯಿಸಿ, ಇದೊಂದು ಒಡಕು ಹುಟ್ಟಿಸುವ ಸಿದ್ಧಾಂತ ಎಂದು

ಆಕ್ಷೇಪಿಸುವುದುಂಟು. ಆದರೆ ಮೇಲೆ ಹೇಳಿದಂತೆ ಇದು ವಸ್ತುಗಳಲ್ಲಿರುವ ಭೇದವನ್ನು ಪ್ರತಿಪಾದಿಸುವ ವಸ್ತುನಿಷ್ಠವಿವೇಚನೆ. ಅತ್ಯಂತವೈಜ್ಞಾನಿಕ ಚಿಂತನಸರಣಿ. ವಸ್ತುಗಳಲ್ಲಿನ ಭೇದವನ್ನು ಹೀಗೆ ಗುರುತಿಸುತ್ತಲೇ ಅವುಗಳನ್ನೆಲ್ಲ ಭಗವಂತನ ಅಧೀನವೆಂದು ಒಂದೇ ತೆರನಾಗಿ ಕಾಣಬೇಕು ಎಂಬುದು ಅದರ ಭಾವ.

## ತಾರತಮ್ಯ

ಭೇದತತ್ತ್ವದಂತೆ ತಾರತಮ್ಯ ಮಧ್ವದರ್ಶನದ ಮತ್ತೊಂದು ಪ್ರಧಾನ ತತ್ತ್ವ. ವಸ್ತುಗಳು ಬೇರೆಬೇರೆಯಾಗಿರುವಂತೆ ಅವುಗಳ ಯೋಗ್ಯತೆಯಲ್ಲಿಯೂ ಭಿನ್ನತೆ ಇದೆ ಎಂಬುದು ಇದರ ಭಾವ. ಕೆಲವು ಯೋಗ್ಯತೆಯಲ್ಲಿ ಮಿಗಿಲೆನ್ನಿಸಿದ್ದರೆ, ಮತ್ತೆ ಕೆಲವು ನಿಕೃಷ್ಟವೆನ್ನಿಸುತ್ತವೆ. ಇದಿಲ್ಲದ ಜೀವನವನ್ನು ನಾವು ಊಹಿಸುವುದೂ ಸಾಧ್ಯವಿಲ್ಲ. ಎಲ್ಲರ ನಿತ್ಯದ ಬದುಕು ಇಂತಹ ಗುಣಮಟ್ಟದ ವಿವೇಚನೆಯ ಹಿನ್ನೆಲೆಯಲ್ಲಿಯೇ ಸಾಗುತ್ತಿದೆ. ಆದರೆ ಇದೊಂದು ವ್ಯಾವಹಾರಿಕ ಪರಿಕಲ್ಪನೆ ಮಾತ್ರವಲ್ಲದೆ, ವಸ್ತುನಿಷ್ಠವಾದ ತತ್ತ್ವ ಎಂದು ಪ್ರತಿಪಾದಿಸಿದ್ದು ಮಧ್ವದರ್ಶನ. ಇಂತಹ ತಾರತಮ್ಯ ವಸ್ತುಗಳಲ್ಲಿ ಮಾತ್ರವಲ್ಲದೆ, ವ್ಯಕ್ತಿಗಳಲ್ಲೂ ಉಂಟು. ಅಂತೆಯೇ ಗುರುಹಿರಿಯರಲ್ಲೂ, ದೇವತೆಗಳಲ್ಲೂ, (ಹಾಗೂ ದೈತ್ಯರಲ್ಲೂ) ಈ ರೀತಿಯ ತಾರತಮ್ಯ ಇದ್ದೇ ಇದೆ. ತೈತ್ತಿರೀಯೋಪನಿಷತ್ತಿನ ಬ್ರಹ್ಮವಲ್ಲಿಯಲ್ಲಿ ಇದರ ಬಗ್ಗೆ ಸ್ಪಷ್ಟ ನಿರೂಪಣೆ ಉಂಟು. ಹೀಗಿದ್ದೂ ಇದನ್ನು ತಾತ್ತ್ವಿಕವಾಗಿ ಪ್ರತಿಪಾದಿಸಿದ್ದು ಶ್ರೀಮಧ್ವದರ್ಶನ.

ಭೇದಸಿದ್ಧಾಂತದಂತೆ ಈ ತಾರತಮ್ಯಸಿದ್ಧಾಂತವನ್ನೂ ತಪ್ಪಾಗಿ ತಿಳಿದು, ಇದನ್ನು ಪಕ್ಷಪಾತಭಾವವನ್ನು ಬಿತ್ತುವ ಸಿದ್ಧಾಂತ ಎಂದು ಕೆಲವರು ಆಕ್ಷೇಪಿಸುವುದುಂಟು. ಆದರೆ ಇದೂ ಸಹ ಭೇದಸಿದ್ಧಾಂತದಂತೆ ವಸ್ತುಸ್ಥಿತಿಯನ್ನು ನಿರೂಪಿಸುವ ತತ್ತ್ವ. ವಸ್ತುಗಳಲ್ಲಿ ತಾರತಮ್ಯ ಅನಿವಾರ್ಯ. ಅದಕ್ಕೆ ತಕ್ಕಂತೆ ಅವುಗಳಿಗೆ ಸಲ್ಲಬೇಕಾದ ಆದರ, ವಿಶ್ವಾಸಗಳಲ್ಲೂ ತಾರತಮ್ಯ ಅನಿವಾರ್ಯ. ನಿಷ್ಪಕ್ಷಪಾತಿಯಾದ ಪರೀಕ್ಷಕ ಉತ್ತರದ ಯೋಗ್ಯತೆಯನ್ನನುಸರಿಸಿ ನೀಡುವ ಅಂಕಗಳು ಬೇರೆಯಾಗುವುದು ಅನಿವಾರ್ಯ. ಎಂದರೆ ಅದು ಪಕ್ಷಪಾತಧೋರಣೆ ಆಗಬೇಕಿಲ್ಲ. ಊಟ ಬಡಿಸುವಾಗಲೂ ಎಲ್ಲರಿಗೂ ಒಂದೇ ಪ್ರಮಾಣದಲ್ಲಿ ಬಡಿಸದೆ, ಅವರ ಸಾಮರ್ಥ್ಯಕ್ಕನುಗುಣವಾಗಿ ಬಡಿಸುವುದು ಬಡಿಸುವವನ ಕರ್ತವ್ಯ. ಅಂತಹ ತಾರತಮ್ಯ ಪಕ್ಷಪಾತವೆನ್ನಿಸದೆ, ವಿವೇಕವೆಂದೇ ಮಾನ್ಯವಾಗುವುದು.

ಎಂದರೆ ಇದು ತಾರತಮ್ಯ ಮಾಡಲು ಹೇಳುವ ಸಿದ್ಧಾಂತವಲ್ಲ; ಇರುವ ತಾರತಮ್ಯವನ್ನು ಅರಿತು, ಎಚ್ಚರದಿಂದ ಬದುಕಲು ಉಪದೇಶಿಸುವ ಸಿದ್ಧಾಂತ.

## ಅಂತರ್ಯಾಮಿತತ್ತ್ವ

ಪಾತ್ರೆಯೊಳಗೆ ಹಾಲಿರುವಂತೆ ದೇಹದೊಳಗೆ ಜೀವ ಇರುವುದು ಸತ್ಯ. ಅದರಂತೆ ಆ ಜೀವನೊಳಗೆ ಭಗವಂತ ನೆಲೆಸಿರುವನು. ಪ್ರತಿಯೊಂದು ವಸ್ತುವಿನಲ್ಲೂ ಭಗವಂತ ಹಾಗೆ ನೆಲೆಸಿದ್ದು ಆಯಾ ವಸ್ತುವನ್ನು, ಅದರ ಗುಣಧರ್ಮಗಳನ್ನು ನಿಯಂತ್ರಿಸುತ್ತಿರುವನು.



ಭಗವಂತನ ಈ ಬಗೆಯ ನಿಯಂತ್ರಣದ ಪರಿಯನ್ನೇ ಅಂತರ್ಯಾಮಿ ಪರಿಕಲ್ಪನೆ ಎಂದು ಕರೆಯಲಾಗಿದೆ. ಬೃಹದಾರಣ್ಯಕೋಪನಿಷತ್ತಿನ ಅಂತರ್ಯಾಮಿಬ್ರಾಹ್ಮಣದಲ್ಲಿ, ಹಾಗೂ ಭಗವದ್ಗೀತೆಯಲ್ಲಿ ಇದರ ಸ್ಪಷ್ಟ ನಿರೂಪಣೆಯುಂಟು. ಇದನ್ನು ಸಹ ತಾತ್ತ್ವಿಕವಾಗಿ ಪ್ರತಿಪಾದಿಸಿದ್ದು ಮಧ್ವದರ್ಶನ.

ಭಗವಂತ ಎಲ್ಲೆಡೆಯೂ ಹೀಗೆ ನೆಲೆಸಿರುವುದರಿಂದಲೇ ಅವನು ಸರ್ವಾಂತರ್ಯಾಮಿ. ಎಲ್ಲವಸ್ತುಗಳಲ್ಲೂ, ಎಲ್ಲಚೇತನಗಳಲ್ಲೂ, ಎಲ್ಲದೇವತೆಗಳಲ್ಲೂ ಅಂತರ್ಯಾಮಿಯಾಗಿರು-ವವನು ಆ ಭಗವಂತನೇ. ಅವನಿಲ್ಲದೆ ಯಾವುದೂ ವರ್ತಿಸದು(**'ತೇನ ವಿನಾ ತೃಣಮಪಿ ನ ಚಲತಿ'**). ಆದ್ದರಿಂದ ಯಾವುದರೊಂದಿಗೆ ವ್ಯವಹರಿಸುವಾಗಲೂ, ಇತರ ದೇವತೆಗಳನ್ನು ಆರಾಧಿಸುವಾಗಲೂ ಈ ತತ್ತ್ವದ ಚಿಂತನೆ ಅನಿವಾರ್ಯ ಎಂಬುದು ಅವರ ಪ್ರತಿಪಾದನೆ.

## ಮಾಯಾವಾದ-ತತ್ತ್ವವಾದ

ಕೆಲವರು ಬ್ರಹ್ಮನನ್ನು ಮಾತ್ರ ತತ್ತ್ವವೆಂದು ಭಾವಿಸಿ, ಜಗತ್ತನ್ನು ಮಾಯಾಕಲ್ಪಿತವೆಂದರು. ಮಾಯಾವಾದವೆಂದರೆ ಇದೇ. ವಿವರ್ತವಾದ ಇದರ ನಾಮಾಂತರ.

ಹಗ್ಗವನ್ನು ನೋಡಿ ಹಾವೆಂದು ತಿಳಿದಂತೆ ಈ ಜಗತ್ತಿನ ಪರಿಕಲ್ಪನೆ; ಅಲ್ಲಿ ವಸ್ತುತಃ ಇರುವುದು ಹಗ್ಗವೇ ಹೊರತು ಹಾವಲ್ಲ. ಹಾಗೆ ಸದಾ ಇರುವುದು ಹಗ್ಗದಂತಹ ಬ್ರಹ್ಮತತ್ತ್ವವೊಂದೇ; ಇತರ ಜಗತ್ತು ಕಂಡ ಹಾವಿನಂತೆ ಮಿಥ್ಯೆ ಎಂಬುದು ಮಾಯಾವಾದದ ತಿರುಳು. ಆದರೆ ಹಗ್ಗ ಒಂದೇ ಇರುವುದಾದಲ್ಲಿ ಅದು ಹಾವು ಎಂದು ಕಂಡದ್ದು ಯಾರಿಗೆ? ಹಾವು ಎಂಬುದು ನಿಜವಾಗಲೂ ಇಲ್ಲದಿದ್ದಲ್ಲಿ ಹಗ್ಗವನ್ನು ನೋಡಿದಾಗ ಹಾವೆಂದು ಭ್ರಮಿಸಲು ಎಂತು ಸಾಧ್ಯ? ಹಗ್ಗವನ್ನು ಹಗ್ಗ ಎಂದು ತಿಳಿಯಲು ಹಗ್ಗದ ಪರಿಜ್ಞಾನವೊಂದೇ ಸಾಕು; ಆದರೆ ಹಗ್ಗವನ್ನು ಹಾವೆಂದು ತಿಳಿಯಲು ಹಾವಿನ ಪರಿಜ್ಞಾನವು ಇರಲೇಬೇಕು. ಎಂದರೆ ನಿಜವಾದ ಹಾವೂ ಸಹ ಒಂದೆಡೆ ಇರಲೇಬೇಕು. ಆದ್ದರಿಂದ ಅನೇಕ ತತ್ತ್ವವನ್ನು ಒಪ್ಪದೇ ಮಾಯಾವಾದ ಉಳಿಯದು. ಎಂದರೆ ಅದು ಮೂಲತಃ ತತ್ತ್ವವಾದವೇ ಆಗಬೇಕಾಗುವುದು ಎಂದದ್ದು ಮಧ್ವದರ್ಶನ.

## ಜೀವತ್ರೈವಿಧ್ಯ

ಜೀವರು ಅನಂತ; ಅವರು ಮೂರು ಬಗೆ; ಸಾತ್ತ್ವಿಕ, ರಾಜಸ ಮತ್ತು ತಾಮಸ ಎಂಬುದಾಗಿ. ಸಾತ್ತ್ವಿಕರು ಸುಜೀವಿಗಳಾದರೆ, ತಾಮಸರು ಕುಜೀವಿಗಳು. ರಾಜಸರದು ಮಿಶ್ರಸ್ವಭಾವ. ಸಾತ್ತ್ವಿಕರದು ದೈವೀಸಂಪತ್ತು; ತಾಮಸರದು ಆಸುರೀಸಂಪತ್ತು. ಇದು ಮಧ್ವದರ್ಶನದ ಪರಿಕಲ್ಪನೆ ಮಾತ್ರ ಎಂಬ ತಪ್ಪು ತಿಳುವಳಿಕೆ ಅನೇಕರದು. ಈ ಜೀವತ್ರೈವಿಧ್ಯದ ಪರಿಕಲ್ಪನೆ ಮೂಲತಃ ವೇದೋಪನಿಷತ್ತುಗಳದು. ಭಗವದ್ಗೀತೆಯಲ್ಲೂ ಇದರ ಪ್ರತಿಪಾದನೆ ಇದೆ. ನಿತ್ಯಜೀವನದಲ್ಲೂ ಇದು ನಮಗೆಲ್ಲ ಕಾಣುವಂತಹುದು. ಭಗವದ್ಭಕ್ತಿ, ಲೋಕೋಪಕಾರ, ಪ್ರಾಮಾಣಿಕತೆ ಮೊದಲಾದವುಗಳು ಸಾತ್ತ್ವಿಕಲಕ್ಷಣ. ಭಗವದ್ದ್ವೇಷ,

ಲೋಕಾಪಕಾರ, ಕಪಟವಂಚನೆಗಳು ತಾಮಸಲಕ್ಷಣ. ರಾಜಸರದು ಈ ಎರಡರ ಮಿಶ್ರಣ. ಇವೆಲ್ಲ ಅವರ ಸಹಜಗುಣಗಳು. ಆದ್ದರಿಂದಲೇ ಅವೆಂದೂ ಬದಲಾವಣೆಯನ್ನೂ ಕಾಣವು.

### ಸಗುಣ-ನಿರ್ಗುಣ

ಭಗವಂತನ ಗುಣಗಳ ಸಂಖ್ಯೆಯ ಬಗ್ಗೆಯೂ ದಾರ್ಶನಿಕರದು ವಿಭಿನ್ನ ಪರಿಕಲ್ಪನೆ. ಬ್ರಹ್ಮ ಒಂದೂ ಗುಣವಿಲ್ಲದ ನಿರ್ಗುಣನೆಂಬ ವಾದ ಕೆಲವರದಾದರೆ, ಎಂಟು ಗುಣಗಳಿಂದ ಕೂಡಿದವನೆಂಬ ವಾದ ಮತ್ತೆ ಕೆಲವರದು. ಆದರೆ ಭಗವಂತ ಅನಂತಾನಂತಕಲ್ಯಾಣ ಗುಣಪರಿಪೂರ್ಣ ಎಂಬ ನಿಲುವನ್ನು ಪ್ರತಿಪಾದಿಸಿದ್ದು ದ್ವೈತದರ್ಶನ.

ಭಗವಂತನು ಸಗುಣನೋ, ನಿರ್ಗುಣನೋ? ಇದು ಅನೇಕ ಪ್ರಮುಖದರ್ಶನಗಳನ್ನು ಕಾಡಿರುವ ಸಮಸ್ಯೆ. ಎರಡು ಬಗೆಯ ಪ್ರತಿಪಾದನೆಯೂ ಶಾಸ್ತ್ರಗಳಲ್ಲಿ ಕಂಡಿರುವುದು ಇದರ ಹಿನ್ನೆಲೆ. ಅವನು ಸಗುಣನಾದರೆ ನಿರ್ಗುಣನಾಗಲಾರ; ನಿರ್ಗುಣನಾದರೆ ಸಗುಣನಾಗಲಾರ. ಎಂದರೆ ಇವೆರಡೂ ಕತ್ತಲೆ, ಬೆಳಕಿನಂತೆ ವಿರುದ್ಧಧರ್ಮಗಳು. ಇವುಗಳ ಸಮನ್ವಯ ಹೇಗೆ? ಕೆಲವರು ಸಗುಣಬ್ರಹ್ಮ, ನಿರ್ಗುಣಬ್ರಹ್ಮ ಎಂಬುದಾಗಿ ಇಬ್ಬರು ಬ್ರಹ್ಮರನ್ನು ಕಲ್ಪಿಸಿ, ಇದಕ್ಕೆ ಪರಿಹಾರ ಕಾಣಲು ಯತ್ನಿಸಿದ್ದುಂಟು.

ಮಧ್ವದರ್ಶನ ಇದಕ್ಕೆ ಸೂಕ್ತಪರಿಹಾರ ನೀಡಿದೆ. ಬ್ರಹ್ಮನು ಸಗುಣನೂ ಹೌದು; ನಿರ್ಗುಣನೂ ಹೌದು. ಅವನು ಜ್ಞಾನಾನಂದಾದಿ ಅನಂತಕಲ್ಯಾಣಗುಣಗಳ ನಿಧಿ; ಆದ್ದರಿಂದ ಸಗುಣ. ಅವನ ಗುಣಗಳಾವುವೂ ಪ್ರಕೃತಿಯ ಗುಣಗಳಾದ ಸತ್ತ್ವಗುಣ, ರಜೋಗುಣ ಹಾಗೂ ತಮೋಗುಣಗಳಿಂದಾದವುಗಳಲ್ಲ; ಆದ್ದರಿಂದ ಅವನು ನಿರ್ಗುಣ. ಭಗವಂತನ ಗುಣಗಳು ಸಹಜವಾದವು; ಪ್ರಕೃತಿಯಿಂದ ಬಂದವುಗಳಲ್ಲ. ಒಂದು ಹಣ್ಣು ಸಹಜವಾಗಿ ಸಿಹಿ ಇರುವುದು ಬೇರೆ. ಆದರೆ ಅದು ಹುಳಿಯಾಗಿದ್ದು, ಸಕ್ಕರೆಬೆಲ್ಲಗಳಿಂದ ಸಿಹಿಯಾಗುವುದು ಬೇರೆ. ಸಗುಣನಿರ್ಗುಣಗಳ ಪರಿಕಲ್ಪನೆ ಇಂತಹುದು.

### ಬ್ರಹ್ಮ ನಿರ್ಗುಣನೇ?

ನಿರ್ಗುಣಬ್ರಹ್ಮ ಎಂಬ ಪರಿಕಲ್ಪನೆ ಮಾಯಾವಾದ ದರ್ಶನದ್ದು. ಆದರೆ ಅದು ಸರಿಯಾಗದು. 'ಬ್ರಹ್ಮ' ಎಂದರೆ ಗುಣಪೂರ್ಣ ಎಂದೇ ಅರ್ಥ (**'ಬೃಹಂತೋ ಹ್ಯಸ್ಮಿನ್ ಗುಣಾಃ'**). ನಿರ್ಗುಣ ಎಂದರೆ ಗುಣವಿಲ್ಲದ್ದು ಎಂದರ್ಥ. ಹೀಗಾಗಿ ನಿರ್ಗುಣಬ್ರಹ್ಮ ಎನ್ನುವುದು Round Square ಎನ್ನುವಂತೆ ವ್ಯಾಹತಪದ. ಬ್ರಹ್ಮ ಎಂದೂ ನಿರ್ಗುಣ-ನಾಗಲು ಸಾಧ್ಯವಿಲ್ಲ. ಆದ್ದರಿಂದ ನಿರ್ಗುಣ ಎಂದರೆ ಪ್ರಾಕೃತಗುಣವರ್ಜಿತ ಎಂದೇ ಭಾವ.

### ಸಾಕಾರ-ನಿರಾಕಾರ

ಬ್ರಹ್ಮನ ಗುಣಗಳ ಜಿಜ್ಞಾಸೆಯಂತೆ ಅವನ ಆಕಾರದ ಬಗ್ಗೆಯೂ ಬಗೆಬಗೆಯ ನಿಲುವು ವಿವಿಧ ದರ್ಶನಗಳದು. ಅವನು ಸಾಕಾರ ಹಾಗೂ ನಿರಾಕಾರ ಎಂಬ ಎರಡು ಬಗೆಯ



ನಿರೂಪಣೆ ವೇದೋಪನಿಷತ್ತುಗಳಲ್ಲೂ ಉಂಟು. ಇದೂ ಬಹುಕಾಲ ದಾರ್ಶನಿಕರನ್ನು ಕಾಡಿದ ದೊಡ್ಡ ಸಮಸ್ಯೆ. ಕೆಲವರದು ಸಗುಣ, ನಿರ್ಗುಣಬ್ರಹ್ಮರ ಕಲ್ಪನೆಯಂತೆ ಸಾಕಾರ, ನಿರಾಕಾರ ಎಂಬ ಇಬ್ಬಗೆಯ ಬ್ರಹ್ಮನ ಕಲ್ಪನೆಯ ಮೂಲಕ ಉತ್ತರಿಸುವ ಚಿಂತನೆ.

ಅವನು ಸಾಕಾರನಾದರೆ ಆಕಾರವಿರುವ ನಮಗೆ ಹೇಗೋ, ಹಾಗೆ ಅವನಿಗೂ ಅಳಿವಿನ ಅಪಾಯ ಉಂಟೇ? ನಿರಾಕಾರನೆಂದಾದರೆ ಸ್ವತಃ ಆಕಾರವಿಲ್ಲದ ಅವನು ಜಗತ್ತನ್ನೆಂತು ರೂಪಿಸಿಯಾನು? ಈ ಶಂಕೆಯಿಂದ ಈ ಸಮಸ್ಯೆ ಮತ್ತಷ್ಟು ಜಟಿಲ.

ಮಧ್ವದರ್ಶನ ಇದಕ್ಕೂ ಸೂಕ್ತ ಉತ್ತರ ನೀಡಿದೆ. ಬ್ರಹ್ಮ ಸಾಕಾರನೂ ಹೌದು; ನಿರಾಕಾರನೂ ಹೌದು. ಪುರುಷಸೂಕ್ತ ಪ್ರತಿಪಾದಿಸಿರುವಂತೆ ಅವನು ಅಪೂರ್ವವಾದ ಅವಯವಗಳನ್ನು ಹೊಂದಿರುವುದರಿಂದ ಸಾಕಾರ. ಆದರೆ ಅವನ ಅವಯವಗಳಾವುವೂ ಪ್ರಕೃತಿನಿರ್ಮಿತವಲ್ಲದ ಕಾರಣದಿಂದ ಇತರರಂತಹ ಆಕಾರ ಅವನದಲ್ಲ. ಅದಕ್ಕೆ ಅವನು ನಿರಾಕಾರ. ಎಂದರೆ ಒಬ್ಬನೇ ಭಗವಂತ ಅಪ್ರಾಕೃತ ಆಕಾರನಾದ್ದರಿಂದ ಸಾಕಾರ; ಪ್ರಾಕೃತಾಕಾರರಹಿತನಾದ್ದರಿಂದ ನಿರಾಕಾರ. ಭಗವದ್ಗೀತೆಯ ವಿಶ್ವರೂಪವರ್ಣನೆ ಕೇಳಿದ ಮೇಲೂ ಅವನ ಸಾಕಾರತ್ವದ ಬಗ್ಗೆ ಸಂಶಯವೇ ಎಂಬುದು ಪೂರ್ಣಪ್ರಜ್ಞರ ಪ್ರಶ್ನೆ.

ಅವನು ಸಾಕಾರನಾದ್ದರಿಂದ ಜಗತ್ತನ್ನು ರೂಪಿಸಬಲ್ಲ; ಪ್ರಾಕೃತಾಕಾರವಿಲ್ಲದ್ದರಿಂದ ನಮ್ಮಂತೆ ಅಳಿವವನೂ ಅಲ್ಲ.

### ಜಗತ್ತು-ಜಗನ್ನಾಥ

ಜಗತ್ತು ಸತ್ಯವೋ, ಮಿಥ್ಯೆಯೋ? ಇದು ಮತ್ತೊಂದು ತಾತ್ತ್ವಿಕಸಮಸ್ಯೆ. ಜಗತ್ತು ದೇಹ ಇರುವವರೆಗೆ ಎಂಬುದು ಚಾರ್ವಾಕವಾದ. ಜಗತ್ತು ಶೂನ್ಯವೆಂಬುದು ಬೌದ್ಧವಾದ. ಜೈನರದು ಸ್ಯಾದ್ವಾದ; ಜಗತ್ತು ಮಿಥ್ಯೆ (ಸದಸದ್ವಿಲಕ್ಷಣ) ಎಂಬುದು ಅದ್ವೈತವಾದ; ಬ್ರಹ್ಮನು ಶರೀರ ಎಂಬುದು ವಿಶಿಷ್ಟಾದ್ವೈತವಾದ. ಬ್ರಹ್ಮನಂತೆ ಜಗತ್ತು ಸಹ ಸತ್ಯ, ಅನಾದಿ ಹಾಗೂ ನಿತ್ಯ. ಬ್ರಹ್ಮ ಎಂದೂ ಬದಲಾಗದ ತತ್ತ್ವವಾದರೆ ಜಗತ್ತು ಬದಲಾವಣೆ ಕಾಣುವ ತತ್ತ್ವ. ಆದರೆ ಇದು ಶೂನ್ಯವೂ ಅಲ್ಲ; ಮಿಥ್ಯೆಯೂ ಅಲ್ಲ. ಜಗತ್ತು ಮಿಥ್ಯೆಯಾದರೆ ಅದರೊಳಗಿನ ನಾವೂ, ಅದರೊಂದಗೆ ನಮ್ಮ ಬದುಕೂ ಸಹ ಸುಳ್ಳಾಗಬೇಕಾಗಬಹುದು. ಅದನ್ನು ರೂಪಿಸುವ ಭಗವಂತನ ಮಹಿಮೆ ಅರ್ಥಹೀನವೆನ್ನಿಸುವುದು. ಜಗತ್ತು ಮಿಥ್ಯೆಯಾದಲ್ಲಿ ಭಗವಂತನು ಜಗನ್ನಾಥನಾಗುವುದು ಮಿಥ್ಯೆಯೇ ಆದೀತು. ಆದ್ದರಿಂದ ಜಗತ್ತು ಸತ್ಯವೇ ಆಗಿದೆ.

### ಜ್ಞಾನ - ಕರ್ಮ

ಮೋಕ್ಷಕ್ಕೆ ಸಾಧನ ಯಾವುದು? ಜ್ಞಾನವೋ, ಕರ್ಮವೋ? ಇದಕ್ಕೂ ದರ್ಶನಗಳಲ್ಲಿ ಒಮ್ಮತವಿಲ್ಲ. ಕೆಲವರಿಗೆ ಜ್ಞಾನ ಮೋಕ್ಷಸಾಧನವಾದರೆ, ಮತ್ತೆ ಕೆಲವರಿಗೆ ಕರ್ಮವೇ

ಮೋಕ್ಷಸಾಧನೆ. ಇನ್ನೂ ಕೆಲವರದು ಜ್ಞಾನಕರ್ಮಸಮುಚ್ಚಯವಾದ. ಅದ್ವೈತದರ್ಶನದ್ದು ಕರ್ಮಸನ್ನ್ಯಾಸವಾದ. ಜ್ಞಾನಕರ್ಮಗಳೆಂದೂ ಕತ್ತಲೆಬೆಳಕುಗಳಂತೆ ಪರಸ್ಪರ ವಿರುದ್ಧವಾದವುಗಳು ಎಂಬುದು ಅದರ ಪರಿಕಲ್ಪನೆ.

ಮಧ್ವದರ್ಶನ ಈ ಸಮಸ್ಯೆಯನ್ನೂ ಪರಿಹರಿಸಿದೆ. ಜ್ಞಾನವೇ ಮೋಕ್ಷಸಾಧನ. ಆದರೆ ಅಂತಹ ಜ್ಞಾನದ ಸಿದ್ಧಿಗೆ ಕರ್ಮ ಅನಿವಾರ್ಯ(**ಕರ್ಮಣಾ ಜ್ಞಾನಮಾತನೋತಿ, ಜ್ಞಾನೇನ ಅಮೃತೀಭವತಿ**). ಕರ್ಮ ತೊರೆಯುವ ಯಾರಿಗೂ ಜ್ಞಾನ ಸಿದ್ಧಿಸದು. ಕರ್ಮವಷ್ಟೇ ಮೋಕ್ಷವನ್ನು ಸಾಧಿಸಿಯೂ ಕೊಡದು. ಕರ್ಮದ ಸಿದ್ಧಿ ತತ್ತ್ವಜ್ಞಾನ; ಮೋಕ್ಷ ತತ್ತ್ವಜ್ಞಾನದ ಸಿದ್ಧಿ.

## ಕರ್ಮಯೋಗ

ಕರ್ಮಾಚರಣೆಯ ಸ್ವರೂಪ ಎಂತಹುದು? ಇದು ಮತ್ತೊಂದು ತಾತ್ತ್ವಿಕಜಿಜ್ಞಾಸೆ. ಕೆಲವರಿಗೆ ಮಾಡಿದ್ದೆಲ್ಲ ಕರ್ಮ. ಮತ್ತೆ ಕೆಲವರಿಗೆ ತೋಚಿದ್ದೆಲ್ಲ ಕರ್ಮವೇ. ಮತ್ತೆ ಕೆಲವರದು ಸಕಾಮಕರ್ಮ. ಕೆಲವರದು ಕೇವಲ ನಿಷ್ಕಾಮಕರ್ಮ. ಮತ್ತೆ ಕೆಲವರದು ಕರ್ಮತ್ಯಾಗ. ಇನ್ನೂ ಕೆಲವರಿಗೆ ಯಜ್ಞಯಾಗಾದಿಗಳು ಮಾತ್ರ ಕರ್ಮ.

ಮಧ್ವದರ್ಶನ ನಿರೂಪಿಸಿದೆ – ಪ್ರತಿಯೊಬ್ಬರ ಪಾಲಿಗೂ ಶಾಸ್ತ್ರಗಳು ವಿಧಿಸಿರುವ ಕರ್ತವ್ಯಕರ್ಮವೇ ನಿಜವಾದ ಕರ್ಮ. ಅಂತಹ ಕರ್ಮಾಚರಣೆ ಕರ್ಮಯೋಗವಾದಾಗ ಮಾತ್ರ ಭಗವಂತನ ಸಾಕ್ಷಾತ್ಕಾರ. ಕರ್ಮಯೋಗವಾಗುವುದು ಫಲದ ಹಂಬಲ ತೊರೆದಾಗ. ಎಲ್ಲವೂ ಭಗವಂತನಿಗೇ ಸೇರಿದ್ದು ಎಂದು ಅವನಿಗೆ ಸಮರ್ಪಿತವಾದಾಗ. ವಿಹಿತಕರ್ಮ ಮಾಡುವುದು ಕರ್ಮಯೋಗದ ಒಂದು ಮುಖವಾದರೆ, ಅದನ್ನು ಭಗವಂತನಿಗೆ ಸಮರ್ಪಿಸುವುದು ಅದರ ಮತ್ತೊಂದು ಮುಖ. ವಿದ್ಯಾರ್ಥಿ ಉತ್ತೀರ್ಣನಾಗಲು ಸರಿಯಾಗಿ ಬರೆದರೆ ಸಾಲದು; ಅದನ್ನು ಮೌಲ್ಯಮಾಪನಕ್ಕಾಗಿ ಒಪ್ಪಿಸಬೇಕು ಸಹ. ಹಾಗೆ ಒಪ್ಪಿಸದಿದ್ದಲ್ಲಿ ಎಂತಹ ಸಮರ್ಪಕ ಉತ್ತರವೂ ಉತ್ತೀರ್ಣನಾಗಲು ಸಹಕಾರಿಯಾಗದು. ಏನನ್ನೂ ಬರೆಯದೆ ಒಪ್ಪಿಸುವುದು ಸಹ ಉತ್ತೀರ್ಣತೆಗೆ ಸಹಕಾರಿಯಲ್ಲ. ಸರಿಯಾಗಿ ಬರೆದೇ ಅದನ್ನು ಒಪ್ಪಿಸಬೇಕು. ಎರಡೂ ಒಂದುಗೂಡಿದಾಗ ಉತ್ತೀರ್ಣನಾಗಲು ಸಾಧ್ಯವಾಗುವಂತೆ ಕರ್ಮಯೋಗದ ಪರಿ.

**‘ಸ್ವವಿಹಿತವೃತ್ತ್ಯಾ ಭಕ್ತ್ಯಾ ಭಗವದಾರಾಧನಮೇವ ಪರಮೋ ಧರ್ಮಸ್ತದ್ವಿರುದ್ಧಃ ಸರ್ವೋಽಪ್ಯಧರ್ಮೋ ಭಗವದಧೀನತ್ವಾತ್ ಸರ್ವಸ್ಯ’.**

## ಭಕ್ತಿ – ಮುಕ್ತಿ

ಮುಕ್ತಿಯ ಖಚಿತಸಾಧನ ಯಾವುದು? ಜ್ಞಾನವೋ, ಕರ್ಮವೋ, ಭಕ್ತಿಯೋ? ಜ್ಞಾನವೇ ಮುಕ್ತಿಸಾಧನವೆಂದು ನಿರೂಪಿಸಿಯಾಯಿತು. ಹಾಗಿದ್ದರೆ ಭಕ್ತಿಯ ಸ್ಥಾನ ಎಂತಹುದು? ಮಧ್ವದರ್ಶನ ಉತ್ತರಿಸಿದೆ.



ಭಕ್ತಿ ಜ್ಞಾನದಿಂದ ಬೇರೆಯಾದುದಲ್ಲ. ಸರಿಯಾದ ಜ್ಞಾನದ ಪರಿಪಕ್ವರೂಪವೇ ಭಕ್ತಿ. ಭಕ್ತಿಯೆಂದರೆ ಜ್ಞಾನಪೂರ್ವಕವಾದ ಪ್ರೇಮ. ಆದ್ದರಿಂದ ಜ್ಞಾನದಿಂದ ಮುಕ್ತಿಯೆಂದರೂ, ಭಕ್ತಿಯಿಂದಲೇ ಮುಕ್ತಿಯೆಂದರ್ಥ. ಜ್ಞಾನ, ಪ್ರೇಮಗಳೆರಡೂ ಭಕ್ತಿಯೆಂಬ ನಾಣ್ಯದ ಎರಡು ಮುಖಗಳು. ಜ್ಞಾನವಿಲ್ಲದ ಭಕ್ತಿ ಕುರುಡುಪ್ರೀತಿ. ಭಕ್ತಿಯಿಲ್ಲದ ಜ್ಞಾನ ಶುಷ್ಕಪಾಂಡಿತ್ಯ. ಆದ್ದರಿಂದ ಜ್ಞಾನಪ್ರೇಮಗಳ ಸಂಗಮವೇ ನಿಜವಾದ ಭಕ್ತಿ. ಅದರಿಂದಲೇ ಸರ್ವರಿಗೂ ಮುಕ್ತಿ:

**ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ ।**
**ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನ ಚಾನ್ಯಥಾ ॥**
(ಮಹಾಭಾರತತಾತ್ಪರ್ಯನಿರ್ಣಯ)

ಇಂತಹ ಭಕ್ತಿಯನ್ನು ಪ್ರತಿಪಾದಿಸುವುದೇ ಸಮಸ್ತಶಾಸ್ತ್ರಗಳ ಗುರಿ :
**‘ವಿಷ್ಣುಭಕ್ತಿವಿಧಾನಾರ್ಥಂ ಸರ್ವಂ ಶಾಸ್ತ್ರಂ ಪ್ರವರ್ತತೇ’**

## ಆಚಾರ-ವಿಚಾರ

ಜ್ಞಾನಕರ್ಮಗಳ ಬಗೆಗಿನ ಜಿಜ್ಞಾಸೆಯಂತೆ ಆಚಾರವಿಚಾರಗಳ ಬಗ್ಗೆಯೂ ಚರ್ಚೆ ನಡೆದಿದೆ. ಯಾವುದು ಮುಖ್ಯ? ಆಚಾರವೋ, ವಿಚಾರವೋ? ಕೆಲವರಿಗೆ ಆಚಾರ ಮುಖ್ಯವಾದರೆ, ಮತ್ತೆ ಕೆಲವರಿಗೆ ವಿಚಾರ ಮುಖ್ಯ. ಕೆಲವರಿಗಂತೂ ಎರಡೂ ಬೇಡ. ಮಧ್ವರು ನುಡಿದಿರುವರು : ಆಚಾರವಿಚಾರಗಳೆರಡೂ ಪಕ್ಷಿಯ ಎರಡು ರೆಕ್ಕೆಗಳಿದ್ದಂತೆ. ಉಪನಿಷತ್ತುಗಳು ತಿಳಿಸಿರುವಂತೆ ಜೀವ ಒಬ್ಬ ಪಕ್ಷಿ. ಮುಕ್ತಿ ಅದರ ಗುರಿ. ಹಾರಾಟ ಅದಕ್ಕೆ ಸಾಧನೆ. ಅದಕ್ಕೆ ಬೇಕಾದ ಎರಡು ರೆಕ್ಕೆಗಳು ಆಚಾರ, ವಿಚಾರಗಳು. ಒಂದು ರೆಕ್ಕೆಯ ಪಕ್ಷಿ ಹಾರಲಾರದು. ಇದರಲ್ಲಿ ಯಾವುದನ್ನು ತೊರೆದರೂ ಸದ್ಗತಿ ಲಭಿಸದು. ಪರಿಶುದ್ಧ ಆಚಾರ, ಪರಿಶುದ್ಧವಿಚಾರಕ್ಕೆ ಪ್ರಮುಖಸಾಧನ. ‘ಕರ್ಮಣಾ ಜ್ಞಾನಮಾತನೋತಿ’ ಎಂಬುದರ ಭಾವವೂ ಇದೇ. ಆಚಾರವಿಲ್ಲದ ವಿಚಾರ ದಾಸರು ಹೇಳುವಂತೆ ‘ಆಚಾರವಿಲ್ಲದ ನಾಲಿಗೆ’ಯಾಗುವುದು. ವಿಚಾರವಿಲ್ಲದ ಆಚಾರ ‘ಮಿಂದರೇನು ಶ್ರೀಶೈಲದ ಕಾಗೆಯಂತೆ’ ಎಂಬಂತೆ ಹಾಸ್ಯಾಸ್ಪದ. ಇವೆರಡರ ಸಮನ್ವಯವೇ ನಿಜವಾದ ಸಾಧನೆ.

## ಇತರ ಸಾಧನೆಗಳು

ಹಾಗಿದ್ದಲ್ಲಿ ದಾನ, ಧರ್ಮ, ತೀರ್ಥಯಾತ್ರೆ, ತಪಸ್ಸು, ವ್ರತ, ಉಪವಾಸಗಳು ಮೊದಲಾದವುಗಳ ಸ್ಥಾನ ಎಂತಹುದು? ಇವುಗಳಲ್ಲಿ ಪ್ರತಿಯೊಂದೂ ತನ್ನಷ್ಟಕ್ಕೇ ಮೋಕ್ಷಸಾಧನ ಎಂಬುದು ಅನೇಕರ ವಾದ. ಮಧ್ವದರ್ಶನ ಎಚ್ಚರಿಸಿದೆ. ಇವು ಯಾವುವೂ ತಮ್ಮಷ್ಟಕ್ಕೇ ಮೋಕ್ಷಕ್ಕೆ ಸಾಧನವಾಗಲಾರವು. ಜ್ಞಾನಭಕ್ತಿಗಳೇ ಮೋಕ್ಷಕ್ಕೆ ಮುಖ್ಯಸಾಧನ. ಅಂತಹ ಜ್ಞಾನಭಕ್ತಿಗಳ ಸಂಪಾದನೆಗೆ ದಾನಧರ್ಮಾದಿಗಳು ನೆರವಾಗುವುವು. ಹಾಗಿಲ್ಲದ ಕೇವಲ ದಾನಧರ್ಮಗಳು ಕೀರ್ತಿಪ್ರತಿಷ್ಠೆಗಳನ್ನು ತಂದುಕೊಡಬಹುದೇ ಹೊರತು ಮುಕ್ತಿಗೆ ಸಾಧನವಾಗಲಾರವು.

## ಉಪವಾಸವ್ರತ

ವ್ರತ ಉಪವಾಸಗಳ ಪರಿಕಲ್ಪನೆ ಭಾರತೀಯಸಂಸ್ಕೃತಿಯ ಅವಿಭಾಜ್ಯ ಅಂಗ. ಅಂತಹ ವ್ರತಗಳ ಪರಿಕಲ್ಪನೆ ಕೇವಲ ಸಾಮಾಜಿಕ ಪ್ರತಿಷ್ಠೆಯ ಮಟ್ಟಕ್ಕೆ ಇಳಿದಿರುವುದು ಇಂದಿನ ದುರಂತ. ಆದರೆ ವ್ರತ ಉಪವಾಸಗಳ ಅನುಷ್ಠಾನ ಜ್ಞಾನಸಿದ್ಧಿಯ ಮಹಾದ್ವಾರ. ಇಂತಹ ವ್ರತಗಳಲ್ಲಿ ಉತ್ಸವವ್ರತಗಳಿಗಿಂತ ಉಪವಾಸವ್ರತಗಳಿಗೆ ಹೆಚ್ಚು ಪ್ರಾಧಾನ್ಯ. ಅನೇಕ ಅವೈದಿಕದರ್ಶನಗಳಲ್ಲಿ ಸಹ ಒಂದಲ್ಲ ಒಂದು ಬಗೆಯ ಉಪವಾಸವ್ರತ ವಿಹಿತವಾಗಿರುವುದು ಗಮನಾರ್ಹ.

ವೈದಿಕಸಂಸ್ಕೃತಿಯಲ್ಲಿ ಅಗ್ರಸ್ಥಾನ ಏಕಾದಶೀವ್ರತಕ್ಕೆ. ಇದು ಒಂದು ಕಾಲಕ್ಕೆ ನಮ್ಮ ದೇಶದಲ್ಲಿ ವ್ಯಾಪಕವಾಗಿ ಅನುಷ್ಠಾನದಲ್ಲಿದ್ದದ್ದು ಚೀನಾಯಾತ್ರಿಕರ ಪ್ರವಾಸಕಥನಗಳಲ್ಲಿನ ಉಲ್ಲೇಖದಿಂದಲೂ ಸ್ಫುಟಪಡುತ್ತದೆ. ಆದರೆ ಕೆಲವು ಪಂಗಡದ ಒಂದು ವಯೋಮಾನದ ಜನರಿಗಷ್ಟೇ ಏಕಾದಶೀವ್ರತ ವಿಹಿತ ಎಂಬ ತಪ್ಪುಕಲ್ಪನೆ ಅನೇಕರದು. ಏಕಾದಶೀವ್ರತದ ಪರಿಕಲ್ಪನೆಯನ್ನು ಒಪ್ಪಿದ ಅನೇಕ ವೈದಿಕದರ್ಶನಗಳು ಸಹ ಈ ತಪ್ಪು ಕಲ್ಪನೆಗೆ ಹೊರತಾಗಲಿಲ್ಲ.

ಆದರೆ ಮಧ್ವದರ್ಶನ ಇದರ ಬಗ್ಗೆ ದೊಡ್ಡ ಕ್ರಾಂತಿಯನ್ನೇ ಮಾಡಿತು. ಏಕಾದಶೀವ್ರತವು ಜಾತಿಮತಗಳನ್ನು ಮೀರಿ ಸರ್ವರಿಗೂ ಕಡ್ಡಾಯವಾದ ಸಾರ್ವಜನಿಕವ್ರತ ಎಂಬುದಾಗಿ ಅದು ಸಾರಿದೆ.

ಏಕಾದಶೀವ್ರತವು ಆಧ್ಯಾತ್ಮಿಕಸಾಧನೆಗೆ ಪ್ರಮುಖ ಅಂಗ ಎಂಬ ವಿಚಾರ ಭಗವದ್ಗೀತೆಯಲ್ಲೂ ಬಂದಿದೆ. ಬೇರೆಲ್ಲ ಔಷಧಿಗಳು ದೇಹವನ್ನು ಶುದ್ಧಿಗೊಳಿಸುವುದು ಹೊರಗಿನಿಂದ. ಆದರೆ ಏಕಾದಶೀವ್ರತ ಶರೀರದೊಳಗಿನ ರೋಗಕ್ಕೆ ಕಾರಣವಾಗುವ ಮುಖ್ಯಕಲ್ಮಷವನ್ನೆಲ್ಲ ನಾಶಪಡಿಸುವ ವಿಶಿಷ್ಟ ಉಪಾಯ. ಎಂದರೆ ಮನಃಶುದ್ಧಿಯಂತೆ ದೇಹಶುದ್ಧಿಯೂ ಇದರಿಂದ ಸಾಧ್ಯ.

ಏಕಾದಶಿಯು ಜಾತಕದಲ್ಲಿನ ಶನಿ ಮೊದಲಾದ ಗ್ರಹಗಳ ದೋಷಗಳನ್ನೂ ಪರಿಹರಿಸುವ ಪ್ರಮುಖಸಾಧನ ಎಂಬ ಅಪೂರ್ವವಿಷಯವನ್ನೂ ಅವರು ಬೆಳಕಿಗೆ ತಂದರು. ಪಾಪ ಪರಿಹರಿಸುವ ಮೂಲಕ ಅದು ನರಕ ತಪ್ಪಿಸುವ ಸಾಧನ ಎಂದೂ ಸಾರಿದರು:

**'ಏಕಾದಶೀಸಮಂ ಕಿಂಚಿತ್ ಪಾಪತ್ರಾಣಂ ನ ವಿದ್ಯತೇ ।**
**ವ್ಯಾಜೇನಾಪಿ ಕೃತಾ ರಾಜನ್ ನ ದರ್ಶಯತಿ ಭಾಸ್ಕರಿಮ್ ॥'**

## ವರ್ಣವ್ಯವಸ್ಥೆ

ವರ್ಣವ್ಯವಸ್ಥೆಯ ಪರಿಕಲ್ಪನೆ ಪುರುಷಸೂಕ್ತ, ಭಗವದ್ಗೀತೆಗಳಲ್ಲೇ ಬಂದಿದೆ. ಅದರ ತಾತ್ತ್ವಿಕವಿವೇಚನೆಯ ಬಗ್ಗೆ ಇತರ ದರ್ಶನಗಳು ಗಮನ ಹರಿಸಲಿಲ್ಲ. ಈ ಬಗ್ಗೆ ಮಧ್ವದರ್ಶನದ ಚಿಂತನೆ ಅಪೂರ್ವವಾದುದು.



ಶ್ರೀಮಧ್ವರು ವರ್ಣವ್ಯವಸ್ಥೆಯ ಬಗ್ಗೆ ನೀಡಿದ ವ್ಯಾಖ್ಯೆ ಆ ಪರಿಕಲ್ಪನೆಯ ಬಗ್ಗೆ ಹೊಸ ಆಯಾಮವನ್ನೇ ನೀಡಿತು. ವರ್ಣವ್ಯವಸ್ಥೆ ದೇಹಕ್ಕೆ ಮಾತ್ರವಲ್ಲದೆ, ಅದರೊಳಗಿನ ಜೀವನ ವ್ಯಕ್ತಿತ್ವವನ್ನೂ ಅವಲಂಬಿಸಿದೆ – '**ಗುಣಕರ್ಮವಿಭಾಗಶಃ**'.

ದೇಹದೊಳಗಿನ ಜೀವನ ಯೋಗ್ಯತೆ ವರ್ಣವನ್ನು ನಿಶ್ಚಯಿಸುವ ಪ್ರಧಾನಸಾಧನ. ಕ್ಷತ್ರಿಯಾದಿದೇಹದಲ್ಲಿ ಬ್ರಾಹ್ಮಣಜೀವ ಇರಬಹುದು. ಬ್ರಾಹ್ಮಣದೇಹದಲ್ಲಿ ಕ್ಷತ್ರಿಯಾದಿಜೀವರೂ ಇರಬಹುದು. ದೇಹಕ್ಕೆ ಸಂಬಂಧಿಸಿದ ವರ್ಣ ಔಪಾಧಿಕ; ಜೀವಕ್ಕೆ ಸಂಬಂಧಿಸಿದ ವರ್ಣ ಸ್ವಾಭಾವಿಕ. ಮಹಾಭಾರತದ ವಿದುರ, ರಾಮಾಯಣದ ಶಬರಿ ಮೊದಲಾದವರು ಇದಕ್ಕೆ ನಿದರ್ಶನ. ಅದು ಮೂಲತಃ ಅವರ ಗುಣಗಳಿಂದ ವೇದ್ಯವಾಗುವ ವಿಚಾರ.

ಕನಕದಾಸರನ್ನು ಶ್ರೀವ್ಯಾಸರಾಜರಂತಹ ಮಧ್ವಸಿದ್ಧಾಂತದ ಧುರೀಣರು ಅಪಾರವಾಗಿ ಗೌರವಿಸಿದ್ದು ಮಧ್ವದರ್ಶನದ ವರ್ಣವ್ಯವಸ್ಥೆಯ ಆಂತರ್ಯಕ್ಕೆ ಹಿಡಿದ ಕನ್ನಡಿ. '**ಆದರಸ್ತತ್ರ ಕರ್ತವ್ಯೋ ಯತ್ರ ಭಕ್ತಿರ್ಹರೇರ್ವರಾ**' – ಭಗವದ್ಭಕ್ತನಾದ ಪ್ರತಿಯೊಬ್ಬನೂ ಆದರಕ್ಕೆ ಪಾತ್ರ ಎಂಬುದು ಮಧ್ವಸಂದೇಶ.

## ಪ್ರಯತ್ನದ ಸ್ಥಾನಮಾನ

ನಮ್ಮ ಸಾಧನೆಯಲ್ಲಿ ದೈವಾನುಗ್ರಹ ಮತ್ತು ಪುರುಷಪ್ರಯತ್ನಗಳ ಹೊಂದಾಣಿಕೆಯೆಂತು?

ಎಲ್ಲವೂ ಭಗವದಧೀನವಾದಲ್ಲಿ ಜೀವನ ಪ್ರಯತ್ನದ ಸ್ಥಾನವೇನು? ಎಂಬ ಪ್ರಶ್ನೆಗಳಿಗೆ ಅವಕಾಶವುಂಟು. ಆಚಾರ್ಯ ಶ್ರೀಮಧ್ವರು ಇದಕ್ಕೆ ನೀಡಿರುವ ಉತ್ತರ ಹೀಗಿದೆ. ಯಾವುದೇ ಕರ್ಮ ಫಲಿಸಲು ಪ್ರಧಾನಕಾರಣಗಳು ಮೂರು : ೧) ಅಪೇಕ್ಷೆ, ೨)ಅರ್ಹತೆ, ೩) ಪ್ರಯತ್ನ. ಇದರಲ್ಲಿ ಯಾವ ಒಂದು ತಪ್ಪಿದರೂ ಕಾರ್ಯ ಫಲಿಸದು. ಅಪೇಕ್ಷೆ ಇದ್ದವರಿಗೆ ಅರ್ಹತೆಯೂ ಇರಬೇಕು. ಅರ್ಹತೆಗೆ ತಕ್ಕಂತೆ ಪ್ರಯತ್ನವೂ ನಡೆಯಬೇಕು. ಆಗಷ್ಟೇ ಕಾರ್ಯದ ಸಿದ್ಧಿ. ಇವುಗಳಲ್ಲಿ ಅಪೇಕ್ಷೆ ಒಳಗಿನದು. ಅರ್ಹತೆ ಈಗಾಗಲೇ ಗಳಿಸಿರುವಂತಹುದು. ಪ್ರಯತ್ನ ಮುಂದೆ ಆಗಲೇಬೇಕಾದ ಮುಖ್ಯಕಾರ್ಯ. ಆದ್ದರಿಂದ ಯಾವುದೇ ಸಾಧನೆಗೂ ನಮ್ಮ ಮುಂದಿನ ಪ್ರಧಾನಸಾಧನೆ ಪ್ರಯತ್ನ ('**ಪ್ರಯತ್ನಮೇಕಮಗ್ರತೋ ನಿಧಾಯ ಭೂತಿಮಾಪ್ನುಮಃ**').

ಅಪೇಕ್ಷೆಗೆ ತಕ್ಕಂತೆ ಅರ್ಹತೆ ಇದ್ದಲ್ಲಿ ಸೂಕ್ತ ಪ್ರಯತ್ನದಿಂದ, ದೈವಾನುಗ್ರಹದಿಂದ ಎಂತಹ ಶ್ರೇಷ್ಠಗುರಿಯನ್ನೂ ಸಾಧಿಸಬಹುದು ಎಂಬುದು ಶ್ರೀಮಧ್ವರ ಸಂದೇಶ.

## ಭಗವತ್ಪ್ರಸಾದ

ಮೋಕ್ಷದ ವರೆಗಿನ ಯಾವುದೇ ಸಿದ್ಧಿಗೂ ಪರಮಸಾಧನ ಭಗವತ್ಪ್ರಸಾದ. ಜ್ಞಾನದಿಂದ ಮೋಕ್ಷ, ಭಕ್ತಿಯಿಂದ ಮೋಕ್ಷ ಎಂಬ ಶಾಸ್ತ್ರದ ಮಾತುಗಳಿಗೂ ಮುಖ್ಯವಾಗಿ ಭಗವತ್ಪ್ರಸಾದದಿಂದಲೇ ಮೋಕ್ಷ ಎಂದು ತಾತ್ಪರ್ಯ. ಜ್ಞಾನಭಕ್ತಿಗಳಿದ್ದಲ್ಲಿ ಭಗವತ್ಪ್ರಸಾದ

ಖಚಿತವೂ ಹೌದು. ಅದರಂತೆ ಯಾವುದೇ ಪ್ರಯತ್ನ ಫಲಿಸಲು ಭಗವದನುಗ್ರಹವೇ ಮೂಲಕಾರಣ. ಬೇರೆ ಎಲ್ಲ ದರ್ಶನಗಳಲ್ಲೂ ಮರೆಯಾಗಿದ್ದ ಈ ಪ್ರಧಾನತತ್ತ್ವವನ್ನು ಮಧ್ವದರ್ಶನ ಹೆಚ್ಚು ಒತ್ತುಕೊಟ್ಟು ನಿರೂಪಿಸಿದೆ:

'ಅಜ್ಞಾನಾಂ ಜ್ಞಾನದೋ ವಿಷ್ಣುರ್ಜ್ಞಾನಿನಾಂ ಮೋಕ್ಷದಶ್ಚ ಸಃ ।
ಆನಂದದಶ್ಚ ಮುಕ್ತಾನಾಂ ಸ ಏವೈಕೋ ಜನಾರ್ದನಃ ॥'

## ಮುಕ್ತಿಯ ಸ್ವರೂಪ

ಮುಕ್ತಿಯ ಸ್ವರೂಪದ ಬಗ್ಗೆ ವಿವಿಧದರ್ಶನಗಳು ಬಗೆಬಗೆಯಲ್ಲಿ ತಮ್ಮ ವಾದಗಳನ್ನು ಮುಂದಿಟ್ಟಿವೆ.

ಚಾರ್ವಾಕರಿಗೆ ಪ್ರತ್ಯೇಕ ಮೋಕ್ಷವೇ ಇಲ್ಲ, ದೇಹನಾಶವೇ ಮೋಕ್ಷ; ಬೌದ್ಧರಿಗೆ 'ಶೂನ್ಯಭಾವ' ಮೋಕ್ಷವಾದರೆ, ಜೈನರಿಗೆ 'ಸತತೋರ್ಧ್ವಗಮನ'ವೇ ಮೋಕ್ಷ; ಸಾಂಖ್ಯರಿಗೆ ಪ್ರಕೃತಿಬಂಧದಿಂದ ವಿಮೋಚನೆ ಮೋಕ್ಷವಾದರೆ, ನೈಯಾಯಿಕವೈಶೇಷಿಕರಿಗೆ ಸುಖದುಃಖಗಳ ನಿವೃತ್ತಿಯೇ ಮೋಕ್ಷ; ಪ್ರಪಂಚಸಂಬಂಧದ ವಿಲಯ ಮೀಮಾಂಸಕರ ಮೋಕ್ಷದ ಪರಿಕಲ್ಪನೆ; ಆತ್ಮೈಕ್ಯ ಅದ್ವೈತದ ಮೋಕ್ಷ; ಆನಂದಸಾಮ್ಯ ವಿಶಿಷ್ಟಾದ್ವೈತದ ಮೋಕ್ಷ. ಆದರೆ ಪ್ರತಿಯೊಬ್ಬ ಸಾತ್ವಿಕಚೇತನನೂ ಸ್ವರೂಪತಃ ಆನಂದಸ್ವರೂಪನಾಗಿದ್ದು ಅಂತಹ ಸಹಜ ಆನಂದದ ಪೂರ್ಣಅಭಿವ್ಯಕ್ತಿಯೇ ಮೋಕ್ಷವೆಂದು ಮೋಕ್ಷದಲ್ಲಿ ಯಥೋಚಿತವಾದ ಆನಂದದ ಪರಿಕಲ್ಪನೆಯನ್ನು ಸಾರಿದ್ದು ದ್ವೈತದರ್ಶನದ ವೈಶಿಷ್ಟ್ಯ. ಆನಂದಾನುಭವಕ್ಕೆ ಅವಕಾಶವೀಯದ ಮೋಕ್ಷ ಎಷ್ಟೇ ಹಿರಿಮೆಯನ್ನು ಹೊಂದಿದ್ದರೂ ಆದರಣೀಯವಾಗಲಾರದು. ಮುಕ್ತಿಯಲ್ಲೂ ಆನಂದತಾರತಮ್ಯವನ್ನು ಸಹ ಇದು ಪ್ರತಿಪಾದಿಸಿದೆ.

## ಭಗವಂತನ ಸರ್ವಶಬ್ದವಾಚ್ಯತ್ವ

ಭಗವಂತನನ್ನು ಯಾವ ಶಬ್ದಗಳು ಹೇಳುವುವು? 'ಯಾವ ಶಬ್ದವೂ ಭಗವಂತನನ್ನು ಹೇಳವು. ಅವನು ಸರ್ವಥಾ ಅವಾಚ್ಯ' ಎಂಬುದು ಕೆಲವುದರ್ಶನಗಳ ನಿಲುವು. ಆದರೆ ಸಕಲಶಬ್ದಗಳೂ ಅವು ವರ್ಣಾತ್ಮಕವಿರಲಿ, ಧ್ವನ್ಯಾತ್ಮಕವಿರಲಿ, ಮುಖ್ಯವಾಗಿ ಸಾರುವುದು ಭಗವಂತನ ಹಿರಿಮೆಯನ್ನೇ ಎಂಬುದು ಮಧ್ವದರ್ಶನದ ನಿಲುವು. ಯಾವುದೇ ಶಾಸ್ತ್ರದ ಯಾವುದೇ ಶಬ್ದ ಸಾರುವುದು ಭಗವಂತನ ಹಿರಿಮೆಯನ್ನು. ಅದರಂತೆ ನದಿ, ಸಮುದ್ರ, ಮೇಘ, ಪ್ರಾಣಿಗಳ ಧ್ವನಿಗಳು ಮೊದಲಾಗಿ ಪ್ರತಿಯೊಂದು ಧ್ವನಿರೂಪದ ಶಬ್ದವೂ ಹಾಡುವುದು ಭಗವಂತನ ಗರಿಮೆಯನ್ನೇ. ಆದೇಕೆ, ಭಗವಂತನನ್ನು ಹೇಳದ, ಭಗವಂತನ ಗುಣಗಾನ ಮಾಡದ ಒಂದು ಶಬ್ದವೂ ಜಗತ್ತಿನಲ್ಲಿಲ್ಲ. ಹರಿಯುವ ನೀರು ಸಮುದ್ರವನ್ನೇ ಸೇರುವಂತೆ, ಉಸುರುವ ಪ್ರತಿಶಬ್ದವೂ ಗುಣಸಮುದ್ರನಾದ ಭಗವಂತನನ್ನೇ ಹಾಡುವವು:

'ಗರ್ಗರಗೋಧಾಪಿಂಗಾದೀನಾಂ ಘೋಷಾ ಅಪಿ ನಾದಮಾತ್ರವ್ಯಂಜಕತ್ವೇನ ಭಗವದ್ವಾಚಕಾ ಏವ' (ಕರ್ಮನಿರ್ಣಯ)



## ಶ್ರೀಮಧ್ವಾಚಾರ್ಯರು ಮತ್ತು ಕನ್ನಡ

ಶ್ರೀಮಧ್ವಾಚಾರ್ಯರೊಬ್ಬರೇ ಕನ್ನಡ ನಾಡು ನೀಡಿದ ವೇದಾಂತ ಮತಾಚಾರ್ಯರು. ದ್ವೈತದರ್ಶನದಂತಹ ಜಾಗತಿಕದರ್ಶನವನ್ನು ಕೊಟ್ಟ ಹಿರಿಮೆ ಕನ್ನಡನಾಡಿನದು. ಶ್ರೀಮಧ್ವರ **ದ್ವಾದಶಸ್ತೋತ್ರ** ತತ್ತ್ವಪ್ರಸಾರದ ಸಮಸ್ತಸಾಧ್ಯತೆಗಳನ್ನು ತೆರೆದಿಟ್ಟ ಮಹೋನ್ನತಕೃತಿ. ಅದರ ಸ್ಫೂರ್ತಿಯ ಹಿನ್ನೆಲೆಯಲ್ಲಿ ಮೂಡಿಬಂದ ಅದ್ವಿತೀಯ ಭಕ್ತಿಸಾಹಿತ್ಯ ಕನ್ನಡದ ಹರಿದಾಸಸಾಹಿತ್ಯ. ಅಧ್ಯಾತ್ಮ, ಸಾಹಿತ್ಯ ಹಾಗೂ ಸಂಗೀತಗಳ ತ್ರಿವೇಣೀಸಂಗಮವಾದ ಹರಿದಾಸರ ಕೃತಿಗಳು ಕನ್ನಡಭಾಷೆಯನ್ನು ಶ್ರೀಮಂತವಾಗಿಸಿದ ಪರಿ ಅನನ್ಯವಾದುದು. ಸ್ವತಃ ಆಚಾರ್ಯ ಶ್ರೀಮಧ್ವರೇ ಗಾನಶಾಸ್ತ್ರಕ್ಕೆ ಸಂಬಂಧಿಸಿದ ಅಪೂರ್ವಕೃತಿಯೊಂದನ್ನು ರಚಿಸಿದ ಸಂಗೀತಾಭಿಜ್ಞರು. ದಾಸಸಾಹಿತ್ಯದ ಮಕುಟಮಣಿಗಳಾದ ಶ್ರೀಪುರಂದರದಾಸರಂತೂ 'ಕರ್ನಾಟಕಸಂಗೀತಪಿತಾಮಹ'ರೆಂದೇ ಪ್ರಸಿದ್ಧರು. ಹರಿದಾಸಸಾಹಿತ್ಯ ಮಧ್ವದರ್ಶನದ ಕನ್ನಡಪಡಿಯಚ್ಚು. ಅದರಿಂದಾಗಿ ಕನ್ನಡ ಸಂಗೀತದೊಂದಿಗೆ ಅತ್ಯಂತ ನಿಕಟಸಂಪರ್ಕವನ್ನು ಪಡೆದುಕೊಂಡಿದೆ. ಸಂಗೀತಪ್ರಿಯರಿಗೆ ಕನ್ನಡ ಅನಿವಾರ್ಯವಾಗುವಂತೆ ಮಾಡಿದ್ದು ಹರಿದಾಸಸಾಹಿತ್ಯದ ಸಾಧನೆ. ಮಧ್ವಮತದ ಅನುಯಾಯಿಗಳು ದೇಶದ ಯಾವುದೇ ಪ್ರಾಂತದಲ್ಲಿದ್ದರೂ ಅವರಿಗೆ ಸ್ವಲ್ಪಮಟ್ಟಿಗೆ ಕನ್ನಡದ ಸಂಪರ್ಕವಿರುವುದು ಹೊಸತಲ್ಲ. ಅದರ ಶ್ರೇಯಸ್ಸು ಹರಿದಾಸಸಾಹಿತ್ಯಕ್ಕೆ ಸಲ್ಲುವಂತೆ, ಅದರ ಮೂಲಪ್ರೇರಕರಾದ ಆಚಾರ್ಯ ಶ್ರೀಮಧ್ವರಿಗೆ ಸಲ್ಲಬೇಕು.

## ನಿತ್ಯನರಕದ ಪರಿಕಲ್ಪನೆ

ಸಾತ್ತ್ವಿಕರಿಗೆ ಮೋಕ್ಷ ಖಚಿತವೆಂದು ಪ್ರತಿಪಾದಿಸಿದ ಮಧ್ವದರ್ಶನ, ತಾಮಸರಿಗೆ ಅಂಧಂತಮಸ್ಸೆಂಬ ನಿತ್ಯನರಕ ಖಚಿತ ಎಂದೂ ಪ್ರತಿಪಾದಿಸಿದೆ. ಇದು ಆ ದರ್ಶನದ ಪರಿಕಲ್ಪನೆ ಎಂಬ ತಪ್ಪು ಕಲ್ಪನೆ ಅನೇಕರದು. ಅಂತಹವರು **'ಅಂಧಂತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ', 'ಅಂಧಂತಮಃ ಪ್ರವಿಶಂತಿ ಯೇಽಸಂಭೂತಿಮುಪಾಸತೇ'** ಎಂಬ ಈಶಾವಾಸ್ಯದ ಮಾತನ್ನು, ಭಾಗವತ ಮೊದಲಾದ ಪುರಾಣಗಳಲ್ಲಿನ ನಿತ್ಯನರಕದ ಪರಿಕಲ್ಪನೆಯನ್ನು ಗಮನಿಸಬೇಕು.

ನಿತ್ಯನರಕದ ಪರಿಕಲ್ಪನೆ ಅತ್ಯಂತ ಅಮಾನವೀಯ ಎಂಬ ಆರೋಪ ಮತ್ತೆ ಕೆಲವರದು. ಇದೂ ಸಹ ತಪ್ಪು ಪರಿಕಲ್ಪನೆಯೇ. ನಿತ್ಯನರಕಕ್ಕೆ ಹೋಗುವ ಜನ ದೈವದ್ವೇಷಿಗಳೂ, ಸಮಾಜದ್ರೋಹಿಗಳೂ ಆದ ಉಗ್ರಗಾಮಿಗಳೇ ಹೊರತು ಸಾಮಾನ್ಯ ಅಪರಾಧಿಗಳಲ್ಲ ಎಂಬುದನ್ನು ಗಮನಿಸಬೇಕು. ಅಂತಹವರಿಗೆ ಆಧುನಿಕ ನ್ಯಾಯಪದ್ಧತಿಯು ಸಹ ಮರಣದಂಡನೆಯಂತಹ ಉಗ್ರಶಿಕ್ಷೆಯನ್ನೇ ವಿಧಿಸುವಾಗ, ಶಾಸ್ತ್ರದ ಆ ನಿತ್ಯನರಕದ ಪರಿಕಲ್ಪನೆಯಲ್ಲಿ ಅಮಾನವೀಯ ಧೋರಣೆಯನ್ನು ಕಾಣಬೇಕಿಲ್ಲ.

ಅರ್ಹತೆಯಿಲ್ಲದವರು ವಿಫಲರಾಗುವರು ಎಂದ ಮಾತ್ರಕ್ಕೆ ಅಂತಹ ಅರ್ಹತೆಯಿಲ್ಲದವನು ತಾನೇ ಎಂದು ಶಂಕಿಸಿ ಕೊರಗುವುದಕ್ಕಿಂತ, ಅರ್ಹತೆ ಸಂಪಾದಿಸಿ, ಸಾಧನೆಯಲ್ಲಿ ಸಫಲನಾಗಲು ಪ್ರಯತ್ನಿಸುವುದು ಈ ತತ್ತ್ವದ ಆಂತರ್ಯ.

## ಸ್ತ್ರೀಯರು ಮತ್ತು ಮಧ್ವಸಿದ್ಧಾಂತ

ಸ್ತ್ರೀಯರ ಬಗ್ಗೆ ಅನೇಕ ಭಾರತೀಯ ದರ್ಶನಗಳ ನಿಲುವು ಅಷ್ಟೇನೂ ಉದಾತ್ತವಾಗಿಲ್ಲ. ಕೆಲವು ದರ್ಶನಗಳಂತೂ ಅವರನ್ನು ಮೋಕ್ಷಕ್ಕೆ ಅನರ್ಹರೆಂದೇ ಸಾರಿಬಿಟ್ಟಿವೆ. ಕೆಲವು ದರ್ಶನಗಳು ಸನ್ಯಾಸಿಗಳಿಗಷ್ಟೇ ಮೋಕ್ಷ. ಸ್ತ್ರೀಯರಿಗೆ ಸನ್ಯಾಸಕ್ಕೆ ಅರ್ಹತೆ ಇಲ್ಲ. ಆದ್ದರಿಂದ ಅವರಿಗೆ ಮೋಕ್ಷ ಅಸಾಧ್ಯ ಎಂದು ವಾದಿಸಿವೆ. ಆದರೆ ಮಧ್ವ ದರ್ಶನ ಸ್ತ್ರೀವರ್ಗವನ್ನು ತುಂಬಾ ಉದಾತ್ತದೃಷ್ಟಿಯಿಂದ ಕಂಡಿದೆ.

ಯೋಗ್ಯ ಗಂಡು ಒಂದು ವಂಶವನ್ನು ಉದ್ಧರಿಸಿದರೆ, ಯೋಗ್ಯ ಹೆಣ್ಣು ತಾನು ಹುಟ್ಟಿದ ಮನೆಯೊಂದಿಗೆ ಸೇರುವ ಮನೆಯನ್ನೂ ಉದ್ಧರಿಸುವ ಹಿರಿಮೆಯವಳು. **'ಕನ್ಯೋದಿತಾ ಬತ ಕುಲದ್ವಯತಾರಿಣೀತಿ'** (ಮಹಾಭಾರತತಾತ್ಪರ್ಯನಿರ್ಣಯ) ಎಂದೇ ಅವರ ವಚನ.

ಪತ್ನಿಯನ್ನಂತೂ ಗೆಳತಿಯಂತೆ ಕಾಣಬೇಕು ಎಂಬುದು ಅವರ ಸಂದೇಶ : **'ಜಾಯಾ ಸಖೇತಿ'**.

ಅದಕ್ಕನುಗುಣವಾಗಿ ತಮ್ಮ ಮಹಾಭಾರತತಾತ್ಪರ್ಯನಿರ್ಣಯಕೃತಿಯಲ್ಲಿ ಕುಂತಿ, ದ್ರೌಪದಿ ಮೊದಲಾದ ಮಹಿಳೆಯರ ಪಾತ್ರಗಳನ್ನು ಅವರು ಚಿತ್ರಿಸಿರುವ ಪರಿ ಅನನ್ಯವಾದುದು. ಇತಿಹಾಸಪುರಾಣಗಳಲ್ಲಿ ಬರುವ ಅನೇಕ ಮಹಾಮಹಿಳೆಯರು, ಉಪನಿಷತ್ತಿನ ಗಾರ್ಗಿ, ಮೈತ್ರೇಯಿಯಂತಹ ಬ್ರಹ್ಮವಾದಿನಿಯರು ಇದಕ್ಕೆ ನಿದರ್ಶನ.

## ಶ್ರೀಮಧ್ವರು ಮತ್ತು ಜನಸೇವೆ

ಜನಸೇವೆಯ ಬಗ್ಗೆ ಹೆಚ್ಚಿನ ದರ್ಶನಗಳದು ಮೌನವೇ. ಬಹುತೇಕ ಭಾರತೀಯ ದರ್ಶನಗಳು ಸಮಾಜವಿಮುಖವೆಂದೇ ಪ್ರಸಿದ್ಧ. ಆದರೆ ಮಧ್ವದರ್ಶನವು ಜನಸೇವೆಗೆ ನೀಡಿರುವ ಮಹತ್ತ್ವ ಅಪಾರ. ಭಗವತ್ಸಾಕ್ಷಾತ್ಕಾರ ಬಯಸುವವನು ಜನಸೇವೆಗೆ ಆದ್ಯತೆ ನೀಡುವುದು ಕಡ್ಡಾಯ. ಅದು ಸರಕಾರಕ್ಕೆ ತೆರುವ ತೆರಿಗೆಯಿದ್ದಂತೆ. ಭಗವಂತ ಅತಿ ಹೆಚ್ಚು ಒಲಿಯುವುದು ಇಂತಹ ಜನಸೇವೆಗೆ ಎಂಬ ಸ್ಪಷ್ಟ ನುಡಿ ಶ್ರೀಮಧ್ವರದು – **'ನಾನಾಜನಸ್ಯ ಶುಶ್ರೂಷಾ ಕರ್ತವ್ಯಾ ಕರವನ್ಮಿತೇಃ । ....ತಸ್ಯ ಪ್ರಾಣ್ಯುಪಕಾರೇಣ ಸಂತುಷ್ಟೋ ಭವತೀಶ್ವರಃ ।'** (ಗೀತಾತಾತ್ಪರ್ಯ). ಅಂತಹ ಜನಸೇವೆಯೆಂದರೆ ಅವರಿಗೆ ಆವಶ್ಯಕವಾದದ್ದನ್ನು ಯಥಾಶಕ್ತಿ ಸಲ್ಲಿಸುವುದು. ಹಾಗೆ ಸಲ್ಲಿಸುವಾಗ ಉತ್ತಮರಲ್ಲಿ ಗೌರವ, ಸಮಾನರಲ್ಲಿ ಪ್ರೀತಿ, ಚಿಕ್ಕವರಲ್ಲಿ ವಾತ್ಸಲ್ಯ ಇರಲೇಬೇಕು.

## ಭಗವಂತನ ಪಾರಮ್ಯ

ಮಧ್ವದರ್ಶನದ ಅತ್ಯಪೂರ್ವವಾದ ಹಿರಿಮೆ ಅದು ಉದ್ದಕ್ಕೂ ಪ್ರತಿಪಾದಿಸುವ ಭಗವತ್ಪಾರಮ್ಯ. ಅನೇಕದರ್ಶನಗಳು ನಾಸ್ತಿಕದರ್ಶನಗಳಾಗಿದ್ದು ಒಂದು ದೊಡ್ಡ ವಿಪರ್ಯಾಸ. ಪೂರ್ವಮೀಮಾಂಸೆಯಂತಹ ವೈದಿಕದರ್ಶನವೂ ಭಗವಂತನನ್ನು ಒಪ್ಪದ



ನಾಸ್ತಿಕದರ್ಶನ ಎಂಬುದು ದೊಡ್ಡ ಅಚ್ಚರಿ. ಇನ್ನು ದೇವರನ್ನು ಒಪ್ಪಿದ ದರ್ಶನಗಳೂ ಸಹ ಅವನನ್ನು ರಾಜಮಹಾರಾಜರಂತಹ ಬಾಹ್ಯನಿಯಾಮಕನೆಂದು ಸಾರಿದವೇ ಹೊರತು ಸಕಲ ಆಗುಹೋಗುಗಳ ಮುಖ್ಯಕಾರಣನೆಂದಲ್ಲ. ಸಾಂಖ್ಯದರ್ಶನದ ಈಶ್ವರ ಪ್ರಕೃತಿಯ ಒಡನಾಡಿ ಮಾತ್ರ. ನ್ಯಾಯವೈಶೇಷಿಕದರ್ಶನದ ಈಶ್ವರ ಒಂದು ಹಂತದ ಸ್ವಾಮಿ ಮಾತ್ರ. ಆದರೆ ಮಧ್ವದರ್ಶನ ನಿರೂಪಿಸಿದ ಭಗವಂತ ಅಣುರೇಣುತೃಣಕಾಷ್ಠ ಪರಿಪೂರ್ಣನಾದ ಸರ್ವಶಕ್ತ, ಸರ್ವವ್ಯಾಪ್ತ ಹಾಗೂ ಸರ್ವಜ್ಞನಾದ ಪೂರ್ಣಪುರುಷ. ಅನಂತಾನಂತಕಲ್ಯಾಣಗುಣ-ಪರಿಪೂರ್ಣ ಹಾಗೂ ಸಕಲದೋಷದೂರ, ಸರ್ವಾಂತರ್ಯಾಮಿ, ಸರ್ವಕಾರ್ಯಪ್ರವರ್ತಕ, ಸರ್ವಕಾರ್ಯನಿವರ್ತಕ; ಜಗತ್ತಿನ ಹುಟ್ಟು, ಸಾವು, ಇರವು, ಮರೆವು, ನಿಯಮನ, ಬೋಧನ, ಬಂಧನ, ಮೋಚನ ಮೊದಲಾದ ಸಕಲಕ್ಕೂ ಕಾರಣನಾದ ಸರ್ವತಂತ್ರಸ್ವತಂತ್ರ. ಭಕ್ತರಿಂದ ಏನನ್ನೂ ಬಯಸದೆ, ಎಲ್ಲವನ್ನೂ ನೀಡುವ ಪರಮಕರುಣಾಳು. ಭಕ್ತನು ಪ್ರಮಾದದಿಂದ ಎಸಗಬಹುದಾದ ಎಂತಹ ಮಹಾಪರಾಧವನ್ನೂ ಮನ್ನಿಸುವ ಕರುಣಾ-ಸಮುದ್ರ. **'ಹರಿರೇವ ಪರಃ ಹರಿರೇವ ಗುರುಃ ಹರಿರೇವ ಜಗತ್ಪಿತೃಮಾತೃಗತಿಃ'**. ಅವನಲ್ಲಿ ದುಃಖ, ಅಜ್ಞಾನಾದಿದೋಷಗಳು ಯಾವಕಾಲಕ್ಕೂ, ಎಷ್ಟುಮಾತ್ರಕ್ಕೂ ಇರುವುದು ಅಸಾಧ್ಯ. ತನ್ನ ಅವತಾರಗಳಿಂದ ಅವನು ಜನರ ಬದುಕಿನ ರೀತಿಯನ್ನು ನಿರ್ದೇಶಿಸಿರುವನು. ಅಸುರರನ್ನು ಬಗ್ಗುಬಡಿದು, ಸಜ್ಜನರನ್ನು ಪೊರೆಯುವನು. ದೇಶತಃ ಕಾಲತಃ ಗುಣತಃ ಅವನಿಗೆಂದೂ ಕೊನೆಯಿರದು. ಬ್ರಹ್ಮಾದಿ ಇತರದೇವತೆಗಳಲ್ಲಿ ಅಂತರ್ಯಾಮಿಯಾಗಿದ್ದು ಅವರವರ ಕಾರ್ಯಗಳನ್ನು ಅವರ ಮೂಲಕ ನಡೆಸಿ, ಅನುಗ್ರಹಿಸುವವನೂ ಅವನೇ. ಅವನನ್ನು **'ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್'** ಎಂದು ಆರಾಧಿಸುವುದೇ ಜೀವನದ ಪರಮಸಾಫಲ್ಯ.

## ಬ್ರಹ್ಮತತ್ತ್ವ - ಪ್ರಾಣತತ್ತ್ವ

ಶ್ರೀಮಧ್ವರು ಸಾರಿದ ಹರಿಸರ್ವೋತ್ತಮತ್ವ ವೇದೋಪನಿಷತ್ತುಗಳು ಸಾರಿದ ಬ್ರಹ್ಮತತ್ತ್ವದ ಪಾರಮ್ಯವೇ ಆಗಿದೆ. ಉಪನಿಷತ್ತುಗಳು ಸಾರಿದ ಮತ್ತೊಂದು ಪ್ರಮುಖತತ್ತ್ವ ಪ್ರಾಣತತ್ತ್ವ. ಬ್ರಹ್ಮತತ್ತ್ವದ ಅನಂತರದ ಸ್ಥಾನ ಪ್ರಾಣತತ್ತ್ವದ್ದು. ಬ್ರಹ್ಮತತ್ತ್ವವೆಂದರೆ ಶ್ರೀಹರಿ. ಪ್ರಾಣತತ್ತ್ವವೆಂದರೆ ಮುಖ್ಯಪ್ರಾಣ (ವಾಯುದೇವ). ಬ್ರಹ್ಮತತ್ತ್ವವನ್ನು ಸರ್ವೋತ್ತಮವೆಂದು ಸಾರಿದ ಮಧ್ವದರ್ಶನ, ಪ್ರಾಣತತ್ತ್ವವನ್ನು ಜೀವೋತ್ತಮ ಎಂದು ಪ್ರತಿಪಾದಿಸಿದೆ. ಹನುಮಂತನಾಗಿ ಪರಬ್ರಹ್ಮನಾದ ಶ್ರೀರಾಮನನ್ನೂ, ಭೀಮಸೇನನಾಗಿ ಅದೇ ಪರಬ್ರಹ್ಮನಾದ ಶ್ರೀಕೃಷ್ಣನನ್ನು ವಿಶೇಷವಾಗಿ ಆರಾಧಿಸಿದ್ದು ಈ ಪ್ರಾಣತತ್ತ್ವವಾದ ಶ್ರೀವಾಯುವೇ. ರಾಮಾಯಣದ ಶ್ರೀರಾಮಹನುಮಂತರು ಮಹಾಭಾರತದ ಶ್ರೀಕೃಷ್ಣಭೀಮಸೇನರು ಈ ಬ್ರಹ್ಮತತ್ತ್ವ, ಪ್ರಾಣತತ್ತ್ವಗಳೇ. ಅಂತಹ ಪ್ರಾಣತತ್ತ್ವದ ಮತ್ತೊಂದು ರೂಪವೇ ಆಚಾರ್ಯ ಶ್ರೀಮಧ್ವರು.

## ಏಕದೈವವಾದ

ಆಸ್ತಿಕವಾದವಾಗಿರುವಂತೆ ಏಕದೈವವಾದವಾಗಿರುವುದೂ ವೈದಿಕದರ್ಶನದ ವೈಶಿಷ್ಟ್ಯ ('ಏಕಂ ಸದ್ವಿಪ್ರಾ ಬಹುಧಾ ವದಂತಿ') .ಆದರೆ ಆ ಏಕದೈವ ಯಾವುದು ಎಂಬುದರ ಬಗ್ಗೆ ಜಿಜ್ಞಾಸೆ ನಡೆಯುತ್ತಲೇ ಬಂದಿದೆ. ಶೈವ, ಶಾಕ್ತ, ಸ್ಕಾಂದ, ಸೌರ, ಗಾಣಪತ ಮೊದಲಾದ ಮತಗಳು ಅಂತಹ ಏಕದೇವವನ್ನಾಗಿ ಕ್ರಮವಾಗಿ ಶಿವಾದಿದೇವತೆಗಳನ್ನು ಗುರುತಿಸಲು ಪ್ರಯತ್ನಿಸಿವೆ. ಹಾಗೆ ಗುರುತಿಸುವ ಅವು ಇತರ ದೇವತೆಗಳ ಸ್ಥಾನಮಾನವನ್ನು ಸಂಪೂರ್ಣವಾಗಿ ಕಡೆಗಣಿಸಿರುವುದು ಒಂದು ದೊಡ್ಡ ವಿಪರ್ಯಾಸ! ಅಷ್ಟು ಮಾತ್ರವಲ್ಲದೆ, ಅವರೆಲ್ಲ ಇತರ ದೇವತೆಗಳನ್ನೂ, ಅವರ ಅನುಯಾಯಿಗಳನ್ನೂ ದ್ವೇಷಿಸುವ ಮಟ್ಟಕ್ಕೂ ಇಳಿದದ್ದು ಒಂದು ದೊಡ್ಡ ದಾರ್ಶನಿಕದುರಂತ.

ಮಧ್ವದರ್ಶನದ ಚಿಂತನ ಅಪೂರ್ವವಾದುದು. ಅದರಂತೆ ವಿಷ್ಣುವೇ ಅಂತಹ ಪರದೇವತೆ. ಅದಕ್ಕೆಂದೇ ಅದು ವೈಷ್ಣವದರ್ಶನ. ಆದರೆ ಹಾಗೆ ವಿಷ್ಣುಸರ್ವೋತ್ತಮತ್ವವನ್ನು ಸಾಧಿಸುವ ಭರದಲ್ಲಿ ಇತರ ಯಾವ ದೇವತೆಗಳನ್ನೂ ಆ ದರ್ಶನ ಕಡೆಗಣಿಸಿಲ್ಲ ಎಂಬುದು ಅದರ ವಿಶೇಷ. ಇತರ ಎಲ್ಲ ದೇವತೆಗಳೂ ಅನಂತರದ ಸ್ಥಾನದಲ್ಲಿ ಕ್ರಮವಾಗಿ ಪೂಜ್ಯರೇ ಸರಿ. ಅವ್ಯಕ್ತಾದಿತತ್ತ್ವಗಳಿಗೆ ಅಭಿಮಾನಿದೇವತೆಗಳಾದ ಅವರು, ವಿಷ್ಣುವಿನ ಆದೇಶಕ್ಕನುಗುಣ-ವಾಗಿ ಜಗತ್ತಿನ ವಿವಿಧಕಾರ್ಯಗಳಲ್ಲಿ ಭಾಗಿಗಳಾಗಿ ಅವನನ್ನು ಸೇವಿಸುವರು. ಅವರ ಅಂತರ್ಯಾಮಿಯಾಗಿದ್ದು ಅವೆಲ್ಲವನ್ನೂ ನಿರ್ವಹಿಸುವವನು ಅವನೇ. ಇತರ ದೇವತೆಗಳನ್ನು ತಾರತಮ್ಯಕ್ರಮದಲ್ಲಿ ಆರಾಧಿಸದ ಯಾರನ್ನೂ ವಿಷ್ಣುವು ಅನುಗ್ರಹಿಸಲಾರ. ಆದ್ದರಿಂದಲೇ ಅವರ ಆರಾಧನೆಯೂ ಯಥೋಚಿತವಾಗಿ ಕಡ್ಡಾಯ ಎಂಬುದು ಆ ದರ್ಶನದ ಸಾರ.

## ದಾಸೋಽಹಂ

ಜೀವ ಈಶರ ಸಂಬಂಧ ಎಂತಹುದು? ಇದು ಎಲ್ಲ ದರ್ಶನಕಾರರನ್ನು ಕಾಡಿದ ಮುಖ್ಯ ಸಮಸ್ಯೆ. ಕೆಲವರು ಜೀವನ ಅಸ್ತಿತ್ವವನ್ನೇ ಒಪ್ಪದವರಾದರೆ ಮತ್ತೆ ಕೆಲವರು ಈಶನ ಅಸ್ತಿತ್ವ-ವನ್ನು ಒಪ್ಪದವರು. ಕೆಲವರಂತೂ ಇಬ್ಬರನ್ನೂ ಒಪ್ಪದವರು. ಕೆಲವರು ಇಬ್ಬರೂ ಒಂದೇ ಎಂದವರು. ಆದರೆ ಮಧ್ವದರ್ಶನ ಅನಂತಜೀವರನ್ನೂ, ಒಬ್ಬ ಈಶನನ್ನೂ ಒಪ್ಪುವ ದರ್ಶನ. ಈಶನು ಸರ್ವಜ್ಞ, ಸರ್ವಶಕ್ತ ಹಾಗೂ ಸರ್ವವ್ಯಾಪ್ತನಾದರೆ ಜೀವನು ಅಲ್ಪಜ್ಞ, ಅಲ್ಪಶಕ್ತ ಹಾಗೂ ಅಣು. ಪ್ರತಿಯೊಬ್ಬ ಜೀವನಲ್ಲೂ ಈಶನು ಅಂತರ್ಯಾಮಿಯಾಗಿದ್ದು ಅವನ ಸಾಧನೆಯನ್ನು ಪ್ರತಿಹಂತದಲ್ಲೂ ನಿರ್ದೇಶಿಸುತ್ತಾ ಸ್ವಾಮಿಯಾಗಿರುವನು. ಜೀವ ಸದಾ ಆ ಈಶನನ್ನು ಅವಲಂಬಿಸಿ ತನ್ನ ಸುಖ ಶಾಂತಿಗಳನ್ನು ಕಾಣಬೇಕಾದವನು. ಜೀವರಿಗಿಂತ ಭಗವಂತ ಅನಂತ ಪಟ್ಟು ಮಿಗಿಲಾದವನು. ಆದ್ದರಿಂದ ಜೀವನು ಸದಾ ತನ್ನನ್ನು ಭಗವಂತನ ದಾಸ (ದಾಸೋಽಹಂ) ಎಂದು ತಿಳಿದು ಆರಾಧಿಸುತ್ತಿರಬೇಕು. ಇಂತಹ ಉಪಾಸನೆಯಿಂದ ಪ್ರಸನ್ನನಾಗುವ ಈಶ ಅವನನ್ನು ಸದಾ ಸಂರಕ್ಷಿಸಿ ಶಾಶ್ವತ ಶಾಂತಿಯನ್ನು ಕರುಣಿಸುವನು. ಈ 'ದಾಸೋಽಹಂ' ತತ್ತ್ವ ಹನುಮಂತನ ಪ್ರತಿಪಾದನೆಯೂ ಆಗಿದೆ: **'ದಾಸೋಽಹಂ ಕೋಸಲೇಂದ್ರಸ್ಯ'**.



ಈ ಮಧ್ವ ದರ್ಶನದ ಕನ್ನಡದ ಪಡಿಯಚ್ಚಾದ ದಾಸಸಾಹಿತ್ಯ ಈ ದಾಸೋಽಹಂ ತತ್ತ್ವದ ಸಂಕೇತವಾಗಿರುವುದು ಗಮನಾರ್ಹ.

## ಬಿಂಬ ಪ್ರತಿಬಿಂಬ ಭಾವ

ನ್ಯಾಯ ವೈಶೇಷಿಕಾದಿದರ್ಶನಗಳ ಈಶ್ವರ ಜೀವರಿಗೆ ರಾಜನಂತೆ ಬಾಹ್ಯನಿಯಾಮಕ ಮಾತ್ರ. ಆದರೆ ದ್ವೈತದರ್ಶನದ ಈಶ ಜೀವರಿಗೆ ಬಾಹ್ಯನಿಯಾಮಕನಂತೆ ಅಂತರ್ನಿಯಾ-ಮಕನೂ ಆಗಿರುವನು. ಈ ತತ್ತ್ವವನ್ನು ಮಧ್ವದರ್ಶನ ಬಿಂಬ-ಪ್ರತಿಬಿಂಬ ಭಾವವೆಂದು ಕರೆದಿದೆ. ಭಗವಂತ ಬಿಂಬನಾದರೆ, ಜೀವರೆಲ್ಲರೂ ಅವನ ಪ್ರತಿಬಿಂಬ. ಪ್ರತಿಬಿಂಬದ ಸಕಲ ಕಾರ್ಯಗಳೂ ಬಿಂಬವನ್ನವಲಂಬಿಸಿರುವಂತೆ ಜೀವರ ಸಕಲ ಪ್ರವೃತ್ತಿಯೂ ಭಗವಂತನನ್ನವ-ಲಂಬಿಸಿವೆ. ಬಿಂಬ ಯಾವುದಕ್ಕೂ ಪ್ರತಿಬಿಂಬವನ್ನವಲಂಬಿಸದಿರುವಂತೆ ಭಗವಂತ ಯಾವು-ದಕ್ಕೂ ಜೀವರನ್ನವಲಂಬಿಸಿಲ್ಲ. ಅವನು ಸರ್ವತಂತ್ರಸ್ವತಂತ್ರ. ಮೀನು ಜಲವನ್ನವಲಂಬಿಸಿಯೇ ಆದರಲ್ಲಿರುವುದು. ಆದರೆ ಮೀನಿಗಾಶ್ರಯವಾದ ಜಲ ಯಾವುದಕ್ಕೂ ಮೀನನ್ನವಲಂಬಿಸಿಲ್ಲ. ಜೀವೇಶ್ವರರ ಸಂಬಂಧ ಇಂತಹುದು. ಜೀವ ಮೀನಿನಂತೆ ಭಗವಂತನನ್ನವಲಂಬಿಸಿರುವನು . ಭಗವಂತ ಜಲದಂತೆ ಜೀವರನ್ನವಲಂಬಿಸದವನು. ಜಲ ಮೀನು, ಬಿಂಬ ಪ್ರತಿಬಿಂಬಗಳು ಬೇರೆ ಬೇರೆಯಾಗಿರುವಂತೆ ಜೀವೇಶರು ಭಿನ್ನರೇ ಆಗಿರುವರು. ಇದು ಮಧ್ವದರ್ಶನದ ದ್ವೈತದ ಪರಿಕಲ್ಪನೆ.

## ಸ್ವರೂಪಾನಂದ

ಸುಖದ ಬಯಕೆಯಿಲ್ಲದ ಚೇತನನೇ ಇಲ್ಲ. ಸುಖಪ್ರಾಪ್ತಿಗೆಂದೇ ಸರ್ವರ ನಿರಂತರ ಸಾಧನೆ. ದುಃಖನಿವೃತ್ತಿ ಈ ಬಯಕೆಯ ಇನ್ನೊಂದು ಮುಖ. ಆದರೆ ಈ ಸುಖವಿರುವುದು ಎಲ್ಲಿ? ಅದು ಪ್ರತಿಯೊಬ್ಬ ಜೀವರ ಸ್ವರೂಪದಲ್ಲೇ ಅಡಗಿದೆ ಎಂಬುದು ಮಧ್ವ ದರ್ಶನದ ಉತ್ತರ:

> **'ಬಲಮಾನಂದ ಓಜಶ್ಚ ಸಹೋ ಜ್ಞಾನಮನಾಕುಲಮ್ ।**
> **ಸ್ವರೂಪಾಣ್ಯೇವ ಜೀವಸ್ಯ ವ್ಯಜ್ಯಂತೇ ಪರಮಾದ್ವಿಭೋಃ' ॥** (ಬ್ರಹ್ಮಸೂತ್ರಭಾಷ್ಯ)

ಹಾಲಿಗೆ ಬಿಳಿಬಣ್ಣ ಸಹಜವಾಗಿರುವಂತೆ ಜೀವರಿಗೆ ಸುಖ ಜ್ಞಾನಾದಿಸದ್ಗುಣಗಳು ಸ್ವಾಭಾ-ವಿಕವಾದವುಗಳು. ಕತ್ತಲಲ್ಲಿ ಹಾಲಿನ ಬಣ್ಣ ಕಾಣಲಾರದು. ಅದು ಕಾಣುವುದು ಬೆಳಕಿನಲ್ಲಿ ಮಾತ್ರ. ಅಜ್ಞಾನದ ಕತ್ತಲಲ್ಲಿ ಜೀವನಿಗೆ ತನ್ನ ಸ್ವರೂಪಾನಂದ ಗೋಚರಿಸದಾಗಿದೆ.ತತ್ತ್ವಜ್ಞಾನದ ಬೆಳಕು ಮೂಡಿದಾಗ ಅದು ಸ್ಫುಟವಾಗಿ ಗೋಚರಿಸುವುದು. ಆ ಬೆಳಕು ನೀಡುವವನು ಭಗವಂತ. ಅದಕ್ಕಾಗಿ **'ತಮಸೋ ಮಾ ಜ್ಯೋತಿರ್ಗಮಯ'** ಎಂದು ಅವನಲ್ಲಿ ಪ್ರಾರ್ಥನೆ. ಇದು ಮಧ್ವದರ್ಶನದ ಸ್ವರೂಪಾನಂದದ ಪರಿಕಲ್ಪನೆ. ಅದರ ಆವಿರ್ಭಾವವೇ ಮುಕ್ತಿ.

ಬಾವಿ ತೋಡುವಾಗ ಮಳೆ ಬಂದು ನೀರು ತುಂಬಿದರೆ ಅದು ಬಾವಿಯ ನೀರಲ್ಲ. ತಗ್ಗಿನಲ್ಲಿ ನಿಂತ ನೀರಷ್ಟೇ. ಅದು ಶುದ್ಧವೂ ಅಲ್ಲ ಶಾಶ್ವತವೂ ಅಲ್ಲ. ಆದರೆ ಬಾವಿ ತೋಡುವ ಕಾರ್ಯ

ಮುಗಿದು ಅತರ್ಜಲ ಚಮ್ಮಿದಾಗ ಅದು ಬಾವಿಯ ನೀರು. ಅದು ಪರಿಶುದ್ಧ ಹಾಗೂ ಶಾಶ್ವತ. ಭೌತಿಕಸುಖ ಹೊರಗಿನಿಂದ ತಗ್ಗಿನಲ್ಲಿ ಬೀಳುವ ನೀರಿನಂತೆ ಪರಿಮಿತ, ನಶ್ವರ ಹಾಗೂ ಹೇಯ. ಆದರೆ ತತ್ತ್ವಜ್ಞಾನದಿಂದ ಮೂಡುವ ಅಂತಃಸುಖ ಶಾಶ್ವತ ಹಾಗೂ ಪೂರ್ಣ.

## ಅನುಭವ (ಆತ್ಮಸಾಕ್ಷಿ)

ಪ್ರತಿಯೊಬ್ಬರ ಅನುಭವ(ಆತ್ಮಸಾಕ್ಷಿ)ಕ್ಕೆ ಮಧ್ವದರ್ಶನ ನೀಡಿದ ಮಹತ್ತ್ವ ಅಪೂರ್ವ-ವಾದುದು. ಆತ್ಮಸಾಕ್ಷಿಗೆ ವಿರುದ್ಧವಾದ ಸಂದೇಶವನ್ನು ವೇದವಾಣಿಯೇ ಆಗಲಿ, ದೇವವಾಣಿಯೇ ಆಗಲಿ ಎಂದೂ ನೀಡದು. ಅದಕ್ಕೆ ಅನುಗುಣವಲ್ಲದ ಸಂದೇಶ ಎಂತಹ ಉನ್ನತಮೂಲದ್ದಾದರೂ ಗ್ರಾಹ್ಯವೆನ್ನಿಸದು ಎಂಬುದು ಅವರ ಘೋಷಣೆ – **‘ನ ಚ ಅನುಭವವಿರೋಧೇ ಆಗಮಸ್ಯ ಪ್ರಾಮಾಣ್ಯಮ್’**.

## ಮಧ್ವಸಂದೇಶ

ಲೌಕಿಕಕಾರ್ಯಗಳನ್ನು ಮಿತಿಗೊಳಿಸಿ, ಅಧ್ಯಾತ್ಮಕಾರ್ಯಕ್ಕೆ ಹೆಚ್ಚು ಅವಕಾಶ ಕಲ್ಪಿಸಿಕೊಳ್ಳ-ಬೇಕು. ಲೌಕಿಕ ಸೀಮಿತ; ಅಧ್ಯಾತ್ಮ ಅಮಿತ. ಧನವು ಸಾಧನವೇ ಹೊರತು ಸಿದ್ಧಿಯಲ್ಲ. ನಿಜವಾದ ಸಿದ್ಧಿ ಜ್ಞಾನಭಕ್ತಿಗಳು ಮಾತ್ರ. ನಿತ್ಯಕರ್ಮಗಳಂತೆ ಸತ್ಯ, ಧರ್ಮಗಳ ಅನುಷ್ಠಾನವೂ ಕಡ್ಡಾಯವಾದುದು. ಸಕಲಪ್ರಾಣಿಗಳಿಗೂ ಹಿತ ಬಯಸಿ ಭಗವತ್ಪ್ರೀತಿಗೆಂದು ಬದುಕುವುದೇ ನಿಜವಾದ ಜೀವನ. ಸತ್ಯಧರ್ಮಗಳು ಮೂಲಭೂತಧರ್ಮಗಳು. ಅವುಗಳನ್ನು ತೊರೆದಾಗ ವರ್ಣಾಶ್ರಮಧರ್ಮಗಳಿಗೆ ಅರ್ಥವಿಲ್ಲದಂತಾಗುವುದು. ಜ್ಞಾನಭಕ್ತಿಗಳೇ ಹಿರಿಮೆಗೆ ಕಾರಣ-ವಾಗುವ ಮೂಲಗುಣಗಳು. ಅವುಗಳಿಲ್ಲದ ಆಚಾರ ಭ್ರಷ್ಟಾಚಾರದ ಮತ್ತೊಂದು ಮುಖ. ಕಾಮ, ಕ್ರೋಧ, ದ್ವೇಷ, ಅಸೂಯೆ ಮೊದಲಾದ ದೋಷಗಳೆಲ್ಲ ವ್ಯಕ್ತಿತ್ವದ ವಿಕಾಸಕ್ಕೆ ಪ್ರಬಲ ಅಡ್ಡಿಗಳು. ಅವಕ್ಕೆ ಬಲಿಯಾಗದೆ, ನಿರ್ಮಲಮನಸ್ಸಿನಿಂದ ಭಗವಂತನನ್ನು ಆರಾಧಿಸಬೇಕು.

## ಅನ್ಯಾಯದ ಸಂಪಾದನೆಯಿಂದ ಭಗವತ್ಪೂಜೆ ಸಲ್ಲದು

ಭಗವಂತ ಗುಣಪೂರ್ಣ, ದೋಷದೂರ. ಧರ್ಮಬೋಧಕ, ಅಧರ್ಮನಾಶಕ. ಅವ-ನೆಂದೂ ಅಧರ್ಮದ ಸಂಪಾದನೆಗೆ ಒಲಿಯಲಾರ. ಧಾರ್ಮಿಕಸಂಪಾದನೆ ಎಷ್ಟೇ ಸ್ವಲ್ಪವಿದ್ದರೂ ಚಿಂತೆ ಬೇಡ. ಇದು ಭಗವಂತನಿಗೆ ಪರಮಪ್ರಿಯ. ಅಧರ್ಮದ ಕೋಟಿಗಟ್ಟಲೆ ಹಣ ಅವನಿಗೆ ಅಪ್ರಿಯ. ಧಾರ್ಮಿಕಸಂಪಾದನೆಯ ಪತ್ರ, ಪುಷ್ಪ, ಫಲಗಳು ಅವನಿಗೆ ಪ್ರಿಯ : **ಧರ್ಮೇಣೇಜ್ಯಾಸಾಧನಾನಿ ಸಾಧಯಿತ್ವಾ ವಿಧಾನತಃ ।**

## ಭಾವಪುಷ್ಪಗಳು

ಭಗವಂತ ಪುಷ್ಪಪ್ರಿಯ. ಎಂದರೆ ಅವನು ಗಿಡಬಳ್ಳಿಗಳ ಹೂಗಳನ್ನಷ್ಟೇ ಮೆಚ್ಚುವವ-ನೆಂದರ್ಥವಲ್ಲ. ಅವು ಇರಲಿ, ಇಲ್ಲದಿರಲಿ; ಆದರೆ ಭಾವಪುಷ್ಪಗಳು ಮಾತ್ರ ಅವನ ಪೂಜೆಗೆ ಬೇಕೇ ಬೇಕು. ‘ಅಹಿಂಸೆ, ಸತ್ಯ, ಇಂದ್ರಿಯನಿಗ್ರಹ, ಸರ್ವಭೂತದಯಾ, ಕ್ಷಮೆ, ಜ್ಞಾನ, ತಪಸ್ಸು ಮತ್ತು ಧ್ಯಾನ’ – ಇವೇ ಆ ಎಂಟು ಭಾವಪುಷ್ಪಗಳು.



## ತ್ಯಾಗ-ಭೋಗ

ಭೋಗದ ಸುಖ ಭೌತಿಕ. ಅದು ಪರಿಮಿತ, ನಶ್ವರ ಹಾಗೂ ಹೇಯ. ತ್ಯಾಗದ ಸುಖ ಆಧ್ಯಾತ್ಮಿಕ. ಅದು ಶಾಶ್ವತ ಹಾಗೂ ಪೂರ್ಣ. ಆದ್ದರಿಂದ ಭೋಗವನ್ನು ತ್ಯಜಿಸಿ ತ್ಯಾಗವನ್ನು ಮೆಚ್ಚಬೇಕೆಂಬುದು ಮಧ್ವಸಂದೇಶ.

ತಿನ್ನುವ ಸುಖ ನಶ್ವರ. ಅದು ಭೌತಿಕ. ಅದು ತಲುಪುವುದು ದೇಹಕ್ಕಷ್ಟೇ. ತಿಳಿಯುವ ಸುಖ ಆಧ್ಯಾತ್ಮಿಕ. ಅದು ಶಾಶ್ವತ. ಅದು ಮುಟ್ಟುವುದು ಜೀವಕ್ಕೆ. ಆದರಿಂದ ತಿನ್ನುವುದಕ್ಕೆ ಮಿತಿಯಿರಲಿ; ತಿಳಿಯುವುದಕ್ಕೆ ಮಿತಿ ಬೇಡ ಎನ್ನುವುದು ಮಧ್ವ ದರ್ಶನ.

ದೇವರು ಎಲ್ಲೆಡೆಯೂ ಇರುವನೂ ಆದರೆ ಅದಾವುದೂ ದೇವರಲ್ಲ. ದೇವರು ಎಲ್ಲರಲ್ಲಿಯೂ ಇರುವನು. ಆದರೆ ಅವನ ಹೊರತು ಬೇರಾರೂ ದೇವರಲ್ಲ. ಅವನು ಸರ್ವಾಂತರ್ಯಾಮಿ. ಎಲ್ಲರಲ್ಲೂ ದೇವರಿರುವುದರಿಂದ ಎಲ್ಲರನ್ನೂ ಗೌರವಿಸಲೇಬೇಕು. ಯಾರನ್ನೇ ಅವಮಾನಿಸಿದರೂ ದೇವರನ್ನೇ ಅವಮಾನಿಸಿದಂತೆ ಸರಿ.

ವಿದ್ಯುದ್ದೀಪ ಬೆಳಗುವುದು ವಿದ್ಯುತ್ತಿರುವುದಕ್ಕೆ ಪುರಾವೆಯಾಗಿರುವಂತೆ, ಜಗತ್ತು ಇರುವುದೇ ದೇವನಿರುವುದಕ್ಕೆ ಸಾಕ್ಷಿ. ವಿದ್ಯುತ್ತಿಲ್ಲದೇ ವಿದ್ಯುದ್ದೀಪ ಬೆಳಗಲಾರದು. ದೇವನಿಲ್ಲದ ಜಗತ್ತು ಬದುಕಲಾರದು.

## ಶ್ರೀಹರಿಯ ಪಾರಮ್ಯ

ಜಡಕ್ಕೆ ಚೈತನ್ಯವಿಲ್ಲ.ಅದಕ್ಕೆ ಚಿಂತನೆ ಸ್ವಯಂಪ್ರವೃತ್ತಿಗಳೂ ಇಲ್ಲ. ಆದ್ದರಿಂದ ಯಾವ ಪ್ರವೃತ್ತಿಗೂ ಜಡ ಮೂಲಕಾರಣವಾಗಲಾರದು. ಕರ್ಮ, ಕಾಲ, ಮೊದಲಾದವುಗಳು ಜಡಪದಾರ್ಥಗಳು. ಅವೆಂದೂ ಜೀವನ ಸುಖದುಃಖಗಳಿಗೆ ಮೂಲಕಾರಣವಾಗಲಾರವು; ಪರಮಚೇತನನಾದ ಶ್ರೀಹರಿಯೇ ಎಲ್ಲ ಆಗುಹೋಗುಗಳಿಗೂ ಮೂಲಕಾರಣ ಎಂದಿದೆ ವೇದವಾಣಿ :

**ನ ಚ ಕರ್ಮವಿಮಾಮಲಕಾಲಗುಣಪ್ರಭೃತೀಶಮಚಿತ್ತನು ತದ್ಧಿ ಯತಃ ।**
**ಚಿದಚಿತ್ತನು ಸರ್ವಮಸೌ ತು ಹರಿರ್ಯಮಯೇದಿತಿ ವೈದಿಕಮಸ್ತಿ ವಚಃ ॥**

ಶ್ರೀಹರಿಯೇ ಪರದೈವ; ಸರ್ವೋತ್ತಮ; ಜಗತ್ತಿನ ತಂದೆ, ತಾಯಿ, ಗುರು, ಬಂಧು ಎಲ್ಲವೂ ಆಗಿರುವನು. ಸರ್ವರಿಗೂ ಅವನೇ ಪರಗತಿ :

**‘ಹರಿರೇವ ಪರೋ ಹರಿರೇವ ಗುರುರ್ಹರಿರೇವ ಜಗತ್ಪಿತೃಮಾತೃಗತಿಃ’**[೧]

*****

೧. ಇದು ‘ತರಂಗ’ ವಾರಪತ್ರಿಕೆಯಲ್ಲಿ ಪ್ರಕಟವಾಗಿದ್ದ ನನ್ನ ಲೇಖನದ ವಿಸ್ತೃತ ರೂಪ.

# ನವಪ್ರಕಾಶಿತ ಮಾಧ್ವಗ್ರಂಥ

**೧) ಶ್ರೀ ಅಕ್ಷೋಭ್ಯವಿಜಯವೈಭವ (ಶ್ರೀಶಂಕರಾಚಾರ್ಯ ಸಂಸ್ಕೃತ ಪಾಠಶಾಲೆ, ಧಾರವಾಡದಿಂದ ಪ್ರಕಟಿತದವಾದ 'ಅಕ್ಷೋಭ್ಯವಿಜಯವಿಭ್ರಮ'ದ ಖಂಡನಗ್ರಂಥ);** ಲೇಖಕರು: ಶ್ರೀರಘುವಿಜಯತೀರ್ಥಶ್ರೀಪಾದಂಗಳವರು, ಶ್ರೀಕೂಡಲೀ ಆರ್ಯ ಅಕ್ಷೋಭ್ಯತೀರ್ಥಸಂಸ್ಥಾನ, ಶ್ರೀಕೂಡಲೀಕ್ಷೇತ್ರ, ಶಿವಮೊಗ್ಗ ಜಿಲ್ಲೆ, ಪುಟಗಳು: ೯+೧೭೬, ಬೆಲೆ: ರೂ. ೧೦೦; ಪ್ರಕಾಶಕರು: ದಿವಾನರು, ಶ್ರೀಕೂಡಲೀ ಆರ್ಯ ಅಕ್ಷೋಭ್ಯತೀರ್ಥ ಸಂಸ್ಥಾನ, ಶ್ರೀಕೂಡಲೀಕ್ಷೇತ್ರ, ಶಿವಮೊಗ್ಗ ಜಿಲ್ಲೆ. ಮೊದಲ ಮುದ್ರಣ: ೨೦೦೯.

ಶ್ರೀಅಕ್ಷೋಭ್ಯತೀರ್ಥರು ವಿದ್ಯಾರಣ್ಯರನ್ನು ಪರಾಭವಗೊಳಿಸಿದ ಸಂಗತಿಯು ಅನೈತಿಹಾಸಿಕ ಎಂಬ ಧಾರವಾಡದ ಶ್ರೀ ಜಿ.ಆರ್. ಪಾಟೀಲ ಅವರ 'ಅಕ್ಷೋಭ್ಯವಿಜಯವಿಭ್ರಮ' ಪುಸ್ತಕದ ಸಮಗ್ರ ವಿಮರ್ಶೆ ಈ 'ಶ್ರೀಅಕ್ಷೋಭ್ಯವಿಜಯವೈಭವ'. ಕೂಡಲೀ ಶ್ರೀಆರ್ಯ ಅಕ್ಷೋಭ್ಯತೀರ್ಥ ಸಂಸ್ಥಾನದ ಪೀಠಾಧೀಶರೇ ಆದ ಪರಮಪೂಜ್ಯ ಶ್ರೀರಘುವಿಜಯತೀರ್ಥಶ್ರೀಪಾದಂಗಳವರು ಈ ವಿಮರ್ಶನ ಗ್ರಂಥದ ಲೇಖಕರು. ತಮ್ಮ ಮಠದ ಮೂಲಪುರುಷರ ವಿಜಯವೈಭವವನ್ನು ಸ್ವತಃ ಆ ಪೀಠದ ಅಧಿಪತಿಗಳಾಗಿರುವ ಶ್ರೀಶ್ರೀಪಾದಂಗಳವರು ಅಧಿಕೃತವಾಗಿ ಸಾರಿರುವುದು ಇದರ ವಿಶೇಷ. ಈ ಮೂಲಕ ಶ್ರೀಗಳು ಪೀಠಾಧಿಪತಿಗಳು ಪ್ರಸಕ್ತಪರಿಸ್ಥಿತಿಯಲ್ಲಿ ಸ್ಪಂದಿಸಬೇಕಾದ ರೀತಿಗೆ ಮಾದರಿಯಾಗಿದ್ದಾರೆ. ಸುದೀರ್ಘಕಾಲದ ಅಧ್ಯಯನದ ಹಿನ್ನಲೆಯಲ್ಲಿ ರೂಪುಗೊಂಡಿರುವ ಈ ಕೃತಿ ಒಂದು ವಿಶಿಷ್ಟ ಬಗೆಯ ವಿಮರ್ಶನಕೃತಿ.

'ಅಕ್ಷೋಭ್ಯವಿಜಯವಿಭ್ರಮ'ದಲ್ಲಿನ ಪ್ರತಿಯೊಂದು ವಿವರವನ್ನೂ ಕೂಲಂಕಷವಾಗಿ ವಿಮರ್ಶಿಸಿರುವುದು ಇದರ ವಿಶೇಷತೆ. ಎಲ್ಲಿಯೂ ಉದ್ವೇಗಕ್ಕೊಳಗಾಗದೆ ವ್ಯಕ್ತಿನಿಂದೆಗೆ ಅವಕಾಶ ನೀಡದೆ ಲವಲವಿಕೆಯ ಶೈಲಿಯಲ್ಲಿ ರಚಿತವಾಗಿರುವ ಈ ಕೃತಿ 'ಅಕ್ಷೋಭ್ಯವಿಜಯವಿಭ್ರಮ'ವು ಕೇವಲ ಪೂರ್ವಗ್ರಹದಿಂದ ರಚಿತವಾದ ಅಪಕ್ವಕೃತಿ ಎಂಬುದನ್ನು ನಿಷ್ಪಕ್ಷಪಾತ ದೃಷ್ಟಿಯ ಜನರಿಗೆ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ.

ಸ್ವವ್ಯಾಹತಿ, ಅಸಂಗತಿ ಮೊದಲಾದ ದೋಷಗಳಿಂದ ಕೂಡಿರುವ ಶ್ರೀ ಜಿ.ಆರ್. ಪಾಟೀಲರ ಕೃತಿ ಸತ್ಯಾನ್ವೇಷಣೆಗೆ ಬಹುದೂರ ಎಂಬುದನ್ನು ಇದು ವಿವಾದಾತೀತವಾಗಿ ದೃಢಪಡಿಸುತ್ತದೆ. ತಮ್ಮ ನಿಲುವಿಗೆ ಆಧಾರವಾಗಿ ಶ್ರೀಗಳು ಅನೇಕ ಪ್ರಮುಖದಾಖಲೆಗಳನ್ನು ಉಲ್ಲೇಖಿಸಿರುವರು. ಶ್ರೀ ಜಿ.ಆರ್. ಪಾಟೀಲರು ವಿಭಿನ್ನ ಲೇಖಕರ ಕೃತಿಗಳಲ್ಲಿನ ಉಲ್ಲೇಖಗಳ ದುರ್ಲಾಭ ಪಡೆಯುವ ಪರಿಯನ್ನು ಶ್ರೀಗಳು ಉದ್ದಕ್ಕೂ ಎತ್ತಿ ತೋರಿಸಿರುವರು. ಶ್ರೀಜಯತೀರ್ಥರು, ಶ್ರೀನಾರಾಯಣಪಂಡಿತರು ಮೊದಲಾದ ದ್ವೈತವೇದಾಂತದ ಮಹಾವಿಭೂತಿಗಳನ್ನು ಲಘುವಾಗಿ ಕಾಣುವ ಶ್ರೀ ಪಾಟೀಲರ ಪ್ರವೃತ್ತಿಯನ್ನು ಶ್ರೀಗಳು ನಿರ್ಭಿಡೆಯಿಂದ ಖಂಡಿಸಿರುವುದು ಅತ್ಯಂತ ಅಭಿನಂದನೀಯ. ಪಾಟೀಲರ ಕೃತಿ ಗೊಂದಲಗಳ ಗೂಡು, ವಿಷಯಾಂತರಗಳ ಕಾಡು, ದುರಾಗ್ರಹದ ಕೂಸು ಎಂಬುದನ್ನು ಶ್ರೀಗಳ ಕೃತಿ ಅನಾವರಣಗೊಳಿಸುತ್ತದೆ. ಪಾಟೀಲರ



ಕೃತಿಯಲ್ಲಿನ ಪುನರುಕ್ತಿಗಳು, ಅಸಂಬದ್ಧತೆ ಮೊದಲಾದವುಗಳು ಇಲ್ಲಿ ಕಾಣಲಾರವು. ಅದ್ವೈತ ಗ್ರಂಥಕಾರರ ಬಗ್ಗೆ ಯಾವುದೇ ಅಪಶಬ್ದಗಳನ್ನು ಪ್ರಯೋಗಿಸದೆ ವಿಷಯನಿಷ್ಠವಾಗಿರುವ ಈ ಸಂಯಮಶೀಲ ಕೃತಿ ನಿಜಕ್ಕೂ ಅಭಿನಂದನಾರ್ಹ.

ಶ್ರೀಗಳು ಇಲ್ಲಿ ನೀಡಿರುವ ದಾಖಲೆಗಳೊಂದಿಗೆ ನಮ್ಮ 'ಶ್ರೀವ್ಯಾಸಮಧ್ವ' ಪತ್ರಿಕೆಯ ಡಿಸೆಂಬರ್ ೨೦೦೮ ಸಂಚಿಕೆಯಲ್ಲಿ (ಪುಟ ೨೦ ರಿಂದ ೨೫) ಉಲ್ಲೇಖಿಸಲ್ಪಟ್ಟಿರುವ ಶ್ರೀಕೂಡಲೀ ಅಕ್ಷೋಭ್ಯತೀರ್ಥ ಮಠದವರೇ ಆದ ಶ್ರೀನಾರಾಯಣತೀರ್ಥರ ಕೈಬರಹದ ದಾಖಲೆ ಹಾಗೂ ವಿದ್ಯಾರಣ್ಯರ ಕಾಲವನ್ನು ೧೩೩೬ರ ಮುನ್ನ ಎಂದು ನಿರೂಪಿಸುವ ಶಾಸನಗಳನ್ನು ಸಹ ಓದುಗರು ಗಮನಿಸಬೇಕು. ಅದರಂತೆ ತಂಜಾವೂರಿನ ಪ್ರತಾಪಸಿಂಹ ಘೋಸಲೆಯ ಆಸ್ಥಾನಕವಿಯಾದ ಕೂನೇರಾತ್ಮಜ ಕವಿಯ 'ಶ್ರೀಸತ್ಯಸಂಧವಿಜಯ' (ತಂಜಾವೂರಿನ ಸರಸ್ವತಿ ಮಹಲ್ ಲೈಬ್ರರಿಯಿಂದ ಪ್ರಕಾಶಿತ-೧೯೫೧) ಎಂಬ ಮರಾಠಿ ಭಾಷೆಯ ಪ್ರಾಚೀನ ಕಾವ್ಯದಲ್ಲೂ ಶ್ರೀಅಕ್ಷೋಭ್ಯತೀರ್ಥರ ವಿದ್ಯಾರಣ್ಯಪರಾಭವದ ಉಲ್ಲೇಖ ಬಂದಿರುವುದನ್ನು ಗಮನಿಸಬೇಕು.

ಒಟ್ಟಾಗಿ ಶ್ರೀಅಕ್ಷೋಭ್ಯತೀರ್ಥರ ವಿದ್ಯಾರಣ್ಯವಿಜಯದ ಬಗೆಗೆ ಇತ್ತೀಚಿನ ದಿನಗಳಲ್ಲಿ 'ಅಕ್ಷೋಭ್ಯವಿಜಯವಿಭ್ರಮ'ದಿಂದ ಉಂಟಾಗಿದ್ದ ಗೊಂದಲವನ್ನು ಶ್ರೀ ಶ್ರೀಪಾದಂಗಳವರ ಈ ಕೃತಿ ಸಮರ್ಥವಾಗಿ ಪರಿಹರಿಸುತ್ತದೆ. ಅಲ್ಲಲ್ಲಿ ಕಂಡುಬರುವ ಪ್ರಮುಖ ಮುದ್ರಣದೋಷಗಳನ್ನು ಮುಂದಿನ ಆವೃತ್ತಿಯಲ್ಲಿ ತಿದ್ದಿಕೊಳ್ಳುವುದು ಸೂಕ್ತ. ಪ್ರತಿಯೊಬ್ಬ ಮಾಧ್ವರು ಹಾಗೂ ಸತ್ಯಪ್ರಿಯರಾದ ಆಸ್ತಿಕಜನರು ಅಗತ್ಯವಾಗಿ ಸಂಗ್ರಹಿಸಲೇಬೇಕಾದ ಉಪಯುಕ್ತಗ್ರಂಥ ಇದಾಗಿದೆ.

*****

## ಶ್ರೀವ್ಯಾಸಮಧ್ವ ಮಾಸಪತ್ರಿಕೆ

ಶ್ರೀವ್ಯಾಸಮಧ್ವ ಮಾಸಪತ್ರಿಕೆಯು ಮಾರ್ಚ್ ೨೦೦೮ ರಿಂದ ಪ್ರಕಾಶನಗೊಳ್ಳುತ್ತಿದೆ. ಶ್ರೀ ಶ್ರೀಪಾದರ ಲೇಖನಗಳು, ಬಗೆಬಗೆಯ ಅಪೂರ್ವ ಚಿತ್ರಗಳು, ಮಾಸದ ವಿಶೇಷಗಳು, ಭಗವದ್ರೂಪಗಳ, ಭಗವದ್ಭಕ್ತರ ಚರಿತ್ರೆಗಳು, ವ್ರತ ಉಪವಾಸಗಳ ವಿವರಗಳು, ಜ್ಞಾನಿಗಳ ಕೃತಿಗಳ ಪರಿಚಯ, ಹರಿದಾಸರ ಕೃತಿಗಳ ಬಗ್ಗೆ ಮಾಹಿತಿ ಮೊದಲಾದ ಅನೇಕ ಉಪಯುಕ್ತ ಲೇಖನಗಳಿಂದಾಗಿ ಈಗಾಗಲೇ ಗಣನೀಯ ಸಂಖ್ಯೆಯ ಓದುಗಬಳಗವನ್ನು ಪತ್ರಿಕೆ ಹೊಂದಿದೆ.

ಅನೇಕ ಆಸ್ತಿಕ ಮಹನೀಯರು ಪೋಷಕರು ಮೊದಲಾದ ರೂಪದಲ್ಲಿ ಪತ್ರಿಕೆಯ ಪ್ರಕಾಶನಕ್ಕೆ ನೆರವಾಗುತ್ತಿದ್ದಾರೆ. ಇನ್ನೂ ಅನೇಕರು ತಮ್ಮಿಂದ ಸಾಧ್ಯವಾದ ರೀತಿಯಲ್ಲಿ ನೆರವು ನೀಡಲು ಮುಂದಾಗಿರುವರು. ಅದಕ್ಕೆ ಸಲಹೆ ಹೀಗಿದೆ:

**ಈಗಾಗಲೇ ಚಂದಾದಾರರಾಗಿರುವವರು ಕನಿಷ್ಠ ಇನ್ನೊಬ್ಬ ಚಂದಾದಾರರನ್ನು ಒದಗಿಸಿಕೊಟ್ಟಲ್ಲಿ ಪತ್ರಿಕೆ ಇನ್ನು ಹೆಚ್ಚು ಉಪಯುಕ್ತರೀತಿಯಲ್ಲಿ ಪ್ರಕಾಶನಗೊಳ್ಳಲು ಸಾಧ್ಯವಾಗುತ್ತದೆ. ಈ ಬಗ್ಗೆ ಉತ್ತಮ ಪ್ರತಿಕ್ರಿಯೆಯನ್ನು ಪತ್ರಿಕೆ ನಿರೀಕ್ಷಿಸುತ್ತದೆ.**

# ಮಾಸದ ವಿಶೇಷಗಳು

## ಪುಷ್ಯಮಾಸ-ಕೃಷ್ಣಪಕ್ಷ( ಮಾಸನಿಯಾಮಕ: ಲಕ್ಷ್ಮೀ-ನಾರಾಯಣ)

೧೧.೦೧.೧೦: **ಸರ್ವರಿಗೂ ಏಕಾದಶೀ (ಷಟ್ತಿಲಾ)**
೧೩.೦೧.೧೦: ಧನುರ್ಮಾಸಸಮಾಪ್ತಿ, ಭೋಗೀ
೧೪.೦೧.೧೦: ದರ್ಶ, ಮಕರಸಂಕ್ರಮಣ
(ಪುಣ್ಯಕಾಲ ಸಂಜೆ ೫.೪೯ರ ನಂತರ)
೧೫.೦೧.೧೦: **ಸೂರ್ಯಗ್ರಹಣ**[೧], ವಿಷ್ಣುಪಂಚಕ

## ಮಾಘಮಾಸ-ಶುಕ್ಲಪಕ್ಷ( ಮಾಸನಿಯಾಮಕ: ಕಮಲಾ-ಮಾಧವ)

೧೬/೧೭.೦೧.೧೦: ವಿಷ್ಣುಪಂಚಕ ವ್ರತ ಇರುವುದಿಲ್ಲ
೨೦.೦೧.೧೦: ವಸಂತಪಂಚಮೀ
೨೨.೦೧.೧೦: ರಥಸಪ್ತಮೀ (ಅರ್ಕಪತ್ರಸ್ನಾನ ಹಾಗೂ ಯಮತರ್ಪಣ)

---

೧. ಪುಷ್ಯ ಅಮಾವಾಸ್ಯೆಯಂದು (೧೫.೦೧.೧೦, ಶುಕ್ರವಾರ) ರಾಹುಗ್ರಸ್ತಸೂರ್ಯಗ್ರಹಣ

ಸ್ಪರ್ಶಕಾಲ: ಮಧ್ಯಾಹ್ನ೧೧.೧೯; ಮಧ್ಯಕಾಲ: ೧.೧೪; ಮೋಕ್ಷಕಾಲ: ೩.೧೦

ಒಟ್ಟು ಪರ್ವಕಾಲ — ೩ ಘಂಟೆ ೫೧ ನಿಮಿಷಗಳು

(ಆಯಾ ಊರಿನವರು ಪಂಚಾಂಗಗಳಿಂದಲೂ, ವೃತ್ತಪತ್ರಿಕೆಗಳಿಂದಲೂ ಸ್ಪರ್ಶಕಾಲ ಮೊದಲಾದವುಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು.)

ವೇಧವಿಚಾರ: ತಾ. ೧೪.೦೧.೧೦ ಗುರುವಾರ ರಾತ್ರಿ ೯.೩೦ಕ್ಕೆ ವೇಧ ಪ್ರಾರಂಭ. ಆದ್ದರಿಂದ ಗುರುವಾರ ರಾತ್ರಿ ೯.೩೦/೧೧.೧೯ರಿಂದ ಮಾರನೆಯ ದಿನ ಗ್ರಹಣ ಮುಕ್ತಾಯವಾಗುವವರೆಗೂ ಭೋಜನ ನಿಷಿದ್ಧ. ಗ್ರಹಣಸ್ಪರ್ಶಕಾಲಕ್ಕೆ ಸ್ಪರ್ಶಸ್ನಾನ; ಗ್ರಹಣಾಂಗವಾಗಿ ಸರ್ವಪಿತೃಗಳಿಗೂ ತರ್ಪಣ, ಮೋಕ್ಷಾನಂತರ ಶುದ್ಧಸ್ನಾನ, ಪಾಕ, ಪೂಜೆ, ಭೋಜನ ಇತ್ಯಾದಿ.

| | |
|---|---|
| **ಶುಭಫಲ** | – ಮೇಷ, ಸಿಂಹ, ವೃಶ್ಚಿಕ, ಮೀನ ರಾಶಿಯವರಿಗೆ |
| **ಮಿಶ್ರಫಲ** | – ವೃಷಭ, ಕರ್ಕ, ಕನ್ಯಾ, ಧನು ರಾಶಿಯವರಿಗೆ |
| **ಅಶುಭಫಲ** | – ಮಿಥುನ, ತುಲಾ, ಮಕರ, ಕುಂಭ ರಾಶಿಯವರಿಗೆ |
| **ವಿಶೇಷ ಅಶುಭ** | – ಉತ್ತರಾಷಾಢನಕ್ಷತ್ರ, ಮಕರರಾಶಿ |

ವಿ.ಸೂ: ಅಶುಭಫಲವಿರುವವರು ಸೂರ್ಯಗ್ರಹಣದ ಅನಿಷ್ಟಪರಿಹಾರಕ್ಕಾಗಿ ಈ ಕೆಳಗಿನ ಶ್ಲೋಕ-ಗಳನ್ನು ಬರೆದು, ಗ್ರಹಣಕಾಲದಲ್ಲಿ ತಮ್ಮಲ್ಲಿಟ್ಟುಕೊಂಡಿದ್ದು ನಂತರ ದಕ್ಷಿಣೆಸಮೇತ ದಾನ ಮಾಡಬೇಕು. ಅನಿಷ್ಟಪರಿಹಾರಕ್ಕೆ ಮುಖ್ಯವಾಗಿ ಗ್ರಹಣಕಾಲದಲ್ಲಿ ವಿಷ್ಣುಸಹಸ್ರನಾಮ, ವಾಯುಸ್ತುತಿ, ದ್ವಾದಶಸ್ತೋತ್ರಗಳ ಪಠಣ ಕರ್ತವ್ಯ; ಸ್ತ್ರೀಯರಿಗೆ ಕೇಶವನಾಮ, ಮಧ್ವನಾಮ, ಹರಿಕಥಾಮೃತಸಾರ ಮೊದಲಾದವುಗಳ ಪಠಣ ವಿಹಿತ; ಯಥಾಶಕ್ತಿ ಸುವರ್ಣ, ರಜತ, ಮುತ್ತು ಮೊದಲಾದವುಗಳ ದಾನವೂ ವಿಹಿತ.(ಗ್ರಹಣಾನುಷ್ಠಾನದ ಬಗ್ಗೆ ಹೆಚ್ಚಿನ ವಿವರಗಳನ್ನು ಕಳೆದ ಸಂಚಿಕೆಯಲ್ಲಿ ಕೊಡಲಾಗಿದೆ)



೨೩.೦೧.೧೦: ಭೀಷ್ಮಾಷ್ಟಮೀ (ಭೀಷ್ಮತರ್ಪಣ)
೨೪.೦೧.೧೦: **ಶ್ರೀಮಧ್ವನವಮೀ**
೨೬.೦೧.೧೦: **ಸರ್ವರಿಗೂ ಏಕಾದಶೀ (ಜಯಾ)**
೨೭.೦೧.೧೦: ಭೀಮದ್ವಾದಶೀ
೩೦.೦೧.೧೦: ವ್ಯಾಸಪೂಜೆ, ಮಾಘಸ್ನಾನಸಮಾಪ್ತಿ, ವಿಷ್ಣುಪಂಚಕವ್ರತ

## ಮಾಘಮಾಸ-ಕೃಷ್ಣಪಕ್ಷ( ಮಾಸನಿಯಾಮಕ: ಕಮಲಾ-ಮಾಧವ)

೦೬.೦೨.೧೦: ಸೀತಾಜಯಂತೀ, ಯಲಗೂರು ಪ್ರಾಣದೇವರ ಉತ್ಸವ
೦೭.೦೨.೧೦: ಅನ್ವಷ್ಟಕಾಶ್ರಾದ್ಧ
೦೯.೦೨.೧೦: **ಸರ್ವರಿಗೂ ಏಕಾದಶೀ (ವಿಜಯಾ)**
೧೨.೦೨.೧೦: ಮಹಾಶಿವರಾತ್ರಿ, ಕುಂಭ ಸಂಕ್ರಮಣ
೧೩.೦೨.೧೦: ದರ್ಶ, ವಿಷ್ಣುಪಂಚಕವ್ರತ
೧೪.೦೨.೧೦: ವಿಷ್ಣುಪಂಚಕವ್ರತ

## ಫಾಲ್ಗುಣಮಾಸ-ಶುಕ್ಲಪಕ್ಷ( ಮಾಸನಿಯಾಮಕ: ಪದ್ಮಾ-ಗೋವಿಂದ)

೧೫.೦೨.೧೦: ಪಯೋವ್ರತ ಆರಂಭ
೨೫.೦೨.೧೦: **ಸರ್ವರಿಗೂ ಏಕಾದಶೀ (ಆಮಲಕೀ)**
೨೬.೦೨.೧೦: ದ್ವಾದಶೀ, ಪಯೋವ್ರತ ಸಮಾಪ್ತಿ
೨೮.೦೨.೧೦: ಹೋಳೀಹುಣ್ಣಿಮೆ, ವಿಷ್ಣುಪಂಚಕವ್ರತ, ಮನ್ವಾದಿ

## ಗುರುಗಳ ಪುಣ್ಯದಿನಗಳು

೧೪.೦೧.೧೦: ಶ್ರೀವಿದ್ಯಾಧೀಶತೀರ್ಥರು (ಉ.ಮ.), ಏಕಚಕ್ರನಗರ
೧೫.೦೧.೧೦: ಶ್ರೀಪುರಂದರದಾಸರ ಪುಣ್ಯದಿನ, ಹಂಪಿ
೧೭.೦೧.೧೦: ಶ್ರೀಸಂಕರ್ಷಣತೀರ್ಥರು (ಶ್ರೀಪಾ.ಮ.), ಶ್ರೀನಗರ
೧೯.೦೧.೧೦: ಶ್ರೀಸುಜಯೀಂದ್ರತೀರ್ಥರು (ರಾ.ಮ.), ಮಂತ್ರಾಲಯ
೨೦.೦೧.೧೦: ಶ್ರೀಶ್ರೀವಲ್ಲಭತೀರ್ಥರು (ಶ್ರೀಪಾ.ಮ.), ಓಡಪ್ಪಳ್ಳಿ
೨೫.೦೧.೧೦: ಶ್ರೀಯೋಗೀಂದ್ರತೀರ್ಥರು (ರಾ.ಮ.), ಶ್ರೀರಂಗ
೨೬.೦೧.೧೦: ಶ್ರೀಸತ್ಯಜ್ಞಾನತೀರ್ಥರು (ಉ.ಮ.), ರಾಜಮಹೇಂದ್ರಿ
೩೦.೦೧.೧೦: ಶ್ರೀಜ್ಞಾನನಿಧಿತೀರ್ಥರು (ಶ್ರೀಪಾ.ಮ.), ಶ್ರೀರಂಗಪಟ್ಟಣ
ಶ್ರೀಯಾದವೇಂದ್ರತೀರ್ಥರು (ರಾ.ಮ.)
೦೪.೦೨.೧೦: ಶ್ರೀಸುಪ್ರಜ್ಞೇಂದ್ರತೀರ್ಥರು (ರಾ.ಮ.), ನಂಜನಗೂಡು

೦೫.೦೨.೧೦: ಶ್ರೀಗುಣನಿಧಿತೀರ್ಥರು (ಶ್ರೀಪಾ.ಮ.), ತಾಯೂರು
೧೧.೦೨.೧೦: ಶ್ರೀವಿಷ್ಣುತೀರ್ಥರು, ಮಾದನೂರು
೧೪.೦೨.೧೦: ಶ್ರೀಶ್ರೀಕಾಂತತೀರ್ಥರು (ಶ್ರೀಪಾ.ಮ.), ನಂಗಲಿ
೨೦.೦೨.೧೦: ಶ್ರೀಸತ್ಯವ್ರತತೀರ್ಥರು (ಉ.ಮ.), ಸಾಂಗಲಿ
೨೫.೦೨.೧೦: ಶ್ರೀಧೀರೇಂದ್ರತೀರ್ಥರು (ರಾ.ಮ.), ಹೊಸರಿತ್ತಿ
೨೮.೦೨.೧೦: ಶ್ರೀಪರಶುರಾಮತೀರ್ಥರು (ಶ್ರೀಪಾ,.ಮ.), ಶ್ರೀರಂಗ
ಶ್ರೀಸುಜ್ಞಾನನಿಧಿತೀರ್ಥರು (ಶ್ರೀಪಾ.ಮ.), ಮುಳಬಾಗಿಲು

*****

## ರಥಸಪ್ತಮೀಸ್ನಾನಮಂತ್ರ (೨೨.೦೧.೧೦)

ಯದ್ಯಜ್ಜನ್ಮಕೃತಂ ಪಾಪಂ ಮಯಾ ಸಪ್ತಸು ಜನ್ಮಸು ।
ತನ್ಮೇ ರೋಗಂ ಚ ಶೋಕಂ ಚ ಮಾಕರೀ ಹಂತು ಸಪ್ತಮೀ ।
ಸಪ್ತಸಪ್ತಿಪ್ರಿಯೇ ದೇವಿ ಸಪ್ತಲೋಕಸುಪೂಜಿತೇ ।
ಸಪ್ತಜನ್ಮಾರ್ಜಿತಂ ಪಾಪಂ ಹರ ಸಪ್ತಮಿ ಸತ್ವರಮ್ ॥
ನೌಮಿ ಸಪ್ತಮಿ ದೇವಿ ತ್ವಾಂ ಸಪ್ತಲೋಕೈಕಮಾತರಮ್ ।
ಸಪ್ತಾರ್ಕಪತ್ರಸ್ನಾನೇನ ಮಮ ಪಾಪಂ ವ್ಯಪೋಹಯ ॥
ಏತಜ್ಜನ್ಮಕೃತಂ ಪಾಪಂ ಯಚ್ಚ ಜನ್ಮಾಂತರಾರ್ಜಿತಮ್ ।
ಮನೋವಾಕ್ಕಾಯಜಂ ಯಚ್ಚ ಜ್ಞಾತಾಜ್ಞಾತೇ ಚ ಯೇ ಪುನಃ ॥

## ಯಮತರ್ಪಣಮಂತ್ರ (ರಥಸಪ್ತಮೀ - ೨೨.೦೧.೧೦)

ಯಮಾಯ ಧರ್ಮರಾಜಾಯ ಮೃತ್ಯವೇ ಚಾಂತಕಾಯ ಚ ।
ವೈವಸ್ವತಾಯ ಕಾಲಾಯ ಸರ್ವಭೂತಕ್ಷಯಾಯ ಚ ॥
ಔದುಂಬರಾಯ ದಧ್ನಾಯ ನೀಲಾಯ ಪರಮೇಷ್ಠಿನೇ ।
ವೃಕೋದರಾಯ ಚಿತ್ರಾಯ ಚಿತ್ರಗುಪ್ತಾತ್ಮನೇ ನಮಃ ॥

## ಭೀಷ್ಮತರ್ಪಣಮಂತ್ರ (ಭೀಷ್ಮಾಷ್ಟಮೀ - ೨೩.೦೧.೧೦)

ಭೀಷ್ಮಃ ಶಾಂತನವೋ ಧೀರಃ ಸತ್ಯವಾದೀ ಜಿತೇಂದ್ರಿಯಃ ।
ಆಭಿರದ್ಭಿರವಾಪ್ನೋತು ಪುತ್ರಪೌತ್ರೋಚಿತಾಂ ಕ್ರಿಯಾಮ್ ॥
ವೈಯಾಘ್ರಪಾದಗೋತ್ರಾಯ ಸಾಂಕೃತ್ಯಪ್ರವರಾಯ ಚ ।
ಅಪುತ್ರಾಯ ದದಾಮ್ಯೇತಜ್ಜಲಂ ಭೀಷ್ಮಾಯ ವರ್ಮಣೇ ॥
ವಸೂನಾಮವತಾರಾಯ ಶಂತನೋರಾತ್ಮಜಾಯ ಚ ।
ಅರ್ಘ್ಯಂ ದದಾಮಿ ಭೀಷ್ಮಾಯ ಆಬಾಲಬ್ರಹ್ಮಚಾರಿಣೇ ॥

ವಿ.ಸೂ.: ಯಮತರ್ಪಣ ಭೀಷ್ಮತರ್ಪಣಗಳನ್ನು ಜೀವತ್ಪಿತೃಕರು ಸಹ ಕೊಡಲೇಬೇಕು.



# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ನಿರ್ದೇಶಕರ ಕಾರ್ಯಕ್ರಮಗಳು

೨೦-೦೧-೧೦ ರಿಂದ ೨೪-೦೧-೧೦, ಸಂಜೆ ೬.೩೦ ಘಂಟೆಗೆ ಪ್ರವಚನ
ವಿಷಯ: **ಸುಮಧ್ವವಿಜಯ**
ಸ್ಥಳ: ಶ್ರೀರಾಘವೇಂದ್ರಮಠ, ಮಲ್ಕಾಜ್‌ಗಿರಿ, ಹೈದರಾಬಾದ್

೨೫-೦೧-೧೦ ರಿಂದ ೨೭-೦೧-೧೦, ಸಂಜೆ ೬.೩೦ ಘಂಟೆಗೆ ಪ್ರವಚನ
ವಿಷಯ: **ಶ್ರೀವಿಜಯದಾಸರು**
ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

೧೩-೦೨-೧೦ ಬೆಳಿಗ್ಗೆ ೧೦.೦೦ ಘಂಟೆಗೆ ಪ್ರವಚನ
ವಿಷಯ: **ದಾಸಸಾಹಿತ್ಯ**
ಸ್ಥಳ: ಶ್ರೀರಾಘವೇಂದ್ರಮಠ, ದೇವಗಿರಿ, ಬೆಂಗಳೂರು

೧೪-೦೨-೧೦ ಮಧ್ಯಾಹ್ನ ೩.೦೦ ಘಂಟೆಗೆ ವಿಚಾರಸಂಕಿರಣ
ಪರಮಪೂಜ್ಯ ಶ್ರೀಪೇಜಾವರಮಠಾಧೀಶರಾದ
ಶ್ರೀವಿಶ್ವೇಶತೀರ್ಥಶ್ರೀಪಾದಂಗಳವರ ದಿವ್ಯ ಉಪಸ್ಥಿತಿಯಲ್ಲಿ
ವಿಷಯ: **ಮಹಾಭಾರತಯುದ್ಧದಲ್ಲಿ ಶ್ರೀಕೃಷ್ಣನ ಪಾತ್ರ**
ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

೧೫-೦೨-೧೦ ರಿಂದ ೨೧-೦೨-೧೦, ಪ್ರಾತಃ ೭.೩೦ ರಿಂದ ೯.೦೦ ಘಂಟೆಯವರೆಗೆ ಪ್ರವಚನ
ವಿಷಯ: **ಶ್ರೀಮದ್ಭಾಗವತ**
ಸ್ಥಳ: ಶ್ರೀಕೃಷ್ಣ ಮುಖ್ಯಪ್ರಾಣ ರಾಘವೇಂದ್ರ ಸನ್ನಿಧಿ, ಧಾರವಾಡ

೧೫-೦೨-೧೦ ರಿಂದ ೨೧-೦೨-೧೦, ಸಂಜೆ ೬.೩೦ ರಿಂದ ೮.೦೦ ಘಂಟೆಯವರೆಗೆ ಪ್ರವಚನ
ವಿಷಯ: **ಮಹಾಭಾರತ**
ಸ್ಥಳ: ಕಲಾಭವನ, ಧಾರವಾಡ

೨೬-೦೨-೧೦ ರಿಂದ ೨೮-೦೨-೧೦ರವರೆಗೆ, ಸಂಜೆ ೬.೦೦ ಘಂಟೆಗೆ
**(ಕನ್ನಡಲಿಪಿಯ) ಸರ್ವಮೂಲಗ್ರಂಥಗಳ ಪ್ರಕಾಶನಕಾರ್ಯಕ್ರಮ**
ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

೨೮-೦೨-೧೦ರವರೆಗೆ, ಸಂಜೆ ೬.೦೦ ಘಂಟೆಗೆ
**(ಕನ್ನಡಲಿಪಿಯ) ಸರ್ವಮೂಲಗ್ರಂಥಗಳ ಬಿಡುಗಡೆ ಕಾರ್ಯಕ್ರಮ**
ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

ಪಾಜಕ, ೮೯/೨೪, ೩ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ, ಬೆಂಗಳೂರು-೧೯.

ದೂರವಾಣಿ: ೦೮೦-೨೬೬೦೨೮೦೨/೨೬೬೧೧೦೧೧

**ಕನ್ನಡ ಲಿಪಿಯಲ್ಲಿ**

**ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತ**

## ಸರ್ವಮೂಲಗ್ರಂಥಗಳ ಬಿಡುಗಡೆ

**ದಿನಾಂಕ: ೨೮-೦೨-೨೦೧೦, ಭಾನುವಾರ ಸಂಜೆ ೬.೦೦ ಘಂಟೆಗೆ**

**ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು**

**ದಿವ್ಯ ಉಪಸ್ಥಿತಿ:**

೧) ಪರಮಪೂಜ್ಯ ಶ್ರೀವಿಶ್ವೇಶತೀರ್ಥಶ್ರೀಪಾದರು,
ಶ್ರೀಪೇಜಾವರಮಠ, ಉಡುಪಿ

೨) ಪರಮಪೂಜ್ಯ ಶ್ರೀವಿದ್ಯಾಧೀಶತೀರ್ಥಶ್ರೀಪಾದರು,
ಶ್ರೀಪಲಿಮಾರುಮಠ, ಉಡುಪಿ

೩) ಪರಮಪೂಜ್ಯ ಶ್ರೀವಿಜ್ಞಾನನಿಧಿತೀರ್ಥಶ್ರೀಪಾದರು,
ಶ್ರೀಶ್ರೀಪಾದರಾಜಮಠ

೪) ಪರಮಪೂಜ್ಯ ಶ್ರೀವಿದ್ಯೇಶತೀರ್ಥಶ್ರೀಪಾದರು, ಶ್ರೀಭಂಡಾರಕೇರಿಮಠ

೫) ಪರಮಪೂಜ್ಯ ಶ್ರೀಕೇಶವನಿಧಿತೀರ್ಥಶ್ರೀಪಾದರು,
ಶ್ರೀಶ್ರೀಪಾದರಾಜಮಠ (ಕಿರಿಯಪಟ್ಟ)

**ಮುಖ್ಯ ಅತಿಥಿಗಳು : ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ**

**ದಿನಾಂಕ ೨೬, ೨೭ ಫೆಬ್ರವರಿ ೨೦೧೦ರಂದು ಸರ್ವಮೂಲಗ್ರಂಥಗಳ ಬಗ್ಗೆ ವಿದ್ವಾಂಸರಿಂದ ವಿಚಾರಗೋಷ್ಠಿಗಳು ನಡೆಯಲಿವೆ; ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು.**

ವಿ.ಸೂ.: ೧) ಸರ್ವಮೂಲಗ್ರಂಥಗಳ ಬಿಡುಗಡೆಯ ದಿನಾಂಕದಲ್ಲಿನ ಬದಲಾವಣೆಯನ್ನು ಗಮನಿಸಲು ವಿನಂತಿ.

೨) ಪ್ರಕಾಶನಪೂರ್ವಬೆಲೆಯನ್ನು ಸಲ್ಲಿಸಿರುವವರು ಅಧಿಕೃತ ರಸೀತಿಯನ್ನು ತೋರಿಸಿ ಅಂದೇ ಗ್ರಂಥಗಳನ್ನು ಪಡೆದುಕೊಳ್ಳಬಹುದು. ಪರ ಊರಿನವರು ನಮ್ಮ ಪ್ರತಿಷ್ಠಾನದ ಕಾರ್ಯಾಲಯವನ್ನು ದಿನಾಂಕ ೨೮.೦೨.೧೦ರ ನಂತರ ಸಂಪರ್ಕಿಸಿ ಪ್ರತಿಗಳನ್ನು ಪಡೆದುಕೊಳ್ಳಬಹುದು.

೩) ರೂ. ೧೫,೦೦೦/- ನೀಡಿ ನಮ್ಮ ಪ್ರತಿಷ್ಠಾನಕ್ಕೆ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಸುಮಧ್ವವಿಜಯ, ಹರಿಕಥಾಮೃತಸಾರ, ಮಹಾಭಾರತತಾತ್ಪರ್ಯನಿರ್ಣಯ ಮೊದಲಾಗಿ ಹಿಂದೆ ಪ್ರಕಾಶಿತವಾದ ಹಾಗೂ ಮುಂದೆ ಪ್ರಕಾಶನಗೊಳ್ಳುವ ಎಲ್ಲ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

Website: www.vyasamadhwa.org  Ph:26602802  Email: info@vyasamadhwa.org

## ಸಂಸ್ಥೆಯ ಪ್ರಮುಖ ಯೋಜನೆಗಳು

೧) ಪ್ರಾಚೀನ ಸಂಸ್ಕೃತ ಹಸ್ತಪ್ರತಿಗ್ರಂಥಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂರಕ್ಷಿಸುವುದು; ಈಗಾಗಲೇ ೨೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ, ತನ್ನ 'ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ'ದಲ್ಲಿ ಸಂರಕ್ಷಿಸುತ್ತಿದೆ.

೨) ಶ್ರೀವ್ಯಾಸಮಧ್ವರ ಕೃತಿಗಳ ಅನುವಾದ ಹಾಗೂ ವಿವರಣೆಗಳನ್ನೊಳಗೊಂಡ ಕೃತಿಗಳನ್ನು, ಹರಿದಾಸಸಾಹಿತ್ಯವನ್ನು ಪ್ರಕಾಶನಪಡಿಸುವುದು (ಐತರೇಯಪ್ರಕಾಶನ); ಈಗಾಗಲೇ ೩೦೦೦೦ ಪುಟಗಳಿಗೂ ಮೀರಿದ ಸಾಹಿತ್ಯವನ್ನು ಸಂಸ್ಕೃತ, ಕನ್ನಡ, ಆಂಗ್ಲ ಹಾಗೂ ತೆಲುಗು ಭಾಷೆಗಳಲ್ಲಿ ಪ್ರಕಾಶನ ಪಡಿಸಲಾಗಿದೆ.

೩) 'ಶ್ರೀರಾಘವೇಂದ್ರ ವೇದಾಂತಪಾಠಶಾಲಾ' ಎಂಬ ಸಂಸ್ಥೆಯನ್ನೂ ಪ್ರಾರಂಭಿಸಿ, ಪ್ರತಿನಿತ್ಯ ಸರ್ವಮೂಲಗ್ರಂಥಗಳ ಪಾಠ-ಪ್ರವಚನ, ಸ್ತೋತ್ರಪಾಠ ಇತ್ಯಾದಿಗಳನ್ನು ಅನೇಕ ವರ್ಷಗಳಿಂದ ನಿರಂತರ ನಡೆಸುತ್ತಾ ಬಂದಿದೆ.

೪) 'ಶ್ರೀವ್ಯಾಸಮಧ್ವಸೇವಾಪುರಸ್ಕಾರ ಯೋಜನೆ': ಶ್ರೀವ್ಯಾಸಮಧ್ವರ ಸೇವೆ ಸಲ್ಲಿಸಿದ ವೃದ್ಧ ವಿದ್ವಾಂಸರಿಗೆ ಪ್ರತಿತಿಂಗಳು ಮಾಸಿಕ ಗೌರವಧನವನ್ನು ಆಜೀವ ಸಲ್ಲಿಸುವುದು; ಪ್ರಕೃತ ೨೬ ವಿದ್ವಾಂಸರಿಗೆ ರೂ. ೧೦೦೦/-ಗಳನ್ನು ಸಲ್ಲಿಸುತ್ತಿದೆ.

೫) ಶ್ರೀವ್ಯಾಸಮಧ್ವರ ಕೃತಿಗಳನ್ನು ಅಧ್ಯಯನ ಮಾಡುತ್ತ, ಲೌಕಿಕ ವಿದ್ಯೆಯ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕಸಹಾಯ ನೀಡುವುದು.

೬) ಪ್ರತಿವರ್ಷ ಒಬ್ಬ ಶ್ರೇಷ್ಠ ಹಿರಿಯವಿದ್ವಾಂಸರಿಗೆ ರೂ. ೧೨,೦೦೦/-ಗಳ 'ಶ್ರೀವ್ಯಾಸಮಧ್ವ-ಸೇವಾಪ್ರಶಸ್ತಿ'.

೭) ಮಹಾಭಾರತತಾತ್ಪರ್ಯನಿರ್ಣಯವನ್ನು ಪೂರ್ಣಕಂಠಪಾಠ ಒಪ್ಪಿಸುವ ವಿದ್ಯಾರ್ಥಿಗೆ ರೂ.೨೫,೦೦೦/- ಪ್ರಶಸ್ತಿ, ಸುಮಧ್ವವಿಜಯವನ್ನು ಒಪ್ಪಿಸುವ ವಿದ್ಯಾರ್ಥಿಗೆ 'ಶ್ರೀಮಧ್ವಪ್ರಿಯ' ಪ್ರಶಸ್ತಿ, ಹಾಗೂ ಹರಿಕಥಾಮೃತಸಾರವನ್ನು ಒಪ್ಪಿಸುವ ವಿದ್ಯಾರ್ಥಿನಿಗೆ 'ದಾಸಪ್ರಿಯ' ಪ್ರಶಸ್ತಿಪ್ರದಾನ.

೮) ಶ್ರೀವ್ಯಾಸಮಧ್ವರನ್ನು ಹಾಗೂ ಅವರ ಕೃತಿಗಳನ್ನು ಕುರಿತ ಸಂಶೋಧನಕೃತಿಗಳ ಪ್ರಕಾಶನಕ್ಕೆ ಆರ್ಥಿಕ ಸಹಾಯ.

೯) ಯುವಜನತೆಯಲ್ಲಿ ತಾತ್ತ್ವಿಕಜಾಗೃತಿಯನ್ನು ಉಂಟು ಮಾಡಲು ಕಾಲಕಾಲಕ್ಕೆ ಶ್ರೀವ್ಯಾಸಮಧ್ವರ ತತ್ತ್ವಗಳ ಬಗ್ಗೆ ಕಾರ್ಯಾಗಾರಗಳನ್ನು, ವಿಚಾರಸಂಕಿರಣಗಳನ್ನು ಮತ್ತು ವಿದ್ವದ್ಗೋಷ್ಠಿಗಳನ್ನು ಏರ್ಪಡಿಸುವುದು.

ಅಪಾರವೆಚ್ಚದ ಈ ಎಲ್ಲ ಯೋಜನೆಗಳಿಗಾಗಿ ಪ್ರತಿಷ್ಠಾನವು ಯಾವುದೇ ರೀತಿಯ ದೇಣಿಗೆಯನ್ನು ಆಸ್ತಿಕಜನತೆಯಿಂದ ಸ್ವಾಗತಿಸುತ್ತದೆ. ರೂ.೧೫,೦೦೦/- ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆಯನ್ನು ನೀಡುವವರಿಗೆ ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಹರಿಕಥಾಮೃತಸಾರಗಳ ಅನುವಾದಗಳು ಸೇರಿದಂತೆ ಪ್ರತಿಷ್ಠಾನದ ಪ್ರಕಾಶನದಲ್ಲಿ ಲಭ್ಯವಿರುವ ಎಲ್ಲಾ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

ವಿಶೇಷ ಸೂಚನೆ : ದೇಣಿಗೆಗಳನ್ನು ''ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)'', ಬೆಂಗಳೂರು - ಈ ಹೆಸರಿಗೆ ನಗದು/ಚೆಕ್/ಡ್ರಾಫ್ಟ್ ಮೂಲಕ ಸಲ್ಲಿಸಿ ಅಧಿಕೃತ ರಸೀತಿಯನ್ನು ಪಡೆಯತಕ್ಕದ್ದು.